ಕಾವೇರಿ 6ನೇ ಹಂತದ ಯೋಜನೆಯೂ ಸೇರಿದಂತೆ ಜಲಮಂಡಳಿಯ ಎಲ್ಲಾ ಯೋಜನೆಗಳಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡುವುದಾಗಿ ಭರವಸೆ ನೀಡಿದರು. ಜೈಕಾ ಇಂಡಿಯಾ ಕಚೇರಿಯ ಮುಖ್ಯ ಪ್ರತಿನಿಧಿ ಟೇಕುಚಿ ಟಕುರೋ, ಭಾರತದಲ್ಲಿ ಜಪಾನ್‌ನ ಕಾನ್ಸಲ್ ಜನರಲ್ ಟ್ಸುಟೋಮು ಅವರು ಮಾತನಾಡಿದರು.

ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಪ್ರಾಸ್ತಾವಿಕ ಮಾತನಾಡಿದರು. ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಅಧ್ಯಕ್ಷತೆ ವಹಿಸಿದ್ದರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ ಜಾರ್ಜ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿ-ಸ್, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ವಿಧಾನ ಪರಿಷತ್ ಸದಸ್ಯ ಎಸ್.ರವಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರಗಳು

ಕಾವೇರಿ 5ನೇ ಹಂತದ ಯೋಜನೆ ನಮ್ಮದು: ಆರ್.ಅಶೋಕ

ಬೆಂಗಳೂರು: 'ಪೂಜೆ ನಂತರ ಬಂದು ಮಂಗಳಾರತಿ ಪಡೆಯುವಂತೆ ಕಾವೇರಿ 5ನೇ ಹಂತದ ಕಾಮಗಾರಿ ಮುಗಿದ ಬಳಿಕ ಕಾಂಗ್ರೆಸ್‌ನವರು ಹೆಸರು ಪಡೆದುಕೊಳ್ಳುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಬುಧವಾರ ದೂರಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಯೋಜನೆ ರೂಪಿಸಿದ್ದು, ಬಿಜೆಪಿ ಎಂದು ಗೊತ್ತಿದ್ದರೂ, ನಾವೇ ಮಾಡಿದ್ದೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜಂಭ ಕೊಚ್ಚಿಕೊಳ್ಳುತ್ತಿದ್ದಾರೆ. 2018ರ ಜನವರಿ 24ರಂದು ಯೋಜನೆಗೆ ₹5,500 ಕೋಟಿ ಸಾಲ ಪಡೆಯಲು ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಒಪ್ಪಂದಕ್ಕೆ ಸಹಿ ಹಾಕಿದ್ದರು. ಆಗ ಕಾಮಗಾರಿಗೆ 90 ತಿಂಗಳ ಗಡುವು ವಿಧಿಸಲಾಗಿತ್ತು' ಎಂದರು.

'ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಕಾಮಗಾರಿ ಶೇ 80ರಷ್ಟು ಮುಗಿದಿತ್ತು. ನಾನು ಬೆಂಗಳೂರು ಉಸ್ತುವಾರಿ ಸಚಿವನಾಗಿದ್ದಾಗ 110 ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆ ಮಾಡಿಸಿದ್ದೆ' ಎಂದರು.

ಈಡುಗಾಯಿ ಪ್ರಹಸನ

ಕಾರ್ಯಕ್ರಮಕ್ಕೂ ಮುನ್ನ, ವೇದಿಕೆಯ ಎದುರು ಈಡುಗಾಯಿ ಒಡೆಯಲು ಡಿಸಿಎಂ ಡಿ.ಕೆ. ಶಿವಕುಮಾರ್ ಸಿದ್ಧರಾದರು. ಸಿಎಂ ಆದಿಯಾಗಿ ವೇದಿಕೆಯಲ್ಲಿದ್ದವರೆಲ್ಲ ಅವರಿಗೆ ಸಾಥ್ ನೀಡಿದರು. ಸಭಾಂಗಣದಲ್ಲಿದ್ದವರೆಲ್ಲ 'ಹೋ' ಎನ್ನುತ್ತಾ ಎದ್ದು ನಿಂತರು. ಶಿವಕುಮಾರ್, ಒಮ್ಮೆ ಕಾಯಿಯನ್ನು ಕಲ್ಲಿಗೆ ಒಡೆದರು. ಕಾಯಿ ಒಡೆಯಲಿಲ್ಲ. ಎರಡನೇ ಬಾರಿಗೂ ಆಗಲಿಲ್ಲ. ಮೂರನೇ ಪ್ರಯತ್ನದಲ್ಲಿ ಈಡುಗಾಯಿ ಚೂರಾಯಿತು.. ಸಭೆಯಲ್ಲಿದ್ದರೆಲ್ಲ 'ಓಹ್...' ಎಂದು ಕೂಗಿದರು !

ಸುದ್ದಿ 2 ನಿಮಿಷ

ಕನ್ನಡ ಪುಸ್ತಕ ಹಬ್ಬ ಅ. 26ರಿಂದ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯದ ವತಿಯಿಂದ ಅಕ್ಟೋಬರ್ 26ರಿಂದ ಡಿಸೆಂಬರ್ 1ರವರೆಗೆ ಕೆಂಪೇಗೌಡ ನಗರದಲ್ಲಿರುವ ರಾಷ್ಟ್ರೋತ್ಥಾನ ಪರಿಷತ್‌ನ ಕೇಶವಶಿಲ್ಪ ಸಭಾಂಗಣದಲ್ಲಿ 'ಕನ್ನಡ ಪುಸ್ತಕ ಹಬ್ಬ' ಆಯೋಜಿಸಲಾಗಿದೆ.

ಅ.26ರ ಬೆಳಿಗ್ಗೆ 10ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ರಾಷ್ಟ್ರೋತ್ಥಾನ ಪರಿಷತ್‌ನವರೆಗೆ ಭುವನೇಶ್ವರಿ ದೇವಿಯ ಶೋಭಾಯಾತ್ರೆ ನಡೆಯಲಿದೆ. ಬೆಳಿಗ್ಗೆ 11ಕ್ಕೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು 'ಕನ್ನಡ ಪುಸ್ತಕ ಹಬ್ಬ'ವನ್ನು ಉದ್ಘಾಟಿಸಲಿದ್ದಾರೆ.

'ಪುಸ್ತಕ ಹಬ್ಬದಲ್ಲಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವಿರುತ್ತದೆ. ವಿವಿಧ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳು ನಡೆಯಲಿವೆ. ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟಣೆಗಳ ಜೊತೆಗೆ, ಕನ್ನಡದ ಪ್ರಮುಖ ಲೇಖಕರ ಕೃತಿಗಳೂ ರಿಯಾಯಿತಿ ದರದಲ್ಲಿ ಸಿಗಲಿವೆ. ವಿದ್ಯಾರ್ಥಿಗಳಿಗಾಗಿ ಕೆಲವು ಸ್ಪರ್ಧೆಗಳನ್ನು ಆಯೋಜಿಸಲಾಗುವುದು' ಎಂದು ತಿಳಿಸಿದೆ.

ವಿಧಾನಸೌಧ, ವಿಕಾಸಸೌಧ ಕನ್ನಡಮಯವಾಗಲಿ –ಬಿಳಿಮಲೆ

ಬೆಂಗಳೂರು: ವಿಧಾನಸೌಧ, ವಿಕಾಸಸೌಧವನ್ನು ಕನ್ನಡದ ಅಸ್ಮಿತೆಯ ಕೇಂದ್ರಗಳಾಗಿಸಿ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಬುಧವಾರ ಭೇಟಿ ಮಾಡಿ, ಅವರು ಚರ್ಚಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಜರಿದ್ದರು.

'ವಿಧಾನಸೌಧ, ವಿಕಾಸಸೌಧದ ಪಡಸಾಲೆಗಳು, ವಿಧಾನಮಂಡಲದ ಸಭಾಂಗಣಗಳು, ಸಚಿವರು ಮತ್ತು ಅಧಿಕಾರಿಗಳ ಕಚೇರಿಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಪರವಾದ ಘೋಷಣೆಯ ಫಲಕಗಳನ್ನು ಅಳವಡಿಸಬೇಕು' ಎಂದು ಒತ್ತಾಯಿಸಿದರು.

'ವಿಧಾನಸೌಧ ಹಾಗೂ ವಿಕಾಸಸೌಧ ಆಡಳಿತದ ಶಕ್ತಿ ಕೇಂದ್ರಗಳಾಗಿದ್ದು, ಕರ್ನಾಟಕದ ಹೆಮ್ಮೆಯ ಪ್ರತೀಕಗಳಾಗಿವೆ. ಸಾರ್ವಜನಿಕರು, ಗಣ್ಯರು, ದೇಶ–ವಿದೇಶಗಳ ಪ್ರತಿನಿಧಿಗಳು ವಿವಿಧ ಕೆಲಸಗಳಿಗಾಗಿ ಇಲ್ಲಿಗೆ ನಿರಂತರ ಭೇಟಿ ನೀಡುವರು. ಇಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಪರ ಘೋಷಣೆಗಳ ಫಲಕ ಅಳವಡಿಸಿದರೆ ಕನ್ನಡದ ಅಸ್ಮಿತೆ ವಿಶ್ವಾತ್ಮಕವಾಗಲಿದೆ' ಎಂದರು.

ಲಾಡ್ಜ್ ಕೊಠಡಿಯಲ್ಲಿ ತೀರ್ಥಹಳ್ಳಿ ತಹಶೀಲ್ದಾರ್ ಶವಪತ್ತೆ

ಜಿ.ಬಿ. ಜಕ್ಕನಗೌಡರ್

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಹಶೀಲ್ದಾರ್ ಜಿ.ಬಿ. ಜಕ್ಕನಗೌಡರ್ (54) ಅವರ ಮೃತದೇಹವು ನಗರದ ಲಾಡ್ಜ್‌ವೊಂದರ ಕೊಠಡಿಯಲ್ಲಿ ಪತ್ತೆಯಾಗಿದ್ದು, ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ವೈಭವ್ ಲಾಡ್ಜ್‌ನ ಕೊಠಡಿಯಲ್ಲಿ ಬುಧವಾರ ರಾತ್ರಿ ಮೃತದೇಹ ಪತ್ತೆಯಾಗಿದೆ.

ನ್ಯಾಯಾಲಯದ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದಿದ್ದ ಅವರು ವೈಭವ್ ಲಾಡ್ಜ್‌ನಲ್ಲಿ ಉಳಿದಿದ್ದರು. ಮಂಗಳವಾರ ಸಂಜೆಯಿಂದಲೂ ಯಾರ ಸಂಪರ್ಕಕ್ಕೂ ಅವರು ಸಿಕ್ಕಿರಲಿಲ್ಲ.

ನಂತರ ಮೊಬೈಲ್ ಲೊಕೇಶನ್ ಪರಿಶೀಲನೆ ನಡೆಸಿದಾಗ ಮೆಜೆಸ್ಟಿಕ್ ಸಮೀಪ ತೋರಿಸುತ್ತಿತ್ತು. ಅದನ್ನು ಆಧರಿಸಿ ಪರಿಶೀಲನೆ ನಡೆಸಿದಾಗ ವೈಭವ್ ಲಾಡ್ಜ್ ಕೊಠಡಿಯಲ್ಲಿ ಮೃತದೇಹ ಪತ್ತೆಯಾಗಿದೆ. 'ಮೃತದೇಹದ ಮರಣೋತ್ತರ ಪರೀಕ್ಷೆಯ ಬಳಿಕ ಸಾವಿಗೆ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ತಿಳಿಸಿದರು.

ನಗರದ ಹೊರವಲಯದಲ್ಲಿ ರಾತ್ರಿ ವೇಳೆ ಕೃತ್ಯ ಎಸಗುತ್ತಿದ್ದ ಆರೋಪಿಗಳು

ಕುರಿ, ಮೇಕೆ ಕಳ್ಳತನದ 'ಗ್ಯಾಂಗ್' ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡಜಾಲ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ರಾತ್ರಿ ವೇಳೆ ಕುರಿ, ಮೇಕೆಗಳನ್ನು ಕಳವು ಮಾಡುತ್ತಿದ್ದ 'ಗ್ಯಾಂಗ್' ಅನ್ನು ಪತ್ತೆ ಹಚ್ಚಿರುವ ಚಿಕ್ಕಜಾಲ ಠಾಣೆ ಪೊಲೀಸರು, ಆರು ಮಂದಿಯನ್ನು ಬಂಧಿಸಿದ್ದಾರೆ.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ರುಕ್ಮಾಪೇಟೆ ಗ್ರಾಮದ ಪರಶುರಾಮ್ (28), ರಾಯಚೂರು ಜಿಲ್ಲೆಯ ಸಿಂಧನೂರಿನ ಅಂಬಮಠದ ಅಮರೇಶ್ ಅಲಿಯಾಸ್ ಗುನ್ನಾ (27), ಅಂಬಮಠ ಸಮೀಪದ ಸೋಮ್ಲಾಪುರದ ರಮೇಶ್ ಅಲಿಯಾಸ್ ಜೋಗಿ (21), ರಾಯಚೂರಿನ ಹಸನ್‌ಕಲ್ ಗ್ರಾಮದ ವೆಂಕಟೇಶ್ (19), ಬಾಗಲಕೋಟೆ ಜಿಲ್ಲೆ ಗುಡೂರು ಗ್ರಾಮದ ಹುಲುಗಪ್ಪ (32) ಹಾಗೂ ಧಾರವಾಡ ನೇಕಾರ ನಗರದ ಈರಣ್ಣ(27) ಬಂಧಿತರು.

ಬಂಧಿತರಿಂದ ₹2.43 ಲಕ್ಷ ನಗದು, 29 ಕುರಿ, ಮೇಕೆಗಳು, ಸಾಗಣೆಗೆ ಬಳಸುತ್ತಿದ್ದ ವಾಹನ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹12 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಸೆ.15ರ ರಾತ್ರಿ ದೊಡ್ಡಜಾಲ ಗ್ರಾಮದ ಕೃಷಿಕರೊಬ್ಬರು ಕೊಟ್ಟಿಗೆಯಲ್ಲಿದ್ದ ಕಟ್ಟಿದ್ದ 15 ಮೇಕೆಗಳು ಕಾಣೆಯಾಗಿದ್ದವರು. ಹುಡುಕಿದರೂ ಸಿಕ್ಕಿರಲಿಲ್ಲ. ಬಳಿಕ ಈ ಸಂಬಂಧ ದೂರು ನೀಡಿದ್ದರು. 'ಕೆಲ ರಸ್ತೆಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದಾಗ ಕುರಿ ಹಾಗೂ ಮೇಕೆಗಳ ಕಳ್ಳತನ ನಡೆಸುವ 'ಗ್ಯಾಂಗ್' ಸಕ್ರಿಯ ಆಗಿರುವುದು ಪತ್ತೆಯಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕದ್ದ ಕುರಿ ಮಾರಾಟ: 'ಕದ್ದ ಕುರಿಗಳನ್ನು ಬೆಂಗಳೂರು, ಹೊಸಪೇಟೆ, ಕೊಪ್ಪಳ ಹಾಗೂ ಬಳ್ಳಾರಿಯಲ್ಲಿ ಮಾರಾಟ ಮಾಡುತ್ತಿದ್ದರು. ಆರೋಪಿ ಜೋಗಿ ರಮೇಶ್ ಹೇರ್‌ಪಿನ್ ಮಾರಾಟದ ನೆಪದಲ್ಲಿ ಗ್ರಾಮಗಳಿಗೆ ಭೇಟಿ ಕುರಿಗಳಿದ್ದ ಕೊಟ್ಟಿಗೆ ಗುರುತಿಸಿ 'ಗ್ಯಾಂಗ್'ನವರಿಗೆ ಮಾಹಿತಿ ನೀಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಪ್ರೇಮ ವೈಫಲ್ಯ: ಪಿ.ಜಿ. ಕಟ್ಟಡದಿಂದ ಜಿಗಿದು ಯುವಕ ಆತ್ಮಹತ್ಯೆ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡದ 4ನೇ ಮಹಡಿಯಿಂದ ಜಿಗಿದು ಯುವಕ ಮಂಗಳವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮಿಳುನಾಡಿನ ವಿಷ್ಣು (28) ಆತ್ಮಹತ್ಯೆ ಮಾಡಿಕೊಂಡವರು.

'ನಾಲ್ಕು ತಿಂಗಳ ಹಿಂದೆ ಉದ್ಯೋಗ ಅರಸಿ ಬೆಂಗಳೂರಿಗೆ ಬಂದಿದ್ದ ಅವರು, ಪಿ.ಜಿಯಲ್ಲಿದ್ದರು. ಬಿಪಿಒ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ಅವರು ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದು, ಇತ್ತೀಚೆಗೆ ಆಕೆ ವಿಷ್ಣು ಅವರನ್ನು ಕಡೆಗಣಿಸಿದ್ದರು ಎನ್ನಲಾಗಿದೆ. ಇದೇ ವಿಚಾರಕ್ಕೆ ಬೇಸತ್ತು ಮಂಗಳವಾರ ತಡರಾತ್ರಿ ಪಿ.ಜಿ. ಕಟ್ಟಡದ ನಾಲ್ಕನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬುಧವಾರ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಮೃತದೇಹ ಒಪ್ಪಿಸಲಾಗಿದೆ. ಮರಣಪತ್ರ ಪತ್ತೆ ಆಗಿಲ್ಲ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮಾದಕ ವಸ್ತು ಮಾರಾಟ: ಆರೋಪಿ ಬಂಧನ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಕಾರು ಚಾಲಕನನ್ನು ಸಂಪಂಗಿ ರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸರ್ಜಾಪುರ ನಿವಾಸಿ ಮಹೇಶ್ (30)ಬಂಧಿತ. ಈತನಿಂದ ₹32 ಸಾವಿರ ಮೌಲ್ಯದ 8 ಗ್ರಾಂ. ಎಂಡಿಎಂಎ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಆರೋಪಿ ವಿದೇಶಿ ಪ್ರಜೆಯಿಂದ ಕಡಿಮೆ ಮೊತ್ತಕ್ಕೆ ಎಂಡಿಎಂಎ ಖರೀದಿಸಿ, ಮಾರುತ್ತಿದ್ದ. ಇದೇ ಮೊದಲ ಬಾರಿಗೆ ಈತ ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ದ್ವಿಚಕ್ರ ವಾಹನ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಹ್ಯಾಂಡಲ್ ಲಾಕ್ ಕತ್ತರಿಸಿ ಕಳವು ಮಾಡುತ್ತಿದ್ದ ಆರೋಪಿ, ಜೆ.ಪಿ.ನಗರ ನಿವಾಸಿ ರಘುನಂದನ್ (23) ಎಂಬವನನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈತನಿಂದ ₹1.25 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ. ಈತ ಇತ್ತೀಚೆಗೆ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡಿದ್ದ ಎಂದು ಪೊಲೀಸರು ಹೇಳಿದರು.

ಕದ್ದ ವಾಹನಗಳನ್ನು ಕಡಿಮೆ ಮೊತ್ತಕ್ಕೆ ಗ್ರಾಮೀಣ ಭಾಗದಲ್ಲಿ ಮಾರುತ್ತಿದ್ದ. ಈತನ ಬಂಧನದಿಂದ ಬನಶಂಕರಿ, ಜೆ.ಪಿ.ನಗರ ಠಾಣೆಗಳಲ್ಲಿ ದಾಖಲಾಗಿದ್ದ ನಾಲ್ಕು ಪ್ರಕರಣ ಪತ್ತೆ ಆಗಿವೆ ಎಂದು ತಿಳಿಸಿದರು. ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಡಾ: ಮರೀಗೌಡ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿರುವ ಮಧ್ಯೆಯೇ, ಮುಡಾ ಅಧ್ಯಕ್ಷ ಸ್ಥಾನಕ್ಕೆ ಕೆ.ಮರೀಗೌಡ ರಾಜೀನಾಮೆ ನೀಡಿದ್ದಾರೆ.

ವಿಕಾಸಸೌಧದಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರ ಕಚೇರಿಗೆ ಬುಧವಾರ ಬಂದಿದ್ದ ಮರೀಗೌಡ ರಾಜೀನಾಮೆ ಪತ್ರ ಸಲ್ಲಿಸಿದರು. ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ರಾಜೀನಾಮೆ ನೀಡಿದ್ದೇನೆ. ನನ್ನ ಆರೋಗ್ಯವೂ ಸರಿಯಿಲ್ಲ. ಹೀಗಾಗಿ ರಾಜೀನಾಮೆ ಕೊಟ್ಟಿದ್ದೇನೆ' ಎಂದರು.

'ರಾಜೀನಾಮೆ ನೀಡುವಂತೆ ನನ್ನ ಮೇಲೆ ಯಾರಿಂದಲೂ ಒತ್ತಡ ಇರಲಿಲ್ಲ. ಇಲಾಖೆ ಸಚಿವರು ರಾಜೀನಾಮೆಗೆ ಒತ್ತಡ ಹೇರಿದ್ದರು ಎಂಬುದು ಸತ್ಯಕ್ಕೆ ದೂರವಾದ ಮಾತು. ನಿವೇಶನ ಹಂಚಿಕೆ ವಿಚಾರವಾಗಿಯಂತೂ ರಾಜೀನಾಮೆ ನೀಡಿಲ್ಲ. ಎರಡು ಬಾರಿ ಪಾರ್ಶ್ವವಾಯು ಆಯಿತು' ಎಂದರು.

ಆದರೆ, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಸಿಲುಕಿಕೊಳ್ಳಲು ಮರೀಗೌಡರೇ ಕಾರಣ ಎಂದು ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಘೇರಾವ್ ಮಾಡಿದ್ದರು. ಜತೆಗೆ ಅವರ ರಾಜೀನಾಮೆಗೂ ಆಗ್ರಹಿಸಿದ್ದರು. ಈ ಘಟನೆ ನಡೆದ ವಾರದಲ್ಲೇ ಅವರು ರಾಜೀನಾಮೆ ನೀಡಿದ್ದಾರೆ.

ಅಕ್ರಮ ನಡೆದಿದೆ ಅಥವಾ ನಡೆದಿಲ್ಲ ಎಂದು ನಾನು ಹೇಳುವುದಿಲ್ಲ. ತನಿಖೆ ನಡೆಯುತ್ತಿದ್ದು, ಅದರ ಪಾಡಿಗೆ ಅದು ನಡೆಯಲಿ. ಸತ್ಯ ಹೊರಗೆ ಬರಲಿ

ಕೆ.ಮರೀಗೌಡ

ಬಿಬಿಎಂಪಿಯಿಂದ 'ಶ್ವಾನ ಮಹೋತ್ಸವ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿವತಿಯಿಂದ ಆಯೋಜಿಸಲಾಗಿರುವ 'ಶ್ವಾನ ಮಹೋತ್ಸವ'ಕ್ಕೆ ಎಲ್ಲ ಎಂಟು ವಲಯಗಳಲ್ಲಿ ಗುರುವಾರ ಚಾಲನೆ ಸಿಗಲಿದೆ.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಮಹೋತ್ಸವಕ್ಕೆ ಅಗ್ರ ಚಾಲನೆ ನೀಡಲಾಗುತ್ತದೆ ಎಂದು ಪಶು ಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

'ಒನ್ ಹೆಲ್ತ್' ಭಾಗವಾಗಿ ಮತ್ತು ಸಹಬಾಳ್ವೆ ಅಡಿಯಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ, ಪೌರಕಾರ್ಮಿಕರು, ಹೋಟೆಲ್ ಮಾಲೀಕರು, ಆರೋಗ್ಯ ಅಧಿಕಾರಿಗಳು, ಪಶುಸಂಗೋಪನೆ ಅಧಿಕಾರಿಗಳು ಮತ್ತು ಆಸಕ್ತ ನಾಗರಿಕರು ಸಂಘಟಿತರಾಗಿ ಸಮುದಾಯ ನಾಯಿಗಳಿಗೆ ಆಹಾರ ದೊರಕದ ಪ್ರದೇಶಗಳಲ್ಲಿ ದಿನಕ್ಕೆ ಒಂದು ಬಾರಿ ಆಹಾರ ನೀಡುವುದನ್ನು ಆರಂಭಿಸುತ್ತಾರೆ ಎಂದಿದ್ದಾರೆ.

ಪಾಲಿಕೆಯು ನಾಯಿಗಳಿಗೆ ಮಸಾಲೆ, ಎಣ್ಣೆ ಸೇರಿದಂತೆ ನಾಯಿಗಳಲ್ಲಿ ರೋಷ ಹೆಚ್ಚಲು ಕಾರಣವಾಗುವ ಅಂಶಗಳಿಲ್ಲದ ಆರೋಗ್ಯಕರ ಮತ್ತು ರುಚಿಕರವಾದ ಆಹಾರವನ್ನು ಒದಗಿಸಲು ಆಯಾ ಪ್ರದೇಶಗಳಲ್ಲಿನ ಹೋಟೆಲ್‌ಗಳಿಗೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಶ್ವಾನ ಮಹೋತ್ಸವದ ಅಂಗವಾಗಿ ಬಿಬಿಎಂಪಿಯಿಂದ ಹಲವು ವಾರ್ಡ್‌ಗಳಲ್ಲಿ ನಾಯಿಗಳಿಗೆ ಅನ್ನ ಸಂತರ್ಪಣೆ ನಡೆಯಲಿದೆ.

ಸ್ಥಳಗಳು: ಪಾಲಿಕೆ ಕೇಂದ್ರ ಕಛೇರಿ, ಎನ್. ಆರ್ ಚೌಕ, ಹಡ್ಸನ್ ವೃತ್ತ. ಸಾದಮಂಗಲ ರಸ್ತೆ ಮತ್ತು ಗ್ರಾಮದೇವತೆ ದೇವಸ್ಥಾನ, ಹೂಡಿ. ಗುಬ್ಬಲಾಳ ಮುಖ್ಯರಸ್ತೆ, ಕೋಣನಕುಂಟೆ, ಸುಬ್ರಹ್ಮಣ್ಯಪುರ, ವಸಂತಪುರ, ಬಿಸಿಎಂಸಿ ಲೇಔಟ್, ಆರ್.ಆರ್. ನಗರ. ಬಾಗಲಗುಂಟೆ, ಮಂಜುನಾಥ ನಗರ ಮುಖ್ಯರಸ್ತೆ. ಸಿದ್ದಾಪುರ ವಾರ್ಡ್, ಗುಟ್ಟೆಪಾಳ್ಯ,ಟೆಲಿಕಾಂ ಲೇಔಟ್, ಜಕ್ಕೂರು. ಗಾಯತ್ರಿ ನಗರ.

ಬಿ.ಇಡಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಬಿ.ಇಡಿ ಕೋರ್ಸ್‌ನ 2024–25ನೇ ಸಾಲಿನ ಸರ್ಕಾರಿ ಕೋಟಾದ ಸೀಟುಗಳ ಪ್ರವೇಶಕ್ಕೆ ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಅರ್ಜಿ ಆಹ್ವಾನಿಸಿದೆ.

ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಷಯದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ಅ.15ರಿಂದ ನ.11 ರವರೆಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ https://schooleducation.karnataka.gov.in ಸಂಪರ್ಕಿಸಬಹುದು.

ಕೆಎಸ್‌ಆರ್‌ಟಿಸಿ ಸಂಸ್ಥಾಪನೆ ದಿನಾಚರಣೆ: ಸಿಬ್ಬಂದಿಗೆ ಸಚಿವ ರಾಮಲಿಂಗಾರೆಡ್ಡಿ ಸಲಹೆ

ಯಾಮಾರಿ ಹಣ ಕಳೆದುಕೊಳ್ಳಬೇಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಹಾರ ಧನ ಸಿಕ್ಕಿದೆ ಎಂದು ಗೊತ್ತಾದರೆ ಕೆಲವರು ಶೇ 10–15 ಬಡ್ಡಿ ಕೊಡುತ್ತೇವೆ ಎಂದು ಬರುತ್ತಾರೆ. ಯಾಮಾರಿದರೆ ಹಣ ಕಳೆದುಕೊಳ್ಳುತ್ತೀರಿ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಕೆಎಸ್‌ಆರ್‌ಟಿಸಿ ನೌಕರರ ಕುಟುಂಬಗಳಿಗೆ ಎಚ್ಚರಿಸಿದರು.

ಅಪಘಾತದಲ್ಲಿ ಮೃತಪಟ್ಟ ಸಿಬ್ಬಂದಿ ಕುಟುಂಬಕ್ಕೆ ತಲಾ ₹1 ಕೋಟಿ, ಅನಾರೋಗ್ಯದಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ₹10 ಲಕ್ಷ ಪರಿಹಾರವನ್ನು ಬುಧವಾರ ನಡೆದ ಕೆಎಸ್‌ಆರ್‌ಟಿಸಿ 63ನೇ ಸಂಸ್ಥಾಪನಾ ಕಾರ್ಯಕ್ರಮದಲ್ಲಿ ವಿತರಿಸಿ ಅವರು ಮಾತನಾಡಿದರು.

'ಪರಿಹಾರದ ಹಣವನ್ನು ಮನೆ ಕಟ್ಟಲು, ಮಕ್ಕಳ ಭವಿಷ್ಯಕ್ಕೆ ಬಳಸಿ, ಇಲ್ಲವೇ ಬ್ಯಾಂಕ್‌ನಲ್ಲಿಡಿ. ಬೇರೆಯವರ ಕೈಗೆ ನೀಡಿದರೆ ವಾಪಸ್ ಬರುವುದಿಲ್ಲ' ಎಂದು ಸಲಹೆ ಮಾಡಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಾತನಾಡಿ, 'ಅಪಘಾತದಲ್ಲಿ ಮೃತಪಟ್ಟ ಮೂವರು ಸಿಬ್ಬಂದಿ ಕುಟುಂಬಕ್ಕೆ ತಲಾ ₹ 1 ಕೋಟಿ ಪರಿಹಾರ ನೀಡಲಾಗಿದೆ. ಈವರೆಗೆ 20 ಕುಟುಂಬಗಳಿಗೆ ಹೀಗೆ ಪರಿಹಾರ ನೀಡಲಾಗಿದೆ. ಈವರೆಗೆ ಇತರೆ ಕಾರಣದಿಂದ ಮೃತಪಟ್ಟ 93 ನೌಕರರ ಕುಟುಂಬಗಳಿಗೆ ತಲಾ ₹ 10 ಲಕ್ಷ ವಿತರಿಸಲಾಗಿದೆ' ಎಂದರು. ಪುನಶ್ಚೇತನಗೊಂಡ ಐರಾವತ ಕ್ಲಬ್ ಕ್ಲಾಸ್ ಬಸ್‌ಗಳಿಗೆ ಚಾಲನೆ ನೀಡಲಾಯಿತು. ಅನುಕಂಪದ ಆಧಾರದಲ್ಲಿ ನೇಮಕಗೊಂಡವರಿಗೆ ನೇಮಕಾತಿ ಆದೇಶ ನೀಡಲಾಯಿತು. ಶೂನ್ಯ ಅಪಘಾತದ ಸಾಧನೆ ಮಾಡಿದ ಘಟಕಗಳನ್ನು ಗೌರವಿಸಲಾಯಿತು. ಬಸ್ ಪುನಶ್ಚೇತನಗೊಳಿಸಿದ ಕಾರ್ಯಾಗಾರದ ನೌಕರರನ್ನು ಸನ್ಮಾನಿಸಲಾಯಿತು.

ನವೀಕರಿಸಿದ ಕೆಎಸ್‌ಆರ್‌ಟಿಸಿ ಬಸ್ಸುಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್‌.ಆರ್ ಶ್ರೀನಿವಾಸ್, ಉಪಾಧ್ಯಕ್ಷ ಮೊಹಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮತ್ತು ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್‌.ವಿ. ಪ್ರಸಾದ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಬಸ್ ಪ್ರಯಾಣ ದರ ಏರಿಸಿ'

'ಇಂಧನ ದರ, ನಿರ್ವಹಣಾ ವೆಚ್ಚ ಏರಿಕೆಯಾಗಿದೆ. ಆದರೆ, ಪ್ರಯಾಣ ದರ ಏರಿಕೆ ಮಾಡಿಲ್ಲ. ಸಂಸ್ಥೆ ಸುಗಮವಾಗಿ ನಡೆಸಲು ಪ್ರಯಾಣ ದರ ಏರಿಸಬೇಕು' ಎಂದು ಕೆಎಸ್‌ಆರ್‌ಟಿಸಿ ಅಧ್ಯಕ್ಷರು ಇದೇ ವೇಳೆ ಮನವಿ ಮಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್ ಅಭಿಮತ

'ಕವಿಗೋಷ್ಠಿ ಜನಪ್ರಿಯತೆ ಕುಂದಲು ಕವಿಗಳೇ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ದಿನಗಳಲ್ಲಿ ಕವಿಗೋಷ್ಠಿಗಳು ಜನಪ್ರಿಯತೆ ಕಳೆದುಕೊಳ್ಳಲು ಕವಿಗಳು ಕಾರಣರೇ ಹೊರತು ಕಾವ್ಯಾಸಕ್ತರಲ್ಲ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅವರು ಹೇಳಿದರು.

ನಾಡಹಬ್ಬ ದಸರಾ ಪ್ರಯುಕ್ತ ಕರ್ನಾಟಕ ಸಾಹಿತ್ಯ ಅಕಾಡೆಮಿ, ರಾಜರಾಜೇಶ್ವರಿ ಸೇವಾ ಟ್ರಸ್ಟ್ ಹಾಗೂ ಕರ್ನಾಟಕ ಸ್ವಾಭಿಮಾನಿ ವೇದಿಕೆ ಜಂಟಿಯಾಗಿ ಹಮ್ಮಿಕೊಂಡ ಕವಿಗೋಷ್ಠಿ ಮತ್ತು ನಾಟಕ ಪ್ರದರ್ಶನ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಕವಿತೆಯನ್ನು ಸಹೃದಯರಿಗೆ ಹೇಗೆ ತಲುಪಿಸಬೇಕೆಂಬ ಸಂಗತಿ ಕವಿಗೆ ತಿಳಿದಿರಬೇಕು. ಇಲ್ಲವಾದಲ್ಲಿ ಕವಿಗೋಷ್ಠಿಗೆ ಜನರು ಬರುವುದಿಲ್ಲ. ಅಕಾಡೆಮಿ ವತಿಯಿಂದ ಬೆಳಗಾವಿ, ಕಲಬುರಗಿ, ಮೈಸೂರು ಹಾಗೂ ಬೆಂಗಳೂರು ವಲಯದಲ್ಲಿ ಯುವ ಕವಿಗೋಷ್ಠಿಗಳನ್ನು ನಡೆಸಲಾಗುತ್ತಿದೆ. ಹಿಂದೆ ಜಿ.ಎಸ್. ಶಿವರುದ್ರಪ್ಪ ಅವರು ಯುವ ಕವಿಗೋಷ್ಠಿ ನಡೆಸಿದ್ದರು. ಯುವ ಕವಿಗಳಿಗೆ ಈ ವೇದಿಕೆ ಪ್ರೋತ್ಸಾಹ ಒದಗಿಸಲಿದೆ' ಎಂದು ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, 'ಈ ಹಿಂದೆ ಕವಿಗಳು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಜನರಲ್ಲಿ ಜಾಗೃತಿ ಮೂಡಿಸಿ, ಕಾವ್ಯದ ಮೂಲಕ ಸಮಾಜ ತಿದ್ದಿದ್ದರು. ಅನ್ಯಾಯಕ್ಕೆ ಒಳಗಾದವರಿಗೆ, ದಮನಿತರಿಗೆ ಧ್ವನಿಯಾಗಿದ್ದರು. ಆದರೆ, ಈಗ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಕವಿಗಳ ಸಂಖ್ಯೆ ಕಡಿಮೆಯಾಗಿದೆ' ಎಂದು ಅಭಿಪ್ರಾಯಪಟ್ಟರು.

ಹತ್ತಕ್ಕೂ ಅಧಿಕ ಕವಿಗಳು ಕವಿತೆ ವಾಚಿಸಿದರು. ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಎಲ್‌.ಎನ್‌. ಮುಕುಂದರಾಜ್ ಹಾಗೂ ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಸಮಾಲೋಚನೆ ನಡೆಸಿದರು. (ಎಡದಿಂದ)ಕರ್ನಾಟಕ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಶಂಕರ ಹೂಗಾರ, ಸಿ.ಕೆ. ರಾಮೇಗೌಡ, ರಾಜರಾಜೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷೆ ಎಂ.ಎಸ್‌. ಮಂಜುಳಾ, ಕೋಟಿಗಾನಹಳ್ಳಿ ರಾಮಯ್ಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಕಾ.ವೆಂ. ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಶಾಲಾ ಮಾನ್ಯತೆ ನವೀಕರಣ ಅವ್ಯವಹಾರ: ತನಿಖೆಗೆ ಒತ್ತಾಯ

ಬೆಂಗಳೂರು: 'ಶಾಲೆಗಳ ಮಾನ್ಯತೆ ನವೀಕರಣದಲ್ಲಿ ಹಲವು ಜಿಲ್ಲೆಗಳ ಉಪ ನಿರ್ದೇಶಕರು (ಡಿಡಿಪಿಐ) ಅವ್ಯವಹಾರ ನಡೆಸಿರುವ ಶಂಕೆ ಇದ್ದು, ಉನ್ನತ ಮಟ್ಟದ ತನಿಖೆ ನಡೆಸಬೇಕು' ಎಂದು ಕರ್ನಾಟಕ ಶಾಲಾ ಕಾಲೇಜು ಪೋಷಕರ ಸಂಘಗಳ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎನ್. ಯೋಗಾನಂದ ಒತ್ತಾಯಿಸಿದ್ದಾರೆ.

'ಕರ್ನಾಟಕದಲ್ಲಿ 5,886 ಖಾಸಗಿ ಶಾಲೆಗಳು ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಿವೆ. 3,811 ಶಾಲೆಗಳ ಮಾನ್ಯತೆ ನವೀಕರಣ ಬಾಕಿ ಇವೆ. ಹಲವು ಶಾಲೆಗಳು ಕಟ್ಟಡ ಪರವಾನಗಿ, ಅಗ್ನಿಸುರಕ್ಷತೆ ಪ್ರಮಾಣಪತ್ರ, ಭೂ ಪರಿವರ್ತನೆ ದಾಖಲೆ ಸಲ್ಲಿಸದಿದ್ದರೂ ಹಣ ಪಡೆದು ನವೀಕರಿಸಲಾಗಿದೆ' ಎಂದು ದೂರಿದ್ದಾರೆ.

ಹಾಲು ಖರೀದಿ: ಜನವರಿಯಿಂದ ₹5 ಹೆಚ್ಚಳ

ಪ್ರಜಾವಾಣಿ ವಾರ್ತೆ



ಕೆ.ವೆಂಕಟೇಶ್

ತಿ.ನರಸೀಪುರ (ಮೈಸೂರು ಜಿಲ್ಲೆ): 'ಹಾಲು ಒಕ್ಕೂಟಗಳು ರೈತರಿಂದ ಖರೀದಿಸುವ ಲೀಟರ್ ಹಾಲಿಗೆ ₹ 5 ಹೆಚ್ಚಿಸಿ ಜನವರಿಯಿಂದ ಜಾರಿಗೊಳಿಸಲಾಗುವುದು' ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಇಲ್ಲಿನ ಎಪಿಎಂಸಿ ಪ್ರಾಂಗಣದಲ್ಲಿ 'ಮೈಮುಲ್'ನಿಂದ ₹1.15 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಒಕ್ಕೂಟದ ಉಪ ಕಚೇರಿಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಲೀಟರ್ ಹಾಲಿಗೆ ಈಗ ₹ 33 ಕೊಡಲಾಗುತ್ತಿದೆ. ಹಿಂದೆ ಅದು ₹35 ಇತ್ತು. ಈಗ, ₹ 5 ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಾತ್ವಿಕವಾಗಿ ಒಪ್ಪಿದ್ದಾರೆ. ಅವರ ಸೂಚನೆಯಂತೆ ಹೊಸ ವರ್ಷದ ಕೊಡುಗೆಯಾಗಿ ಇದನ್ನು ನೀಡಲಿದ್ದೇವೆ. ಆ ₹ 5 ಪೂರ್ಣವಾಗಿ ರೈತರಿಗೇ ದೊರೆಯುವಂತೆಯೇ, ಬೇರೆಯವರಿಗೆ ಹಂಚಿಕೆ ಆಗದಂತೆ ನೋಡಿಕೊಳ್ಳಲಾಗುವುದು' ಎಂದರು.



'ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹಧನಕ್ಕಾಗಿ ಈ ವರ್ಷ ₹1,300 ಕೋಟಿ ಇಟ್ಟಿದ್ದೇವೆ. ಅದರಲ್ಲಿ ಈಗಾಗಲೇ ₹800 ಕೋಟಿ ಬಿಡುಗಡೆ ಮಾಡಿದ್ದೇವೆ. ಹೋದ ವರ್ಷ ₹1,200 ಕೋಟಿ ಇಟ್ಟಿದ್ದೆವು; ಅಷ್ಟನ್ನೂ ಬಿಡುಗಡೆ ಮಾಡಿದೆವು. ಹಿಂದಿನ ಬಿಜೆಪಿ ಸರ್ಕಾರದಲ್ಲಿ ₹700 ಕೋಟಿ ಬಾಕಿ ಉಳಿಸಿದ್ದೇ ಪ್ರೋತ್ಸಾಹಧನ ಬಾಕಿಗೆ ಕಾರಣವಾಗಿದೆ. ನಮ್ಮ ಸರ್ಕಾರ ಬಂದ ಮೇಲೆ ಅದರಲ್ಲಿ ₹300 ಕೋಟಿ ಕೊಟ್ಟಿದ್ದೇವೆ. ರೈತರಿಗೆ ಕೊಡಬೇಕಾದ ₹400 ಕೋಟಿ ಡಹಳೆಯ ಬಾಕಿ ಇನ್ನೂ ಇದೆ. ಇದನ್ನು ಬೇಗ ಬಿಡುಗಡೆ ಮಾಡಿಸಿಕೊಡುವಂತೆ ಮುಖ್ಯಮಂತ್ರಿ ಮೇಲೆ ಒತ್ತಡ ಹೇರುತ್ತಿದ್ದೇನೆ. ಮಾರ್ಚ್ ಅಂತ್ಯದೊಳಗೆ ಆ ಬಾಕಿಯನ್ನೆಲ್ಲಾ ತೀರಿಸಲಾಗುವುದು' ಎಂದು ಮಾಹಿತಿ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಇದ್ದರು.

ಗುರುವಾರ, ಅಕ್ಟೋಬರ್ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 288 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಇಸ್ಲಾಮಾಬಾದ್‌ಗೆ ಭೇಟಿ ನೀಡಿದ್ದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಪರಸ್ಪರ ಹಸ್ತಲಾಘವ ನೀಡಿದರು.

ಆಳ-ಅಗಲ
ಬಿಷ್ಣೋಯಿ ಗ್ಯಾಂಗ್ ಮತ್ತೊಂದು 'ಡಿ ಕಂಪನಿ'?
'ಸಿ.ಎಂ, ಡಿಸಿಎಂ ಹೆಸರೇಳಲು ಇ.ಡಿ ಒತ್ತಡ' 8

ವಾಲ್ಮೀಕಿ ಜಯಂತಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,501	24,971	₹80,230 (ಬೆಂಗಳೂರು)	₹96,600 (ಬೆಂಗಳೂರು)	84.02

50 ಲಕ್ಷ ಜನರ ದಾಹ ತಣಿಸುವ ಯೋಜನೆ ಲೋಕಾರ್ಪಣೆ ● ಕೊನೆಗೂ ನೀಗಿದ ದಶಕಗಳ ಬರ

110 ಹಳ್ಳಿಗಳಿಗೆ ಹರಿದಳು 'ಕಾವೇರಿ'

● ಗಾಣಧಾಳು ಶ್ರೀಕಂಠ

ತೊರೆಕಾಡನಹಳ್ಳಿ(ಮಂಡ್ಯ): 2008 ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಮಹತ್ವಾಕಾಂಕ್ಷಿ ಕಾವೇರಿ ಐದನೇ ಹಂತದ ಯೋಜನೆಯನ್ನು ಬುಧವಾರ ಜನಸೇವೆಗೆ ಸಮರ್ಪಿಸಲಾಯಿತು. ಇದರಿಂದಾಗಿ ಬೆಂಗಳೂರಿನ ಸುಮಾರು 50 ಲಕ್ಷಕ್ಕೂ ಹೆಚ್ಚು ಜನರಿಗೆ ಅನುಕೂಲವಾಗಲಿದೆ.

ಮಳವಳ್ಳಿ ತಾಲ್ಲೂಕಿನ ತೊರೆಕಾಡನಹಳ್ಳಿಯಲ್ಲಿರುವ ಬೆಂಗಳೂರು ಜಲಮಂಡಳಿ ಜಲ ಶುದ್ಧೀಕರಣ ಘಟಕದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯೋಜನೆಯನ್ನು ಲೋಕಾರ್ಪಣೆ ಮಾಡಿದರು.

ಈ ಯೋಜನೆಯಿಂದ ಬೆಂಗಳೂರು ಮಹಾನಗರಕ್ಕೆ ಹೆಚ್ಚುವರಿಯಾಗಿ ಪ್ರತಿದಿನ 7.75 ಕೋಟಿ ಲೀಟರ್ ಕುಡಿಯುವ ನೀರು ಲಭ್ಯವಾಗಲಿದೆ. ಸದ್ಯ ನಾಲ್ಕು ಹಂತಗಳಿಂದ ಬೆಂಗಳೂರಿಗೆ ಪ್ರತಿದಿನ 14.50 ಕೋಟಿ ಲೀಟರ್ ನೀರು ಪೂರೈಕೆಯಾಗುತ್ತಿದ್ದು, ಈಗ ಪ್ರತಿದಿನ ಒಟ್ಟು 22.25 ಕೋಟಿ ಲೀಟರ್ ನೀರು ಲಭ್ಯವಾಗಲಿದೆ.

ಯಶವಂತಪುರ, ದಾಸರಹಳ್ಳಿ, ಬ್ಯಾಟರಾಯನಪುರ, ಬೆಂಗಳೂರು ದಕ್ಷಿಣ, ಮಹದೇವಪುರ, ರಾಜರಾಜೇಶ್ವರಿನಗರ ಮತ್ತು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರಗಳಿಗೆ ಐದನೇ ಹಂತದ ಯೋಜನೆಯಡಿ ನೀರು ಪೂರೈಕೆಯಿಂದ ಅನುಕೂಲವಾಗಲಿದೆ. ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಐದು ಲಕ್ಷ ನೀರಿನ ಸಂಪರ್ಕಗಳನ್ನು ಹೊಸದಾಗಿ ಕಲ್ಪಿಸುವ ಗುರಿಯನ್ನು ಜಲಮಂಡಳಿ ಹೊಂದಿದೆ.

ಈ ಏಳೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹಿಂದೆ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳು ರೂಪಿಸಿದ್ದ ನೀರು ಪೂರೈಕೆ ವ್ಯವಸ್ಥೆಯೇ ಮುಂದುವರಿದಿತ್ತು. ಬಹುತೇಕ ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನೇ ನೀರು ಪೂರೈಕೆಗೆ ಆಶ್ರಯಿಸಲಾಗಿತ್ತು.

10ನೇ ಪುಟ ನೋಡಿ

ಕಾವೇರಿ ಐದನೇ ಹಂತದ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಳವಳ್ಳಿ ತಾಲ್ಲೂಕಿನ ತೊರೆಕಾಡನ ಹಳ್ಳಿಯಲ್ಲಿನ ಜಲಶುದ್ಧೀಕರಣ ಘಟಕದಲ್ಲಿ ಕಳಶದ ನೀರನ್ನು ಸುರಿಯುವ ಮೂಲಕ ಲೋಕಾರ್ಪಣೆಗೊಳಿಸಿದರು ಪ್ರಜಾವಾಣಿ ಚಿತ್ರ / ಪ್ರಶಾಂತ್ ಎಚ್.ಜಿ.

'ಆರನೇ ಹಂತಕ್ಕೆ ₹ 7,200 ಕೋಟಿ'

'ಭವಿಷ್ಯದ ದಿನಗಳಲ್ಲಿ ಬೆಂಗಳೂರು ನಗರದ ಕುಡಿಯುವ ನೀರಿನ ಬೇಡಿಕೆಯನ್ನು ಗಮನದಲ್ಲಿ ಇರಿಸಿಕೊಂಡು ₹ 7,200 ಕೋಟಿ ವೆಚ್ಚದಲ್ಲಿ ಕಾವೇರಿ ಆರನೇ ಹಂತದ ಯೋಜನೆ ಕೈಗೆತ್ತಿಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಐದನೇ ಹಂತದ ಯೋಜನೆಯನ್ನು ಲೋಕಾರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, 'ಆರನೇ ಹಂತದ ಯೋಜನೆಯನ್ನು ನಮ್ಮ ಸರ್ಕಾರದ ಅವಧಿಯಲ್ಲೇ ಪೂರ್ಣಗೊಳಿಸುತ್ತೇವೆ. ಈ ಯೋಜನೆಯಿಂದ ನಗರಕ್ಕೆ ಪ್ರತಿದಿನ 5 ಕೋಟಿ ಲೀಟರ್ ನೀರು ಹೆಚ್ಚುವರಿಯಾಗಿ ಲಭ್ಯವಾಗಲಿದೆ' ಎಂದರು.

'ಕಾವೇರಿ ಆರನೇ ಹಂತದ ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದೆ. ಕಾವೇರಿ ಕಣಿವೆಯಲ್ಲಿ ಹಂಚಿಕೆಯಾಗದೇ ಉಳಿದಿದ್ದ 6 ಟಿಎಂಸಿ ಅಡಿ ನೀರನ್ನು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದೆ. ಅದೂ ಸೇರಿ ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣವನ್ನು ಆಧರಿಸಿ ಮುಂದಿನ ಯೋಜನೆಯನ್ನು ರೂಪಿಸಲಾಗುವುದು. ಈಗಾಗಲೇ ಅಳವಡಿಸಿರುವ ಕೊಳವೆಗಳ ಪಕ್ಕದಲ್ಲೇ ಹೊಸ ಕೊಳವೆ ಅಳವಡಿಸುವುದೂ ಸೇರಿದಂತೆ ಹಲವು ಆಯ್ಕೆಗಳು ಪರಿಶೀಲನೆಯಲ್ಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಪ್ರಾದೇಶಿಕ ಸಹಕಾರಕ್ಕೆ 3 ಅನಿಷ್ಟ ಅಡ್ಡಿ'

ಭಯೋತ್ಪಾದನೆ, ಉಗ್ರವಾದ, ಪ್ರತ್ಯೇಕತಾವಾದದ ವಿರುದ್ಧ ಜೈಶಂಕರ್ ಕಿಡಿ

ಇಸ್ಲಾಮಾಬಾದ್ (ಪಿಟಿಐ): 'ಭಯೋತ್ಪಾದನೆ, ಉಗ್ರವಾದ ಹಾಗೂ ಪ್ರತ್ಯೇಕತಾವಾದ ಈ ಮೂರು ಅನಿಷ್ಟಗಳು ಪ್ರಾದೇಶಿಕ ಸಹಕಾರಕ್ಕೆ ಅಡ್ಡಿಯಾಗಿವೆ' ಎಂದು ಹೇಳುವ ಮೂಲಕ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಚೀನಾ ಮತ್ತು ಪಾಕಿಸ್ತಾನಕ್ಕೆ ಸೂಕ್ಷ್ಮ ಸಂದೇಶ ರವಾನಿಸಿದರು.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅಧ್ಯಕ್ಷತೆಯಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗ ಸಭೆಯಲ್ಲಿ ಮಾತನಾಡಿದ ಜೈಶಂಕರ್, ವ್ಯಾಪಾರ ಮತ್ತು ಸಂಪರ್ಕ ಉಪಕ್ರಮಗಳು ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಎತ್ತಿಹಿಡಿಯಬೇಕು. ನಂಬಿಕೆ, ವಿಶ್ವಾಸದ ಕೊರತೆ ಉಂಟಾದಾಗ, ಪ್ರಾಮಾಣಿಕವಾದ ಮಾತುಕತೆ ಮೂಲಕ ಅದನ್ನು ಸರಿಪಡಿಸಿಕೊಳ್ಳುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

> **ಭದ್ರತಾ ಮಂಡಳಿಯ ಸಮಗ್ರ ಸುಧಾರಣೆಯ ಅಗತ್ಯವಿದೆ. ಅಂತಹ ಬದಲಾವಣೆಯನ್ನು ಪ್ರತಿಪಾದಿಸುವ ಮುಂದಾಳತ್ವದಲ್ಲಿ ಎಸ್‌ಸಿಒ ಇರಬೇಕು.**
> **ಎಸ್.ಜೈಶಂಕರ್,** ವಿದೇಶಾಂಗ ವ್ಯವಹಾರಗಳ ಸಚಿವ

'ಗಡಿಯಾಚೆಗಿನ ಚಟುವಟಿಕೆಗಳು ಭಯೋತ್ಪಾದನೆ, ಉಗ್ರವಾದ ಮತ್ತು ಪ್ರತ್ಯೇಕತಾವಾದದಿಂದ ನಿರೂಪಿಸಲ್ಪಟ್ಟಿದ್ದರೆ, ಅವು ವ್ಯಾಪಾರ, ಇಂಧನ ಪೂರೈಕೆ, ಸಂಪರ್ಕ ಹಾಗೂ ಇದಕ್ಕೆ ಪೂರಕವಾಗಿ ಜನರ ನಡುವಿನ ಒಡನಾಟ ಉತ್ತೇಜಿಸುವ ಸಾಧ್ಯತೆ ಕಡಿಮೆ' ಎಂದು ಪಾಕಿಸ್ತಾನವನ್ನು ಹೆಸರಿಸದೆ ಹೇಳಿದರು.

ಪೂರ್ವ ಲಡಾಖ್‌ನಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವಿನ ದೀರ್ಘಕಾಲದ ಸಂಘರ್ಷ ಮತ್ತು ಹಿಂದೂ ಮಹಾಸಾಗರ ಹಾಗೂ ಇತರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಚೀನಾದ ಮಿಲಿಟರಿ ಬಲದ ಬಗೆಗಿನ ಕಳವಳದ ನಡುವೆ ಜೈಶಂಕರ್ ಈ ಹೇಳಿಕೆ ನೀಡಿದ್ದಾರೆ.

ಎಸ್‌ಸಿಒ ಶೃಂಗ ಸಭೆಯಲ್ಲಿ ಶೆಹಬಾಜ್ ಷರೀಫ್ ಅವರ ಉದ್ಘಾಟನಾ ಭಾಷಣ ಮುಗಿದ ತಕ್ಷಣ ಜೈಶಂಕರ್ ಮಾತನಾಡಿದರು. ಈ ಸಭೆಯಲ್ಲಿ ಚೀನಾ ಪ್ರಧಾನಿ ಲಿ ಕಿಯಾಂಗ್ ಅವರೂ ಭಾಗವಹಿಸಿದ್ದರು.

11ನೇ ಪುಟ ನೋಡಿ

ಏರ್‌ಪೋರ್ಟ್ ಸಿಟಿಯಲ್ಲಿ 'ಬಿಸಿನೆಸ್ ಪಾರ್ಕ್'

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್‌ನ (ಬಿಐಎಎಲ್) ಅಂಗ ಸಂಸ್ಥೆ ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ (ಬಿಎಸಿಎಲ್) 'ಬಿಸಿನೆಸ್ ಪಾರ್ಕ್' ಆರಂಭಿಸಲು 20 ಲಕ್ಷ ಚದರ ಅಡಿ ಪ್ರದೇಶವನ್ನು ತನ್ನ ದಾಗಿಸಿಕೊಂಡಿದೆ.

'ಈ ಪಾರ್ಕ್ ನಿರ್ಮಾಣದಿಂದ 3.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಆರ್ಥಿಕತೆಗೆ 50 ಶತಕೋಟಿ ಡಾಲರ್ ಕೊಡುಗೆಯನ್ನು ಪಾರ್ಕ್ ನೀಡಲಿದೆ. ಬೆಂಗಳೂರು ವಿಮಾನ ನಿಲ್ದಾಣ ನಗರವನ್ನು ವಿಶ್ವದರ್ಜೆಯ ತಾಣವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಸಂಸ್ಥೆ ತಿಳಿಸಿದೆ.

ನಕಲಿ ಮದ್ಯ: 6 ಸಾವು

ಸಿವಾನ್/ಸರನ್ (ಪಿಟಿಐ): ಬಿಹಾರದ ಸಿವಾನ್ ಮತ್ತು ಸರನ್ ಜಿಲ್ಲೆಗಳಲ್ಲಿ ನಕಲಿ ಮದ್ಯ ಕುಡಿದು ಆರು ಮಂದಿ ಮೃತಪಟ್ಟಿದ್ದು, 14 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈ ವರ್ಷವೂ ಇಲ್ಲ ಬೋರ್ಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 5, 8 ಹಾಗೂ 9ನೇ ತರಗತಿ ಗಳಿಗೆ ಬೋರ್ಡ್ ಪರೀಕ್ಷೆ ನಡೆಸುವ ಪ್ರಕ ರಣದ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ಪೂರ್ಣಗೊಳ್ಳದ ಕಾರಣ 2024–25ನೇ ಸಾಲಿಗೂ ಹಿಂದೆ ಇದ್ದಂತೆ ಮೌಲ್ಯಾಂಕನವನ್ನೇ ಮುಂದುವರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು 2024–25ನೇ ಶೈಕ್ಷಣಿಕ ಸಾಲಿನಿಂದ ಒಂದರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಭಾಗ–1 ಮತ್ತು ಭಾಗ–2ರ ಆಧಾರದಲ್ಲಿ ಮೌಲ್ಯಾಂಕನ ಪೂರ್ಣಗೊಳಿಸಲು ಎಲ್ಲ ಶಾಲೆಗಳಿಗೂ ಸುತ್ತೋಲೆ ಕಳುಹಿಸಲಾಗುತ್ತಿದೆ ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಹೇಳಿದ್ದಾರೆ.

ಈ ಕುರಿತು ವಿಚಾರಣೆ ಮುಂದುವರಿಸಿದ್ದ ಸುಪ್ರೀಂಕೋರ್ಟ್, ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸಲು ಕರ್ನಾಟಕ ಸರ್ಕಾರಕ್ಕೆ ಅನುಮತಿಯಿಲ್ಲ ಎಂದಿತ್ತು.

ಕೇಂದ್ರ ಸರ್ಕಾರಿ ನೌಕರರ ಡಿ.ಎ ಶೇ 3ರಷ್ಟು ಏರಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬುಧವಾರ ತನ್ನ ನೌಕರರಿಗೆ ತುಟ್ಟಿಭತ್ಯೆ (ಡಿಎ) ಹಾಗೂ ಪಿಂಚಣಿದಾರರಿಗೆ ತುಟ್ಟಿ ಪರಿಹಾರವನ್ನು (ಡಿಆರ್) ಮೂಲ ವೇತನದ ಶೇ 3ರಷ್ಟು ಹೆಚ್ಚಿಸಿದೆ.

ಪ್ರಸ್ತುತ ಮೂಲ ವೇತನದ ಶೇ 50ರಷ್ಟು ಡಿಎ ಹಾಗೂ ಡಿಆರ್ ಇದೆ. ಇದು ಶೇ 53ಕ್ಕೆ ಏರಿಕೆಯಾಗಲಿದೆ.

'ತುಟ್ಟಿಭತ್ಯೆ ಮತ್ತು ತುಟ್ಟಿ ಪರಿಹಾರ ಹೆಚ್ಚಳಕ್ಕೆ ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಜುಲೈ 1ರಿಂದ ಇದು ಪೂರ್ವಾನ್ವಯವಾಗಲಿದೆ. ಇದಕ್ಕಾಗಿ ಸರ್ಕಾರವು ₹9,448 ಕೋಟಿ ಅನುದಾನವನ್ನು ನಿಗದಿಪಡಿಸಿದೆ' ಎಂದು ಸಭೆಯ ಬಳಿಕ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಪ್ರಸ್ತುತ 49.18 ಲಕ್ಷ ನೌಕರರು ಮತ್ತು 64.89 ಲಕ್ಷ ಪಿಂಚಣಿದಾರರು ಇದ್ದಾರೆ.

ನಗರದಲ್ಲಿ ಇಂದು

ಡಾ.ಲೀಲಾದೇವಿ ಆರ್. ಪ್ರಸಾದ್–92 'ಸಾರ್ಥಕ ಬದುಕಿನ ಸುಂದರ ಪಯಣ': ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಭು ಚನ್ನಬಸವ ಸ್ವಾಮೀಜಿ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಬಿ.ಎಲ್. ಶಂಕರ್, ಅರವಿಂದ ಜತ್ತಿ, ಧರಣಿದೇವಿ ಮಾಲಗತ್ತಿ, ಸುಶೀಲಮ್ಮ, ಅಧ್ಯಕ್ಷತೆ: ಸಿ. ಸೋಮಶೇಖರ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಲೀಲಾದೇವಿ ಆರ್. ಪ್ರಸಾದ್ ಅವರೊಂದಿಗೆ ಸಂವಾದ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಸಮಿತಿ, ಕದಳಿ ಮಹಿಳಾ ವೇದಿಕೆ, ಸ್ಥಳ: ಬಸವ ಭವನ, ಬಸವೇಶ್ವರ ವೃತ್ತ, ಬೆಳಿಗ್ಗೆ 10ರಿಂದ

ಮಹರ್ಷಿ ವಾಲ್ಮೀಕಿ ಜಯಂತಿ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಸಾನ್ನಿಧ್ಯ: ಪ್ರಸನ್ನಾನಂದ ಪುರಿ ಸ್ವಾಮೀಜಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 10.30

ಎಂ.ಜಿ.ಹೆಗಡೆ ಅವರ ಆತ್ಮಕತೆ 'ಚಿಮಣಿ ಬೆಳಕಿನಿಂದ' ಪುಸ್ತಕ ಬಿಡುಗಡೆ: ಬಿ.ಕೆ. ಹರಿಪ್ರಸಾದ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಪ್ರಧಾನ ಭಾಷಣ: ಪುರುಷೋತ್ತಮ ಬಿಳಿಮಲೆ, ಅತಿಥಿ: ಶ್ರೀಧರ ಭಿಡೆ, ಆಯೋಜನೆ: ಅಹರ್ನಿಶಿ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

'ನೆನಪಿನಂಗಳದಲ್ಲಿ ಅಪರ್ಣಾ–58: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಪ್ರವೀಣ್ ಗೋಡ್ಖಿಂಡಿ, ಎಂ. ನರಸಿಂಹ, ಶ್ರೀರಾಮೇಗೌಡ, ಆಯೋಜನೆ: ನೊಬೆಲ್ ಹಾರ್ಟ್ಸ್, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 5.30

'ಭಾರತೀಯ ಹರಿಕಥಾ ಪರಂಪರೆ' ಉಪನ್ಯಾಸ: ಲಕ್ಷ್ಮಣದಾಸ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ಗಾಯನ: ಗಾಯನ: ನಿಧಿ ಭಾರಧ್ವಾಜ್, ಪಿಟೀಲು: ಗಾಯತ್ರಿ, ಮೃದಂಗ: ಕೆ. ಭಾನುಪ್ರಕಾಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಮಂಡ್ಯದ ನಂದೀಕೇಶ್ವರ ಭರತನಾಟ್ಯ ಶಾಲೆಯ ಶೈಲಾ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಐದನೇ ಬಡಾವಣೆ, ಜಯನಗರ, ಸಂಜೆ 7.30

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಸಹಾಯಕ ಆಯುಕ್ತರ ಕಛೇರಿ, ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, 4ನೇ ಮಹಡಿ, ಪೊಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001.
ದೂರವಾಣಿ ಸಂಖ್ಯೆ: 080–22869850 Email.ld.endowmentacurban@gmail.com

E-1331738 HRICE-ACUOADMM/7/2024 ದಿನಾಂಕ: 16.10.2024

ಇ–ಪ್ರೊಕ್ಯೂರ್‌ಮೆಂಟ್ (E-procurement) ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ: ಕಂಇ 26 ಮುಲಿಬಿ 2019 ಬೆಂಗಳೂರು ದಿನಾಂಕ:01/10/2020ರನ್ವಯ ಬೆಂಗಳೂರು ನಗರ ಸಭಾವಲಯದ ವ್ಯಾಪ್ತಿಯಲ್ಲಿನ ಮುಜರಾಯಿ ದೇವಸ್ಥಾನಗಳಿಗೆ ಸೇರಿದ 216 ಅಂಗಡಿ ಮಳಿಗೆಗಳನ್ನು ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಪ್ರಸಕ್ತ ಮಾರುಕಟ್ಟೆಯ ದರಕ್ಕನುಗುಣವಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳ ಅನ್ವಯ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಷರತ್ತುಗಳ ಮೇರೆಗೆ ಅನುಮೋದನೆ ನೀಡಿ ಆದೇಶಿಸಿದೆ. ಬೆಂಗಳೂರು ನಗರ, ಗವೀಪುರಂ, ಶ್ರೀ ಗವಿಗಂಗಾಧರೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ 04 ಅಂಗಡಿ/ಮಳಿಗೆಗಳಲ್ಲಿ 02–ಹಿಂದುಳಿದ ವರ್ಗದವರಿಗೆ ಮತ್ತು 02 ಅಂಗಡಿ ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿ ಸರ್ಕಾರದ ಆದೇಶದಂತೆ ನಿಗಧಿಪಡಿಸಿರುವ ಮೀಸಲಾತಿ ಅನ್ವಯ ಅರ್ಹರಿರುವ ಆಸಕ್ತರು ಭಾಗವಹಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಗೆ ಹಾಗೂ ಕೆಳಗೆ ಸಹಿ ಮಾಡಿರುವ ಕಛೇರಿ ದೂರವಾಣಿಯನ್ನು ಸಂಪರ್ಕಿಸಬಹುದಾಗಿದೆ.

1.	ಟೆಂಡರ್ ಮಾಡುವ ವಿಧಾನ	ಇ–ಟೆಂಡರ್ ಹರಾಜು ಮೂಲಕ
2.	ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಟೆಂಡರ್ ವಿವರಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ	ದಿನಾಂಕ: 16.10.2024
3.	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ: 04.11.2024 ಸಂಜೆ 05.00 ಗಂಟೆಯವರೆಗೆ
4.	ಸ್ವೀಕೃತಗೊಂಡ ಟೆಂಡರ್‌ಗಳನ್ನು ತೆರೆಯುವ ದಿನಾಂಕ	ದಿನಾಂಕ: 06.11.2024 ಬೆಳಗ್ಗೆ 11.00 ಗಂಟೆಯವರೆಗೆ
5.	ಪ್ರತಿ ಮಳಿಗೆಗೆ ಇ.ಎಂ.ಡಿ ಮೊತ್ತ	ರೂ.50,000/–
6.	ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22869850/080–26601616 ಇ–ಪ್ರೊಕ್ಯೂರ್‌ಮೆಂಟ್ (E-procurement) ಸೆಂಟರ್ 080–25501216 & 25501227/23010900/23010901.

ಸಹಿ/– ಸಹಾಯಕ ಆಯುಕ್ತರು
ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, ಬೆಂಗಳೂರು–01
ವಾಸಸಂಇ/ವಾ.ಪ್ರ/2584/ಎಸ್‌ಎಸ್‌ಪಿ/2024–25

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು
ಆರ್.ಎ.ಸಂಖ್ಯೆ: 69/2024

ಮೇಲ್ಮನವಿದಾರರು: 1. ಶ್ರೀ ಡಾ॥ ಶಿವಶಂಕರ್, ಬಿನ್ ಲೇಟ್ ಜೆ.ಆರ್. ನಂಜುಂಡಸ್ವಾಮಿ, ವಯಸ್ಸು 68 ವರ್ಷ, 2. ಶ್ರೀಮತಿ ಉಷಾ ಶಿವಶಂಕರ್, ಕೋಂ ಡಾ॥ ಶಿವಶಂಕರ್ ವಯಸ್ಸು 60 ವರ್ಷ ಇಬ್ಬರ ವಾಸ: #657, 14ನೇ ಮೇನ್, 39ನೇ ಅಡ್ಡ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು –560 041.

–ವಿರುದ್ಧ–

ಎದುರುದಾರರು: 4. ಎಂ. ಶಂಕರ್, ಬಿನ್ ಲೇಟ್ ಮರಿಗೌಡ, ವಯಸ್ಸು ಸುಮಾರು 67 ವರ್ಷ, 5. ಎಂ. ಚಂದ್ರಶೇಖರ್, ಬಿನ್ ಲೇಟ್ ಮರಿಗೌಡ, ವಯಸ್ಸು ಸುಮಾರು 66 ವರ್ಷ, 6. ನಂಜಮ್ಮ, ಕೋಂ ಲೇಟ್ ಮರಿಗೌಡ, ವಯಸ್ಸು ಸುಮಾರು 80 ವರ್ಷ, 4 ರಿಂದ 6ನೇ ಎದುರುದಾರರ ವಾಸ: #33, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ದೇವರಾಜಮೊಹಲ್ಲಾ, ಮೈಸೂರು. 7. ಉಮಾ ಪುಟ್ಟರಾಜ್, ಬಿನ್ ಲೇಟ್ ಎಸ್. ಮರಿಗೌಡ, ವಯಸ್ಸು ಸುಮಾರು 54 ವರ್ಷ, ವಾಸ: 1973, 15ನೇ ಮೇನ್, ವಿಜಯನಗರ, ಮೈಸೂರು, 8. ಎಂ. ಉಷಾ, ಬಿನ್ ಲೇಟ್ ಎಸ್. ಮರಿಗೌಡ, ಕೋಂ ವೆಂಕಟಾಚಲ, ವಯಸ್ಸು ಸುಮಾರು 63 ವರ್ಷ, ವಾಸ: # 1921, 14ನೇ ಮೇನ್, ವಿಜಯನಗರ, 2ನೇ ಹಂತ, ಮೈಸೂರು. 9. ಶ್ರೀಮತಿ ಎಂ. ಹೇಮಲತ, ಬಿನ್ ಲೇಟ್ ಎಸ್. ಮರಿಗೌಡ, ವಯಸ್ಸು ಸುಮಾರು 48 ವರ್ಷ, ವಾಸ: #208, ತಮ್ಮಡಗೇರಿ, ಹಿನ್‌ಕಲ್, ಮೈಸೂರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಮೇಲ್ಕಂಡ 4 ರಿಂದ 9ನೇ ಎದುರುದಾರರಾದ ನಿಮ್ಮಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಮೇಲೆ ತಿಳಿಸಿರುವ 1 ರಿಂದ 9 ನೇಯವರಾದ ನಿಮ್ಮಗಳ ಮೇಲೆ, ಮೇಲ್ಕಂಡ ಮೈಸೂರಿನ ಘನ ನ್ಯಾಯಾಲಯದಲ್ಲಿ ಆರ್.ಎ.ಸಂಖ್ಯೆ:69/2/24 ರಂತೆ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣವು ದಿನಾಂಕ: 21/10/2024 ರಂದು ತೆರೆದ ನ್ಯಾಯಾಲಯದಲ್ಲಿ ಬೆಳಿಗ್ಗೆ 11:00 ಗಂಟೆಗೆ ಮೇಲೆ ತಿಳಿಸಿರುವ 4 ರಿಂದ 9 ನೇ ಎದುರುದಾರರಾದ ನಿಮ್ಮಗಳ ಹಾಜರಾತಿಗಾಗಿ ಇರುತ್ತದೆ. ಸದರಿ ದಿನಾಂಕದಂದು ಮೇಲ್ಕಂಡ 4 ರಿಂದ 9 ನೇ ಎದುರುದಾರರಾದ ನೀವುಗಳು ಖುದ್ದಾಗಿ ಆಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಘನ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣದಲ್ಲಿ ನಿಮ್ಮನ್ನು ಏಕಪಕ್ಷೀಯ ಎಂದು ಪರಿಗಣಿಸಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಇದು ತಿಳಿಯುವುದು.

ದಿನಾಂಕ: 09/10/2024 ರಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಲಾಗಿದೆ.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ, ಮುಖ್ಯ ಆಡಳಿತಾಧಿಕಾರಿಗಳು, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಮೈಸೂರು.

ಅರ್ಜಿದಾರರ ಪರ ವಕೀಲರು:
ಶ್ರೀ ಕುಶಾಲ್ ಗೌಡ ಬಿ.ಎಸ್
ನಂ.212/ಎ, 5ನೇ ಕ್ರಾಸ್, 8ನೇ ಮೇನ್ ರೋಡ್ 2ನೇ ಬ್ಲಾಕ್, ಜಯನಗರ, ಬೆಂಗಳೂರು.

ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರ ಕಛೇರಿ (ಅಂಧತ್ವ ವಿಭಾಗ),
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
ಎಂ.ಎಂ.ರಸ್ತೆ, ಫ್ರೇಜರ್‌ಟೌನ್, ಬೆಂಗಳೂರು–05, ದೂರವಾಣಿ–080–25472966

ಸಂಖ್ಯೆ : DHS/NHM/NPCB&VI/Proc/01/2024-25 ದಿನಾಂಕ: 16.10.2024

ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಯ ಎನ್‌ಹೆಚ್‌ಎಂ ಯೋಜನೆಯ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಔಷಧ ಹಾಗೂ ಉಪಕರಣಗಳ ಸರಬರಾಜಿಗೆ KTPP–1999 ನಿಯಮಗಳು 2000ರ ಪ್ರಕಾರ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ವಿವರ	ಟೆಂಡರ್ ಮೊತ್ತ	ಇಎಂಡಿ ಮೊತ್ತ
1	ಡಿಹೆಚ್‌ಎಸ್/ಎನ್‌ಹೆಚ್‌ಎಮ್/ಎನ್‌ಪಿಸಿಬಿ&ವಿಐ/ಪ್ರೊ/01/2024–25	ತಾಲ್ಲೂಕು ಆಸ್ಪತ್ರೆಗಳಲ್ಲಿ ನಿರ್ವಹಿಸುವ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ಔಷಧ ಹಾಗೂ ಉಪಕರಣಗಳನ್ನು ಖರೀದಿಸಲು	ರೂ. 9,00,000/–	ರೂ. 22,500/–

ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿ: **ದಿನಾಂಕ: 16.10.2024 ರಿಂದ 15.11.2024 ಸಂಜೆ 5:30 ಗಂಟೆಯವರೆಗೆ.** ಟೆಂಡರ್ ವಿವರ ಹಾಗೂ ಟೆಂಡರ್ ದಾಸ್ತಾವೇಜಿಗಾಗಿ https://kppp.karnataka.gov.in ಪೋರ್ಟಲ್‌ನಲ್ಲಿ ಪರಿಶೀಲಿಸುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು (ಅಂಧತ್ವ ವಿಭಾಗ), ಹಳೇ ಟಿ.ಬಿ. ಆಸ್ಪತ್ರೆ ಆವರಣ ಹಳೇ ಮದ್ರಾಸ್ ರಸ್ತೆ, ಇಂದಿರಾನಗರ ಬೆಂಗಳೂರು–38, ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ವಾಸಾಸಂಇ/ವಾಪ್ರ/ಜಿಎ/2581/2024–25

ಕರ್ನಾಟಕ ಸರ್ಕಾರ
ಕರ್ನಾಟಕ ಸರ್ಕಾರದ ಸಚಿವಾಲಯ,
ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 81 ಜಿಆರ್‌ಸಿ 2024 ದಿನಾಂಕ:14.10.2024

ತಿದ್ದುಪಡಿ

ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ವಿಜಯನಗರ ಜಿಲ್ಲೆ, ದೂಷಿತ ಸಂಸ್ಥೆಗೆ ಸಂಬಂಧಿಸಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಕೆ.ಪಿ.ಐ.ಡಿ ಕಾಯ್ದೆ ಕಲಂ 3(2) ರನ್ವಯ ಸರ್ಕಾರದಲ್ಲಿ ಮುಟ್ಟುಗೋಲು ಹಾಕಿಕೊಂಡು ಸರ್ಕಾರದ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 05.09.2024 ರಲ್ಲಿ ಅಧಿಸೂಚಿಸಲಾಗಿರುತ್ತದೆ.

ಸದರಿ ಅಧಿಸೂಚನೆಯಲ್ಲಿ, ಅನುಬಂಧ–3 ರ ಕಾಲಂ 2 ರಲ್ಲಿ ಮತ್ತು ಅನುಬಂಧ–1ರ ಕಾಲಂ 3,4,5,7,9 ಹಾಗೂ 11 ರಲ್ಲಿ ಈ ಕೆಳಕಂಡಂತೆ ತಿದ್ದುಪಡಿಯನ್ನು ಮಾಡಲಾಗಿದೆ.

ಇದರ ಬದಲಿಗೆ	ತಿದ್ದಿರುವಂತೆ ಓದಿಕೊಳ್ಳುವುದು
ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್	ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
Letter No. SPLOCA/ADM/GEN/27/2020-21, Dated: 12-07-2024.	Letter No. SPLOCA/AHANA/01/2022, Dated:10-07-2024
ಗುಂಟೆ	ಎಕರೆ–ಸೆಂಟ್ಸ್

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1, ಭೂಮಾಪನ & ವಿಶೇಷ ಕೋಶ)
ವಾಸಾಸಂಇ/ವಾಪ್ರ/2590/2024–25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಮಾ.ಸಂ.ಅ. ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027.

ಸಂ: ಬೆಂಮಸಾಸಂ/ಕೇಕ/ಮಾಸಂಅ/248/2024–25 ದಿನಾಂಕ: 15.10.2024

ಪತ್ರಿಕಾ ಪ್ರಕಟಣೆ

ಬೆಂ.ಮ.ಸಾ.ಸಂಸ್ಥೆಯು, ಕರ್ನಾಟಕ ಸರ್ಕಾರದ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ) ಯೋಜನೆಯಡಿ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ)ಗಳ ಅಭ್ಯರ್ಥಿಗಳಿಗೆ **ಉಚಿತವಾಗಿ ಲಘು ಮತ್ತು ಭಾರಿ ವಾಹನ ಚಾಲನಾ ತರಬೇತಿಯ (ವಸತಿ ಸಹಿತ / ವಸತಿ ರಹಿತ)** ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ. ಸದರಿ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ಜಾತಿ(ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್.ಟಿ)ಗಳ ಅಭ್ಯರ್ಥಿಗಳು ಹೊಂದಿರಬೇಕಾದ ಕನಿಷ್ಠ ಅರ್ಹತೆಗಳು/ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಲಘು ವಾಹನ ಚಾಲನಾ ತರಬೇತಿ (ಕಾರ್/ಜೀಪ್):	ಭಾರಿ ವಾಹನ ಚಾಲನಾ ತರಬೇತಿ (ಬಸ್):
1	ಕನಿಷ್ಠ 18 ವರ್ಷ ಮತ್ತು ಗರಿಷ್ಠ 45 ವರ್ಷ ವಯೋಮಿತಿ ಹೊಂದಿರಬೇಕು. (ಅರ್ಜಿ ಸಲ್ಲಿಕೆ ದಿನಾಂಕಕ್ಕೆ)	ಕನಿಷ್ಠ 20 ವರ್ಷ ಮತ್ತು ಗರಿಷ್ಠ 45 ವರ್ಷ ವಯೋಮಿತಿ ಹೊಂದಿರಬೇಕು. ಮತ್ತು ಲಘು ವಾಹನ ಚಾಲನಾ ಅನುಜ್ಞಾಪತ್ರ ಪಡೆದು ಒಂದು ವರ್ಷ ಪೂರ್ಣಗೊಂಡಿರಬೇಕು. (ಅರ್ಜಿ ಸಲ್ಲಿಕೆ ದಿನಾಂಕಕ್ಕೆ)
2	ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ.	
3	ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ–5	

ಪ್ರಮುಖ ಅಂಶಗಳು:–
1. ಮೊದಲು ಬಂದವರಿಗೆ, ಮೊದಲ ಆದ್ಯತೆಯ ಮೇರೆಗೆ, ಅರ್ಹ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ ನೀಡಲಾಗುತ್ತದೆ.
2. ವಸತಿ ಸಹಿತ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ (ನಿಗದಿತ ಸಂಖ್ಯೆಯಂತೆ) ತರಬೇತಿ ಅವಧಿಯಲ್ಲಿ ವಸತಿ ಸೌಕರ್ಯ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ನೀಡಲಾಗುತ್ತದೆ.
3. ಮೇಲಿನ ಅರ್ಹತೆ ಹೊಂದಿದ್ದು, ಆಸಕ್ತಿ ಇರುವ **ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಸೇವಾ ಸಿಂಧು ಪೋರ್ಟಲ್ (https://sevasindhuservices.karnataka.gov.in)** ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಕೆ ಸಂಬಂಧಿತ ವಿಚಾರಣೆಗಾಗಿ ಸೇವಾಸಿಂಧು ಪೋರ್ಟಲ್ ಸಹಾಯ ಕೇಂದ್ರದ ಸಂಪರ್ಕ ಸಂಖ್ಯೆ: 08022279954, 8792662814/ 8792662816 ಸರ್ಕಾರಿ ರಜೆಯನ್ನು ಹೊರತುಪಡಿಸಿ ಎಲ್ಲಾ ಕೆಲಸದ ದಿನಗಳಲ್ಲಿ (ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.30 ಗಂಟೆ) ಸಂಪರ್ಕಿಸುವುದು.
4. ತರಬೇತಿ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್ www.mybmtc.gov.in ನಿಂದ ಮತ್ತು ದೂರವಾಣಿ ಸಂಖ್ಯೆ: 6364858520 / 7760991085 (ಕಛೇರಿಯ ವೇಳೆಯಲ್ಲಿ (ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 05.30) ಮಾತ್ರ ಸಂಪರ್ಕಿಸುವುದು) ಮುಖಾಂತರ ಪಡೆಯಬಹುದಾಗಿದೆ.
5. ತರಬೇತಿಗೆ ಹಾಜರಾಗುವ ವೇಳೆಯಲ್ಲಿ ಅಭ್ಯರ್ಥಿಗಳು ಮೇಲಿನ ತಮ್ಮ ಮೂಲ ದಾಖಲೆ, **ಸೇವಾ ಸಿಂಧು ಪೋರ್ಟಲ್‌ನಲ್ಲಿ ಮುದ್ರಿತ ಅರ್ಜಿ** ಮತ್ತು ಒಂದು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗುವುದು.

ಸಹಿ/–ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ (ಮಾಸಂಅ), ಬೆಂ.ಮ.ಸಾ.ಸಂಸ್ಥೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್
ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010.
ಹೊರಗುತ್ತಿಗೆ ಆಧಾರದ ಮೇಲೆ ಅರ್ಜಿ ಆಹ್ವಾನ
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿಯಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು M/s. Wisdom Security Services ಸಂಸ್ಥೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:
State Programme Manager – (IT & Biometrics), State Programme Manager - (Finance & Proposal Examination), State Programme Manager - Pedagogy & Learning Management, State Programme Manager - (PIA Co-ordination and Development), State Programme Manager - Inspection, Quality Assurance & Branding, State Programme Manager – Co-ordination, Programme Manager-Non Farm, Programme Manager-Farm Livelihoods, Programme Manager-Capacity Building, ASPM/Programme Manager-Livestock, Project Executive/Executive Assistant-Financial Inclusion, Project Executive/Executive Assistant-HR, Project Executive/Executive Assistant-Social Inclusion, Social Development, FNHW, Convergence & Gender, Consultant(Proc), State Programme Manager-ASMITHE/Marketing, State Programme Manager-Knowledge Management & Communication/GAC/IEC, State Programme Manager-Social inclusion, Social Development, FNHW, Convergence & Gender, State Programme Manager-Social Mobilization & Institution Building, State Programme Manager-Farm Livelihoods, State Programme Manager-Financial Management.
ಮೇಲಿನ ಹುದ್ದೆಗಳಿಗೆ ಆಸಕ್ತಿಯಿರುವ ಅರ್ಹ ಅಭ್ಯರ್ಥಿಗಳು ದಿನಾಂಕ 28.10.2024 ರಂದು ಸಂಜೆ 5:00 ಘಂಟೆಯೊಳಗೆ ಸಂಸ್ಥೆಯ ಜಾಲತಾಣ ವೀಕ್ಷಿಸಿ Google Link https://jobs.wisdomsecurity.in ಮೂಲಕ ಎಲ್ಲಾ ವಿವರಗಳೊಂದಿಗೆ ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ ಪ್ರಮಾಣ, ಕಲ್ಯಾಣ ಕರ್ನಾಟಕ, ವರ್ಗ ಇತ್ಯಾದಿ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಿದೆ. ಅಪೂರ್ಣ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ Ph: +91 99452 30206, +91 99452 30204, + 91 99452 30210. ರ ಮೂಲಕ ಸಂಪರ್ಕಿಸಲು ತಿಳಿಸಿದೆ.
ವಿಶೇಷ ಸೂಚನೆ : ಹಿಂದೆ ಹೊರಡಿಸಿದ ಅಧಿಸೂಚನೆಯನ್ನು ತಾಂತ್ರಿಕ ಕಾರಣದಿಂದ ರದ್ದುಪಡಿಸಿ ಹೊಸದಾಗಿ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.

Accounts & Finance

WANTED EXPERIENCED Female Accounts Assistant qualification B.Com with knowledge of tally, GST, billing, accounting, & good communication skills kannada English & hindi for office located at Rajajinagar industrial town, Bangalore-10. send your resume for the following mail ID : info@madhuproducts.in

PUBLIC NOTICE

CAUTION NOTICE
FOR take-over of the residential Apartment building project of land bearing Sy.No.68/2 situated at **Huskur Village, Bidarahalli Hobli, Bangalore East Taluk.**
Purchasers and customers of Flats in the project previously known as KSR Basil are informed that, I, **Mr.L.Haribabu**, son of Sri.L.Lakshmaiah, the land owner of Sy.No.68/2 of Huskur village have taken over the development of the project previously managed by the Developer **M/s.KSR Properties Private Limited** pursuant to the Cancellation of the Joint Development Agreement and the General Power of Attorney executed by me in favour of the said Developer.
Existing Purchasers/Customers and the general public are cautioned not to deal with the said Developer and for any further enquiries, contact me at the number mentioned below and inspite of it if any person/s enter into any agreement or deal with them in respect of the flats in the said project earlier known as KSR BSIL and presently named as HALCYON, by HARI DHRUVA VENTURES he/she will be doing so entirely at his/her own cost and risk.
L. HARIBABU,
Proprietor-Hari Dhruva Ventures
Contact - 9606461116

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕ್ಲಾಸಿಫೈಡ್ಸ್ CONNECT

Grand Flea Market Presents
ಬೆಂಗಳೂರು ಉತ್ಸವ
Bengaluru Utsava
(Art, Craft, Handlooms & Lifestyle Exhibition)
Deepavali Shopping Carnival
Date: 11th October to 27th October 2024
Timing: 10:30 AM - 7:00 PM
Karnataka Chitrakala Parishath
Kumara Krupa Road, Bengaluru
17 Days Exhibition Entry Free
Contact: 6364685716 / 9036658774
100+ Shopping Stalls | Live Performance & More

Gombeyatta Live 19th October 2024 5.00 PM to 6.30 PM
Yakshagana Live 20th October 2024 5.00 PM to 6.30 PM
Hulivesha Live 26th October 2024 5.00 PM to 6.30 PM
HANDLOOMS | HOME DECOR | HANDICRAFTS | CLOTHING | JEWELLERS

PUBLIC NOTICE
The General Public is hereby informed that our Client is intending to purchase the below mentioned schedule of the property from its joint owners **DR. Prem Kumar Bysani** and **DR. (Mrs) N. S. Nagalakshmi** both residing at "PRATHIKA" 2nd Cross, Siddaganga Extension, Tumkur- 572102, Karnataka.
If anybody is having any objection, claim, interest, dispute for above intended sale transaction, he / she / they may contact the undersigned with the documentary proof substantiating his / her / their objections / claims / details of dispute /s within TEN (10) days from the date of this publication, failing which, my client will proceed to complete the sale transaction with the above owner as if there are no third party claims / objections / disputes in respect of the Schedule Property and thereafter no claims / objections / disputes will be entertained.
SCHEDULE OF THE PROPERTY
An undivided share of land measuring 179.98 sq.ft with a share of built up area in the building of 2.72 sq.ft. and Unit No. T-1001 in Tenth floor having a total super built up area of 808 sq.ft. without car parking space in the Multi-storied building known as "PRESTIGE MERIDIAN-I" bearing Corporation No.29, situated in Mahatma Gandhi Road, in Corporation Division No. 61, Bengaluru.
Shobha Bhavikatti
Advocate
LEGALIS, 308, 3rd Floor
Brigade Towers, Brigade Road,
Bangalore 560025
Office No. 080-29700988
E Mail .shobha.legalis@gmail.com

MADHU PRODUCTS
NANDI Regd. Trade Mark Copy right
Manufacturers & Dealers in All kinds of NANDI BRAND Paper and Board, Office Stationery Files.
E-mail: info@madhuproducts.in Website: www.madhuproducts.in

584 RING FILE | ART NO. 957 | 955
Available at all leading stationery shops

BUILDERS ESSENTIAL

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE SELLING

Flat

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

Sites

Hennur

40*50 N/F Site 'B' Khata for Sale 7000/-, 30*40 E/F Site 'B' Khata. 9972849555/ 7259678555.

PERSONAL

Change of Name

CHANGE OF NAME
I, OM PRAKASH SARDARIRAL, Residing at No.114, SIRI GREENS, 3rd Cross, 3rd Main Ramanjaneya Nagar, Bengaluru - 560061, have changed my name to **OM PARKASH** vide affidavit dated 15.10.2024, before notary S. N. Madhu, Bengaluru. Henceforth I shall be called as **OM PARKASH** only

I, ROHIT DINAKAR ADHYAM S/o.Dinakar A. R/a#B101 Raja Prakruthi Apartments 4th Cross 1st Block Jayanagar Bangalore 560011 have changed my Name to ROHIT DINAKAR vide affidavit dated:12.10.2024 before Notary KV.Jagannath Reddy Bangalore

I, JAIN ASHISH MADHUBHAI, Residing at #87, 2nd Cross, Kalathur Layout, Gangamma Circle, Jalahalli East, Bangalore-13 have changed my name as ASHISH JAIN, vide affidavit dated 14/10/2024 before Notary V.Anjanappa, Bengaluru

I, VENKATESHA N S/o Narayanappa have changed my name to VENKATESH N vide affidavit dated: 16/10/2024 Before Notary Shreeshail B.Gobbani Bangalore.

I, MUTHURAJ S/o S Muniyappa, aged about 53 Years, resident of Muneshwar Nagar, Kolar. I have changed my name to M. Mutturaj vide affidavit dated 14.10.2024 before Notary M. Krishne Gowda Kolar. Henceforth I shall be called as M.Mutturaj only.

CHANGE OF NAME
I, **Shantadurga Devi M Hulinaykar W/o Dr. M.R. Hulinaykar** Residing at Shiva deepti Nilaya, 3rd Cross, S.S. Puram, Tumkur Town, Tumkur District. In Passport No. L9675203 my name entered as **HULI NAYAKAR SHANTA DURGA DEVI.** But my correct name is **SHANTADURGA DEVI M HULINAYKAR** as per Aadhar Card No. 6269 74773562 vide affidavit date **15.10.2024** before Advocate & Notary S.V. Sudhamani, Tumakuru.

DH DECCAN HERALD Classifieds More value, more impact | NAME CHANGE | ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

1.ಯಲಹಂಕ ಕೋಗಿಲು ಕ್ರಾಸ್ ಬಳಿಯ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ನಲ್ಲಿ ನಿವಾಸಿಗಳು ಬುಧವಾರ ಟ್ರ್ಯಾಕ್ಟರ್‌ನಲ್ಲಿ ಸಂಚರಿಸಿದರು. 2.ಸಾಯಿ ಬಡಾವಣೆ ಜಲಾವೃತವಾಗಿರುವುದು ಪ್ರಜಾವಾಣಿ ಚಿತ್ರ : ಎಂ.ಎಸ್.ಮಂಜುನಾಥ್

ಬುಧವಾರ ತುಂತುರು ಮಳೆ ● ಕಾಲುವೆಗಳ ಸ್ವಚ್ಛತೆಗೆ ಮುಂದಾದ ಬಿಬಿಎಂಪಿ

ತಗ್ಗಿದ ಮಳೆ ಅಬ್ಬರ; ಸಂಕಷ್ಟ ಅಪಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ಮಳೆ ಅಬ್ಬರ ತಗ್ಗಿದರೂ, ಮೋಡ ಕವಿದ ವಾತಾವರಣದಲ್ಲಿ ಆಗಾಗ ತುಂತುರು ಮಳೆ ಸುರಿಯಿತು. ಮಂಗಳವಾರದಿಂದ ಸುರಿದಿದ್ದ ಮಳೆಯಿಂದ ಜಲಾವೃತಗೊಂಡಿದ್ದ ಪ್ರದೇಶಗಳಲ್ಲಿ ಜನರ ಪಡಿಪಾಟಲು ಮುಂದುವರಿದಿದೆ.

ನಗರದಲ್ಲಿ ಎಲ್ಲೆಡೆ ಬುಧವಾರ ಬೆಳಿಗ್ಗೆಯಿಂದ ರಾತ್ರಿಯವರೆಗೆ ಆಗಾಗ್ಗೆ ತುಂತುರು ಮಳೆಯಾಯಿತು. ನಾಗಪುರದಲ್ಲಿ ಮಾತ್ರ ಒಂದು ಸೆಂ.ಮೀನಷ್ಟು ಮಳೆಯಾಗಿದೆ.

ಮಂಗಳವಾರ ಸುರಿದಿದ್ದ ಮಳೆಗೆ ಜಲಾವೃತವಾಗಿದ್ದ ಯಲಹಂಕ ಹಾಗೂ ಕೆ.ಆರ್.ಪುರ ಭಾಗದ ಪ್ರದೇಶಗಳಲ್ಲಿ ಬಿಬಿಎಂಪಿ ವತಿಯಿಂದ ಬುಧವಾರ ಪರಿಹಾರ ಕಾರ್ಯ ನಡೆದರೂ ನೀರು ಕಡಿಮೆಯಾಗಲಿಲ್ಲ. ಯಲಹಂಕ ಕೆರೆಯ ಸಮೀಪದ ಕೇಂದ್ರೀಯ ವಿಹಾರ್ ಹಾಗೂ ಕೆ.ಆರ್. ಪುರದ ಸಾಯಿ ಬಡಾವಣೆಯಲ್ಲಿ ನೀರು ತುಂಬಿಕೊಂಡಿತ್ತು. ಕಾರು, ದ್ವಿಚಕ್ರ ವಾಹನ ಸಂಚಾರ ಅಸಾಧ್ಯವಾಗಿದ್ದ ಕಾರಣದಿಂದ ಟ್ರ್ಯಾಕ್ಟರ್‌ಗಳಲ್ಲಿ ನಿವಾಸಿಗಳು ಸಂಚರಿಸಿದರು.

ಮಾನ್ಯತಾ ಟೆಕ್ ಪಾರ್ಕ್ ಒಳಗಿನ ರಸ್ತೆಗಳಲ್ಲಿ ನೀರು ತುಂಬಿಕೊಂಡಿದ್ದು, ವಾಹನ ಸವಾರರು ಪರದಾಡಿದರು. ಪಾರ್ಕ್‌ನಲ್ಲಿ ಬಹುಮಹಡಿ ಕಟ್ಟಡದ ನಿರ್ಮಾಣ ಕಾಮಗಾರಿ ನಡೆದಿದ್ದು, ಶೆಡ್ ನಿರ್ಮಿಸಲಾಗಿತ್ತು. ಮಣ್ಣು ಕುಸಿದು, ಶೆಡ್ ಸಮೇತ ಪ್ರಪಾತಕ್ಕೆ ಬಿದ್ದಿದೆ. ಈ ಕಟ್ಟಡದ ನೆಲ ಅಂತಸ್ತುಗಳಿಗೆ ಮಣ್ಣು ಅಗೆಯಲಾಗಿದ್ದು, ಸುತ್ತಮುತ್ತಲಿನ ರಸ್ತೆಗಳಲ್ಲಿ ತುಂಬಿದ್ದ ನೀರು, ಜಲಪಾತದಂತೆ ಧುಮುಕಿತು.

ಯಲಹಂಕದಲ್ಲಿ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಹಾಗೂ ರಮಣಶ್ರೀ ಕ್ಯಾಲಿಫೋರ್ನಿಯಾ ಲೇಔಟ್‌ನಲ್ಲಿನ ಸಂತ್ರಸ್ತರಿಗೆ ನೆರವಾಗಲು ಸಹಾಯ ಕೇಂದ್ರ ತೆರೆಯಲಾಗಿತ್ತು.

ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಮಳೆಗೆ ಮಣ್ಣು ಕುಸಿದಿರುವುದು

ವಲಯ ಆಯುಕ್ತ ಕರೀಗೌಡ ನೇತೃತ್ವದ ತಂಡ ಮಂಗಳವಾರ ರಾತ್ರಿಯಿಂದ ಕೇಂದ್ರದಲ್ಲಿದ್ದು ಕಾರ್ಯನಿರ್ವಹಿಸಿತು. ನಿವಾಸಿಗಳಿಗೆ ಕುಡಿಯುವ ನೀರು, ಹಾಲು, ಬ್ರೆಡ್, ಬಿಸ್ಕತ್ತು ಇನ್ನಿತರೆ ಅಗತ್ಯ ವಸ್ತುಗಳನ್ನು ನೀಡಲಾಯಿತು.

ತುಷಾರ್ ಗಿರಿನಾಥ್ ಭೇಟಿ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಯಲಹಂಕದಲ್ಲಿ ಮಳೆಯಿಂದ ಸಂಕಷ್ಟಕ್ಕೊಳಗಾದ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಅಪಾರ್ಟ್‌ಮೆಂಟ್‌ನಿಂದ ನಿವಾಸಿಗಳು ಹೊರ ಬರಲು ಹಾಗೂ ಒಳ ಹೋಗಲು ಎರಡು ಟ್ರ್ಯಾಕ್ಟರ್‌ಗಳ ವ್ಯವಸ್ಥೆ ಮಾಡಲಾಗಿದೆ.

ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ಮೂರು ಅಡಿ ನೀರು ನಿಂತಿದ್ದು, ಕಚ್ಚಾ ಕಾಲುವೆ ಮೂಲಕ ನೀರು ಹರಿದು ಹೋಗಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಯಲಹಂಕ ಕೆರೆಗೆ ಎರಡು ಕೋಡಿಗಳಿದ್ದು, ಉತ್ತರದಿಂದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಕಡೆಗೆ ಹರಿಯುವ ನೀರನ್ನು ಕಡಿಮೆ ಮಾಡಬೇಕು. ದಕ್ಷಿಣದ ಕೋಡಿಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

47 ಮರ ಧರೆಗೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಬುಧವಾರ ಒಟ್ಟು 47 ಮರಗಳು ಧರೆಗುರುಳಿವೆ. 57 ಸ್ಥಳಗಳಲ್ಲಿ ಮರಗಳ ಕೊಂಬೆಗಳು ಬಿದ್ದಿದ್ದವು.

ಗ್ಲೋಬಲ್ ಸಿಟಿ ರಸ್ತೆ ಕೆಸರುಮಯ: ರಾಜರಾಜೇಶ್ವರಿನಗರ: ಮೈಸೂರು ರಸ್ತೆಯಿಂದ ಗ್ಲೋಬಲ್ ಸಿಟಿ, ಹಲಗೆವಡೇರಹಳ್ಳಿ, ಪಟ್ಟಣಗೆರೆ, ಜಯಣ್ಣ ಲೇಔಟ್, ಬೆಮಲ್ ಕಡೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳಿದ್ದು, ಕೆಸರುಮಯವಾಗಿದೆ. ನೀರು ಬುಧವಾರ ಸಂಜೆವರೆಗೂ ತುಂಬಿಕೊಂಡಿತ್ತು.

ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ ಮೈಸೂರು ರಸ್ತೆಯಿಂದ ಗ್ಲೋಬಲ್ ವಿಲೇಜ್‌ವರೆಗೆ ಚರಂಡಿ ನಿರ್ಮಿಸಲು ರಸ್ತೆ ಅಗೆಯಲಾಗಿದೆ. ಕಾಮಗಾರಿ ಆರಂಭಗೊಂಡು ಆರು ತಿಂಗಳಾದರೂ ಪ್ರಗತಿಯಾಗಿಲ್ಲ. ಹೀಗಾಗಿ ರಸ್ತೆಯಲ್ಲಿ ಸಂಚರಿಸುವುದು ದುಸ್ತರವಾಗಿದೆ.

ಸಣ್ಣ ಮಳೆಗೂ ಈ ರಸ್ತೆಯಲ್ಲಿ ನೀರು ನಿಲ್ಲುತ್ತದೆ. ಗುಂಡಿ ಇರುವುದು ಗೊತ್ತಾಗದೆ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ.

‘ತಾಂತ್ರಿಕ ತೊಂದರೆಯಿಂದ ವಿಳಂಬ’: ‘ತಾಂತ್ರಿಕ ತೊಂದರೆ, ಚುನಾವಣೆ ಕಾರಣ ಕಾಮಗಾರಿ ವಿಳಂಬವಾಗಿದೆ. ತ್ವರಿತವಾಗಿ ಚರಂಡಿ ಕಾಮಗಾರಿ ಮುಗಿಸಿ ವೈಟ್ ಟಾಪಿಂಗ್ ಮುಗಿಸಲಾಗುವುದು’ ಎಂದು ಬಿಬಿಎಂಪಿ ರಾಜರಾಜೇಶ್ವರಿನಗರ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಹಮ್ಮದ್ ಅಜ್ಮಲ್ ಪ್ರತಿಕ್ರಿಯಿಸಿದರು.

ವಲಯಗಳಲ್ಲಿ ಬಿಬಿಎಂಪಿ ಕ್ರಮ

ಯಲಹಂಕ ವಲಯ: ಯಲಹಂಕ ವಲಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮಳೆಯಾಗಿದೆ. ಕೇಂದ್ರೀಯ ವಿಹಾರ ಅಪಾರ್ಟ್‌ಮಂಟ್‌ನಲ್ಲಿ ನೀರು ನಿಂತಿದೆ. ನೀರು ತೆರವಿಗೆ 13 ಪಂಪ್‌ಗಳನ್ನು ಬಳಸಲಾಗುತ್ತಿದ್ದು, ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಪಾಲಿಕೆ ಹಾಗೂ ಅಗ್ನಿಶಾಮಕ ಅಧಿಕಾರಿ, ಸಿಬ್ಬಂದಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ.

ರಮಣಶ್ರೀ ಕ್ಯಾಲಿಫೋರ್ನಿಯಾ ಲೇಔಟ್‌ನಲ್ಲಿ ನೀರನ್ನು ಪಂಪ್ ಮೂಲಕ ತೆರವುಗೊಳಿಸಲಾಗಿದೆ. ಅಧಿಕಾರಿಗಳು ಭೇಟಿ ನೀಡಿ ಸಮೀಕ್ಷೆ ನಡೆಸುತ್ತಿದ್ದು, ಅರ್ಹರಿಗೆ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ತಿಳಿಸಿದೆ.

ಮಹದೇವಪುರ ವಲಯ: ಗೆದ್ದಲಹಳ್ಳಿ ಹಾಗೂ ಸಾಯಿ ಲೇಔಟ್‌ನಲ್ಲಿರುವ ರಾಜಕಾಲುವೆಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿದ್ದು, ಅದು ಬಡಾವಣೆಗೆ ನುಗ್ಗಿ ಜಲಾವೃತವಾಗಿದೆ. ಮನೆಗಳಿಗೆ ನೀರು ನುಗ್ಗಿರುವಂತಹ ನಿವಾಸಿಗಳಿಗೆ ಹೋಟೆಲ್‌ನಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿದೆ.

ಬೆಸ್ಲಿನ್ ಗಾರ್ಡನ್, ಸಪ್ತಗಿರಿ ಲೇಔಟ್, ಚಿನ್ನಪ್ಪನಹಳ್ಳಿಯ ರಸ್ತೆ, ಬಳಗೆರೆ ರಸ್ತೆ, ಸಕ್ರಾ ಆಸ್ಪತ್ರೆಯ ರಸ್ತೆ, ಸರ್ಜಾಪುರ ರಸ್ತೆಯ ಜಿನ್ನಸಂದ್ರ ಜಂಕ್ಷನ್, ಪಣತ್ತೂರು ರೈಲ್ವೆ ಕೆಳಸೇತುವೆ ಹಾಗೂ ವಿಬ್‌ಗಯಾರ್ ಸ್ಕೂಲ್ ರಸ್ತೆಯಲ್ಲಿ ನಿಂತಿದ್ದ ನೀರನ್ನು ಪಂಪ್ ಮೂಲಕ ತೆರವುಗೊಳಿಸಲಾಗಿದೆ.

ಪಶ್ಚಿಮ ವಲಯ: ಓಕಳೀಪುರ ಅಷ್ಟಪಥ ಕಾರಿಡಾರ್‌ನಲ್ಲಿ ರೈಲ್ವೆ ಇಲಾಖೆಯಿಂದ ಕಾಮಗಾರಿ ಪೂರ್ಣಗೊಂಡಿದೆ. ಆ ಸ್ಥಳದಲ್ಲಿ ಚರಂಡಿ ಕಾಮಗಾರಿ ಬಾಕಿ ಇದ್ದು, ನೀರು ನಿಲ್ಲುತ್ತಿದೆ. ಪಂಪ್‌ನಿಂದ ನೀರು ತೆರವುಗೊಳಿಸಲಾಗುತ್ತಿದೆ.

ದಕ್ಷಿಣ ವಲಯ: ನಾಯಂಡಹಳ್ಳಿ ಜಂಕ್ಷನ್, ದೀಪಾಂಜಲಿ ನಗರ, ಆರ್.ವಿ. ರಸ್ತೆ, ಕದಿರೇನಹಳ್ಳಿ, ಹೊರ ವರ್ತುಲ ರಸ್ತೆ, ಮಡಿವಾಳ ಕೆಳಸೇತುವೆ, ಜೆ.ಸಿ. ರಸ್ತೆಯಲ್ಲಿ (ಲಾಲ್ ಬಾಗ್ ಹತ್ತಿರ) ನೀರು ತೆರವುಗೊಳಿಸಲಾಗಿದೆ.

ಪೂರ್ವ ವಲಯ: ಸರ್ವಜ್ಞನಗರ ವ್ಯಾಪ್ತಿಯಲ್ಲಿ ಸುರಿದ ಜೋರು ಮಳೆಯಿಂದ ರಾಜಕಾಲುವೆಯಲ್ಲಿ ಹಿಮ್ಮುಖವಾಗಿ ನೀರು ಹರಿದು, ಕೆಲವು ರಸ್ತೆಗಳಲ್ಲಿ ನೀರು ನಿಂತಿತ್ತು. ಇಂದಿರಾನಗರದ 17ನೇ ಸಿ ಮತ್ತು ಡಿ ಕ್ರಾಸ್‌ನಲ್ಲಿ ಜಲಮಂಡಳಿಯ ಪೈಪ್‌ಲೈನ್ ಬಂದ್ ಆಗಿದ್ದರಿಂದ ನೀರು ಹೊರಬರುತ್ತಿದ್ದು, ಜಲಮಂಡಳಿ ಅಧಿಕಾರಿಗಳು ಕಾರ್ಯನಿರತರಾಗಿದ್ದಾರೆ.

ಬೊಮ್ಮನಹಳ್ಳಿ ವಲಯ: ಹರಳೂರು ಬಳಿಯ ಸಿಲ್ವರ್ ಕೌಂಟಿ ರಸ್ತೆ, ಹುಳಿಮಾವು ಕೆರೆ ಪಕ್ಕದ ರಸ್ತೆ, ಎಚ್‌ಎಸ್‌ಆರ್ ಸೆಕ್ಟರ್ 7ರ ರಸ್ತೆ ಜಲಾವೃತವಾಗಿದ್ದು, ಆ ಸಮಸ್ಯೆಯನ್ನು ಬಗೆಹರಿಸಲಾಗಿದೆ.

ದಾಸರಹಳ್ಳಿ ವಲಯ: ನಿಸರ್ಗ ಲೇಔಟ್‌ನಲ್ಲಿ ನೀರುಗಾಲುವೆ ಮುಚ್ಚಿಕೊಂಡಿದ್ದು, ಪರ್ಯಾಯವಾಗಿ ಕಚ್ಚಾ ಚರಂಡಿ ಮಾಡಿ ನೀರು ಹರಿಯುವಂತೆ ಮಾಡಲಾಗಿದೆ. ನೀರುಗಾಲುವೆಯನ್ನು ಜೆಸಿಬಿ ಮೂಲಕ ಸ್ವಚ್ಛಗೊಳಿಸಲಾಗುತ್ತಿದೆ.

ರಾಜರಾಜೇಶ್ವರಿ ನಗರ: ಜೆ.ಪಿ ಪಾರ್ಕ್ ಹಾಗೂ ಲಗ್ಗೆರೆ ರಸ್ತೆಯ ನೀರು ತೆರವಾಗಿದೆ.

‘ಮಳೆ ನೀರು ವಾಪಸು ಕಳುಹಿಸಲಾಗುತ್ತದೆಯೇ’

ಜಿ.ಪರಮೇಶ್ವರ

ಬೆಂಗಳೂರು: ‘ಮಳೆಯ ನೀರು ನೆಲದಲ್ಲೇ ಹರಿಯಬೇಕು, ಅದನ್ನು ಆಕಾಶಕ್ಕೆ ವಾಪಸು ಕಳುಹಿಸಲು ಆಗುತ್ತದೆಯೇ’ ಎಂದು ಗೃಹಸಚಿವ ಜಿ. ಪರಮೇಶ್ವರ ಪ್ರಶ್ನಿಸಿದ್ದಾರೆ.

‘ಬೆಂಗಳೂರಿನಲ್ಲಿ ಮಳೆಯಿಂದ ಅವಾಂತರ ಸೃಷ್ಟಿ ಆಗಿದೆಯಲ್ಲ’ ಎಂದು ಸುದ್ದಿಗಾರರು ಗಮನ ಸೆಳೆದಾಗ ಅವರು ಹೀಗೆ ಪ್ರತಿಕ್ರಿಯಿಸಿದರು.

‘ಎಂತಹ ಸುಸಜ್ಜಿತ ನಗರವಾದರೂ ಇಂತಹ ಮಳೆಗೆ ಅಸ್ತವ್ಯಸ್ಥವಾಗಲಿದೆ. ನಗರದಲ್ಲಿ ಅಕ್ಟೋಬರ್‌ನಲ್ಲಿ ಹೀಗೆ ಮಳೆ ಆಗಿರುವುದು ಆಶ್ಚರ್ಯಕರ. ಹೀಗಾಗಿ ಅಸ್ತವ್ಯಸ್ಥವಾಗಿದೆ. ನ್ಯೂಯಾರ್ಕ್, ಲಂಡನ್‌ನಲ್ಲಿ ಇಂತಹ ಮಳೆ ಬಂದಾಗಲೂ ಹೀಗೆ ಆಗುತ್ತದೆ. ಅದನ್ನು ಸರಿಯಾಗಿ ನಿರ್ವಹಿಸಬೇಕು’ ಎಂದರು.

ಸಾಯಿ ಬಡಾವಣೆ: ತಪ್ಪದ ಪರದಾಟ

ಕೆ.ಆರ್.ಪುರ: ಎರಡು ದಿನಗಳಿಂದ ಸುರಿದ ಮಳೆಗೆ ಹೊರಮಾವು ವಾರ್ಡ್‌ನ ಸಾಯಿ ಬಡಾವಣೆ ಜಲಾವೃತಗೊಂಡು ಜನಜೀವನ ಅಸ್ತವ್ಯಸ್ಥಗೊಂಡಿತ್ತು.

ಸಾಯಿ ಬಡಾವಣೆಗೆ ಮಳೆ ನೀರು ನುಗ್ಗಿದ ಪರಿಣಾಮ ಗೃಹ ಉಪಯೋಗಿ ವಸ್ತುಗಳು ಹಾಗೂ ದವಸ ಧಾನ್ಯಗಳು ಮಳೆ ನೀರಿನಲ್ಲಿ ತೇಲಾಡಿದವು. ನಿವಾಸಿಗಳು ಹೊರಬರಲು ಸಾಧ್ಯವಾಗಲಿಲ್ಲ. ಹಲವರು ತಾರಸಿ ಮೇಲೆ ಆಶ್ರಯ ಪಡೆದುಕೊಂಡರು.

ಸ್ಥಳಕ್ಕೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಅಗ್ನಿಶಾಮಕ ಸಿಬ್ಬಂದಿ ನೀರು ತೆರವಿಗೆ ಕ್ರಮವಹಿಸಿದರು. ಮಂಗಳವಾರ ರಾತ್ರಿ ಸುರಿದಿದ್ದ ಮಳೆಗೆ ಹೆಬ್ಬಾಳ, ಆರ್.ಟಿ.ನಗರ, ಪುಲಕೇಶಿನಗರದ ಮೂಲಕ ಬಂದ ರಾಜಕಾಲುವೆಯ ನೀರು ಗೆದ್ದಲಹಳ್ಳಿಯ ರೈಲ್ವೆ ವೆಂಟ್‌ನಿಂದ ಸಾಯಿ ಬಡಾವಣೆಗೆ ನುಗ್ಗಿದೆ.

‘ಪ್ರವಾಹ ಉಂಟಾದಾಗ ಬರುವ ಅಧಿಕಾರಿಗಳು ಆದ ಹಾನಿಗೆ ₹ 10 ಸಾವಿರ ನೀಡಿ ಕೈತೊಳೆದುಕೊಳ್ಳುತ್ತಾರೆ. ಮಳೆ ಬಂದಾಗ ಇಲ್ಲಿ ಪ್ರತಿಬಾರಿ ಪ್ರವಾಹ ಸ್ಥಿತಿ ಉಂಟಾಗುತ್ತದೆ. ಸಮಸ್ಯೆಗೆ ಮುಕ್ತಿ ಸಿಕ್ಕಿಲ್ಲ’ ಎಂದು ಸ್ಥಳೀಯ ನಿವಾಸಿ ಮಧುಶ್ರೀ ಆಕ್ರೋಶ ವ್ಯಕ್ತಪಡಿಸಿದರು.

ಮೆಟ್ರೊ ಹಳಿಗೆ ಬಿದ್ದ ಮರದ ಕೊಂಬೆ

ಬೆಂಗಳೂರು: ‘ನಮ್ಮ ಮೆಟ್ರೊ’ ನೇರಳೆ ಮಾರ್ಗದಲ್ಲಿ ಸ್ವಾಮಿ ವಿವೇಕಾನಂದ–ಇಂದಿರಾನಗರ ಮೆಟ್ರೊ ನಿಲ್ದಾಣಗಳ ನಡುವೆ ಹಳಿಯ ಮೇಲೆ ಮರದ ಕೊಂಬೆ ಬಿದ್ದ ಕಾರಣ, ಬುಧವಾರ ಬೆಳಿಗ್ಗೆ ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ಬೆಳಿಗ್ಗೆ 6.15ರ ವೇಳೆಗೆ ಈ ಮಾರ್ಗದಲ್ಲಿ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡಿತು. ಬಳಿಕ ಬೈಯಪ್ಪನಹಳ್ಳಿ- ವೈಟ್ ಫೀಲ್ಡ್ ನಡುವೆ ಹಾಗೂ ಎಂ.ಜಿ. ರಸ್ತೆ- ಚಲ್ಲಘಟ್ಟ ನಡುವೆ ರೈಲು ಸಂಚಾರ ಆರಂಭಿಸಲಾಯಿತು.

ಮಳೆಯ ನಡುವೆ ಬಿಎಂಆರ್‌ಸಿಎಲ್ ಸಿಬ್ಬಂದಿ ಎರಡು ಗಂಟೆ ಕಾರ್ಯಾಚರಣೆ ನಡೆಸಿ ಕೊಂಬೆ ತೆರವುಗೊಳಿಸಿದರು. ಬಳಿಕ ನೇರಳೆ ಮಾರ್ಗದಲ್ಲಿ ಪೂರ್ಣ ಪ್ರಮಾಣದಲ್ಲಿ ಮೆಟ್ರೊ ಸಂಚಾರ ಆರಂಭವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮನೆಗಳಿಗೆ ರಾಜಕಾಲುವೆ ನೀರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಂಗಳವಾರ ರಾತ್ರಿ ಸುರಿದ ಮಳೆಗೆ ರಾಜಕಾಲುವೆ ನೀರು ಉಕ್ಕಿ ಹರಿದಿದ್ದರಿಂದ ರಾಮಮೂರ್ತಿನಗರ ವಾರ್ಡಿನ ಅಂಬೇಡ್ಕರ್ ನಗರದ 50ಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತು.

ಕೌದೇನಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ನೀರು ಸರಾಗವಾಗಿ ಹರಿಯದೆ ಅಂಬೇಡ್ಕರ್ ನಗರದ ತಗ್ಗುಪ್ರದೇಶದ ಮನೆಗಳಿಗೆ ನೀರು ನುಗ್ಗಿತು. ಜನರು ರಾತ್ರಿಯಿಡೀ ನೀರು ಹೊರ ಹಾಕುವಲ್ಲಿ ಹೈರಾಣರಾದರು.

ರಾಜಕಾಲುವೆಯಲ್ಲಿ ಸ್ವಚ್ಛತೆ ಕಾಪಾಡದ ಕಾರಣದಿಂದ ರಾತ್ರಿ ಸುರಿದ ಮಳೆ ನೀರು ಸರಾಗವಾಗಿ ಹರಿಯದೆ ಬಡಾವಣೆಗೆ ನುಗ್ಗಿದೆ. ನಿವಾಸಿಗಳು ದಿನನಿತ್ಯದ ಕೆಲಸಗಳಿಗೆ ತೆರಳದೆ ನೀರು ಹೊರಹಾಕುವಲ್ಲಿ ನಿರತರಾಗಿದ್ದರು. ಗೃಹೋಪಯೋಗಿ ವಸ್ತುಗಳು ನೀರು ಪಾಲಾದವು. ಮನೆಯಲ್ಲಿದ್ದ ಬಾಣಂತಿಯರು ಮಳೆ ನೀರಿನಲ್ಲಿ ಸಿಲುಕಿಕೊಂಡು ಸಂಕಷ್ಟ ಅನುಭವಿಸಿದರು.

ಮಳೆ ನೀರನ್ನು ಮನೆಯಿಂದ ಹೊರ ಹಾಕಲು ಮಹಿಳೆ ಹರಸಹಾಸಪಟ್ಟರು

ಗರಿಷ್ಠ ತಾಪಮಾನ 21 ಡಿಗ್ರಿ ಸೆ. ಇಳಿಕೆ

ಬೆಂಗಳೂರು: ನಗರದಲ್ಲಿ ತಾಪಮಾನ ಕುಸಿತ ಕಂಡಿದೆ. ಗರಿಷ್ಠ ತಾಪಮಾನ 21.9 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ. ಇದು ಈ ವರ್ಷ ದಾಖಲಾದ ಅತೀ ಕಡಿಮೆ, ಗರಿಷ್ಠ ಉಷ್ಣಾಂಶವಾಗಿದೆ. ಇದರಿಂದ ನಗರದಲ್ಲಿ ಚಳಿ ವಾತಾವರಣವಿದೆ. ಕನಿಷ್ಠ ಉಷ್ಣಾಂಶವೂ 19.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ.

ಜುಲೈನಲ್ಲಿ ಗರಿಷ್ಠ ತಾಪಮಾನ 24.1 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಬಿಸಿಲಿನಿಂದಾಗಿ ಈ ತಿಂಗಳ ಮೊದಲ ವಾರ ತಾಪಮಾನ ಹೆಚ್ಚಿದ್ದು, ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಕರ್ನಾಟಕ ಸರ್ಕಾರ
ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಛೇರಿ,
ಶಾಲಾ ಶಿಕ್ಷಣ ಇಲಾಖೆ, ಕೆಂಪೇಗೌಡ ರಸ್ತೆ, ಬೆಂಗಳೂರು–560009,
ಇ–ಮೇಲ್ : cackarnataka@gmail.com ದೂ. 080–22228805,22483140,22483145
ಸಂಖ್ಯೆ: ಸಿ.ಎ.ಸಿ–5/ಬಿ.ಇ.ಡಿ.ದಾ./08/2024–25 ದಿನಾಂಕ: 16.10.2024
ಪ್ರಕಟಣೆ
2024–25ನೇ ಸಾಲಿಗೆ ಎರಡು ವರ್ಷದ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ **ದಿನಾಂಕ: 15.10.2024** ರಿಂದ **ದಿನಾಂಕ: 14.11.2024** ರವರೆಗೆ ಆಹ್ವಾನಿಸಲಾಗಿದೆ, ವೆಬ್‌ಸೈಟ್ **https://schooleducation.karnataka.gov.in** ನಲ್ಲಿ ಪ್ರಕಟಿಸಲಾದ ಅಧಿಸೂಚನೆಯಲ್ಲಿ ದಾಖಲಾತಿ ವೇಳಾಪಟ್ಟಿ, ಅರ್ಹತೆ, ಮೀಸಲಾತಿ, ಶುಲ್ಕ ಇತ್ಯಾದಿ ವಿವರ ಮತ್ತು ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ನೀಡಲಾಗಿದೆ. ಅಭ್ಯರ್ಥಿಗಳು ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಆನ್‌ಲೈನ್ ಮೂಲಕ ಅರ್ಜಿಯನ್ನು ಕ್ರಮಬದ್ಧವಾಗಿ ಭರ್ತಿ ಮಾಡಿ ಸಲ್ಲಿಸುವುದು.
ಸಹಿ/–
ಜಂಟಿ ನಿರ್ದೇಶಕರು
ಕೇಂದ್ರೀಕೃತ ದಾಖಲಾತಿ ಘಟಕ
ವಾಸಾಸಂಇ/ವಾಪ್ರ/2576/ಎಸ್‌ಎಸ್‌ಸಿ/2024–25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065
ಸಂಖ್ಯೆ : ಆಅ/ಟಿ.ಎನ್/6/2024–25 ದಿನಾಂಕ: 07.10.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, ಕೆಡಬ್ಲ್ಯೂ–2 ಮತ್ತು ಕೆಡಬ್ಲ್ಯೂ–3 ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1ರಿಂದ 5ರವರೆಗಿನ ಕಾಮಗಾರಿಗಳ ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in. ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಕ್ರಮ ಸಂಖ್ಯೆ. 5ರ ಕೆಲಸಕ್ಕೆ ಪ್ರಿ–ಬಿಡ್ ನಡೆಯುವ ದಿನಾಂಕ : 23–10–2024ರಂದು ಬೆಳಗ್ಗೆ 10.30 ಗಂಟೆಯವರೆಗೆ ಮೀಟಿಂಗ್ ಆಗಿರುತ್ತದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 25–10–2024ರಂದು ಸಾಯಂಕಾಲ 4.00 ಗಂಟೆಯವರೆಗೆ ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ : 28–10–2024ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು ದಿನಾಂಕ : 30–10–2024ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ– support@eprochelpdesk.com ಅಥವಾ 8046010000 ಮತ್ತು 8068948777.
ಸಹಿ/–
ಆಸ್ತಿ ಅಧಿಕಾರಿಗಳು
DIPR/CP/2578/Zen/2024-25

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ,
ಭಾರತ ಸರ್ಕಾರ.
2025ರ ಲ್ಯಾಟರಲ್ ಎಂಟ್ರಿ ಆಯ್ಕೆ ಪರೀಕ್ಷೆಯ ಮೂಲಕ
IX ಮತ್ತು XI ನೇ ತರಗತಿಗಳಿಗೆ ಪ್ರವೇಶಕ್ಕಾಗಿ ಆನ್‌ಲೈನ್
ಅರ್ಜಿಗಳನ್ನು ಸಲ್ಲಿಸಲು ಅಧಿಸೂಚನೆ
ಅಧಿಕೃತ ನವೋದಯ ವಿದ್ಯಾಲಯ ಸಮಿತಿಯ ಪ್ರಸ್ತುತ ವೆಬ್‌ಸೈಟ್ ನಿರ್ವಹಣೆಯಲ್ಲಿದೆ. ಆನ್‌ಲೈನ್ ಅರ್ಜಿ ಭರ್ತಿ ಮಾಡಲು ತೊಂದರೆ ಎದುರಿಸುತ್ತಿರುವ ಅಭ್ಯರ್ಥಿಗಳು, ಕೆಳಗಿನ ಲಿಂಕ್‌ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು:
IX ತರಗತಿಗಾಗಿ LEST 2025: https://cbseitms.nic.in/2024/nvsix
XI ತರಗತಿಗಾಗಿ LEST 2025 : https://cbseitms.nic.in/2024/nvsxi_11
ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ

DH DECCAN HERALD
ಪ್ರಜಾವಾಣಿ
Freedom Healthy Cooking Oils
Presents
ಭೂಮಿಕಾ ಕ್ಲಬ್
ಕುತೂಹಲಕರ ಆಟಗಳು ಹಾಗೂ ಕೊಡುಗೆಗಳು ನಿಮಗಾಗಿ ಕಾಯುತ್ತಿವೆ! ಮೋಜಿನ ಅವಕಾಶ ಕಳೆದುಕೊಳ್ಳಬೇಡಿ!
ಬೆಂಗಳೂರು ಮಹಿಳೆಯರಿಗೆ ಸುಸ್ವಾಗತ!
ಮತ್ತೊಂದು ಸುತ್ತಿನ ಮೋಜು ಹಾಗೂ ಪರಸ್ಪರ ಭೇಟಿಯ ಅವಕಾಶ ಪ್ರಕಟಿಸಲು ನಮಗೆ ಖುಷಿಯಾಗುತ್ತಿದೆ! ಮರೆಯಲಾಗದ ಅನುಭವಕ್ಕಾಗಿ ನಿಮ್ಮ ಸ್ನೇಹಿತರು, ಕುಟುಂಬದವರು ಹಾಗೂ ಹಿತೈಷಿಗಳೊಂದಿಗೆ ದೀಪಾವಳಿ ಸಂಭ್ರಮಾಚರಣೆಗಾಗಿ ನಮ್ಮ ಜೊತೆ ಪಾಲ್ಗೊಳ್ಳಿ. ಹೊಸ ಗೆಳೆತನವನ್ನು ಅನ್ವೇಷಿಸಿ, ಕುತೂಹಲಕರ ಆಟಗಳನ್ನು ಆನಂದಿಸಿ ಹಾಗೂ ಭೂಮಿಕಾ ಕ್ಲಬ್ ನ 21ನೇ ಆವೃತ್ತಿಯಲ್ಲಿ ಮಸ್ತಿ ಮಾಡಿ.
19 ನೇ ಅಕ್ಟೋಬರ್ ಮಧ್ಯಾಹ್ನ 3 ಗಂಟೆ ಇಂದ
ಸ್ಥಳ: ಆರ್ ವೀ ಟೀಚರ್ಸ್ ಕಾಲೇಜು ಸಭಾಂಗಣ, ಜಯನಗರ, ಬೆಂಗಳೂರು
ಉಚಿತ ಪ್ರವೇಶ
ನೋಂದಾಯಿಸಲು ಇಲ್ಲಿ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ, ಸಂಪರ್ಕಿಸಿ – 7338018541
ಕಾರ್ಯಕ್ರಮದ ವಿಶೇಷಗಳು
ಬಾಣಸಿಗ ಪೂಜಾ ಪಾಟೀಲ್ ಅವರಿಂದ ಅಡುಗೆ ಗೋಷ್ಠಿ
ಬೀಟ್ ಗುರೂಸ್ ಅವರಿಂದ ಪ್ರದರ್ಶನ ಹಾಗು ಡ್ರಮ್ ಸರ್ಕಲ್
ಅಶ್ವಿನಿ ಶೆಣೈ ಅವರಿಂದ 'ಸೀರೆ ಉಡುವ ಕಲೆ ಮತ್ತು ಮೇಕಪ್' ಕಾರ್ಯಾಗಾರ
ಗೇಮ್ಸ್ | ಹೈ–ಟೀ | ನೆಟವರ್ಕಿಂಗ್

DH ಪ್ರಜಾವಾಣಿ EXAM MASTERMIND
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.com ಭೇಟಿ ಕೊಡಿ

12 ನಿಮಿಷಗಳಲ್ಲಿ ಸಿದ್ಧಗೊಳ್ಳುವ ಆಸ್ಪತ್ರೆ 'ಭೀಷ್ಮ'

ಯು.ಟಿ.ಆಯಿಷಾ ಫರ್ಝಾನ

ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಸರ್ಕಾರಕ್ಕೆ ಇತ್ತೀಚೆಗೆ ನಾಲ್ಕು 'ಭಾರತ್ ಹೆಲ್ತ್ ಇನಿಶಿಯೇಟಿವ್ ಫಾರ್ ಸಹಯೋಗ್ ಹಿತಾ ಮತ್ತು ಮೈತ್ರಿ' (BHISHM) ಕ್ಯೂಬ್‌ಗಳ ನೆರವು ನೀಡಿದರು.

- ಇವು ಪೋರ್ಟಬಲ್ ಆಸ್ಪತ್ರೆಗಳ ಹೊಸ ಮಾದರಿಯಾಗಿದ್ದು, ತುರ್ತು ಸಂದರ್ಭಗಳಲ್ಲಿ ಬಳಸಿಕೊಳ್ಳಬಹುದು. ಇವು ಕ್ಷಿಪ್ರ ವೈದ್ಯಕೀಯ ತಂತ್ರಜ್ಞಾನದಲ್ಲಿ ಭಾರತದ ಪ್ರಮುಖ ಆವಿಷ್ಕಾರ.
- ಅಗತ್ಯವಿದ್ದಲ್ಲಿಯೇ ಕೆಲವೇ ನಿಮಿಷಗಳಲ್ಲಿ ಈ ಕ್ಯೂಬ್‌ಗಳನ್ನು ಜೋಡಿಸಿ ಆಸ್ಪತ್ರೆ ನಿರ್ಮಿಸಬಹುದು.
- BHISHM ಕ್ಯೂಬ್‌ಗಳನ್ನು ತುರ್ತು ಸಂದರ್ಭಗಳಲ್ಲಿ ತಕ್ಷಣದ ವೈದ್ಯಕೀಯ ನೆರವು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಪ್ರತಿ ಘಟಕವು ಅಗತ್ಯ ಔಷಧಗಳು, ಶಸ್ತ್ರಚಿಕಿತ್ಸಾ ಉಪಕರಣಗಳೊಂದಿಗೆ ಸುಮಾರು 200 ವೈವಿಧ್ಯಮಯ ತುರ್ತು ಪ್ರಕರಣಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.
- ಈ ವಾಹನಗಳು ಶಕ್ತಿಯ ಸ್ವಯಂ-ಉತ್ಪಾದನೆ ಮತ್ತು ಆಮ್ಲಜನಕ ಪೂರೈಕೆ ಸಾಮರ್ಥ್ಯವನ್ನು ಒಳಗೊಂಡಿರುತ್ತವೆ. ಆರಂಭಿಕ ತರಬೇತಿಗಾಗಿ ಭಾರತೀಯ ತಜ್ಞರನ್ನೂ ಕಳಿಸಲಾಗುತ್ತದೆ. ಈ ಪೋರ್ಟಬಲ್ ಸೌಲಭ್ಯಗಳು ಉಕ್ರೇನ್‌ಗೆ ನೀಡಿ, ಭಾರತವು ನೈತಿಕ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಬೆಂಬಲವನ್ನು ಸೂಚಿಸಿದೆ.

ಆರೋಗ್ಯ ಮೈತ್ರಿ ಯೋಜನೆ

- 2023ರ ಜನವರಿಯಲ್ಲಿ 'ವಾಯ್ಸ್ ಆಫ್ ಗ್ಲೋಬಲ್ ಸೌತ್' ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಆರೋಗ್ಯ ಮೈತ್ರಿ' ಯೋಜನೆಯನ್ನು ಘೋಷಿಸಿದರು. ಜಾಗತಿಕ ಆರೋಗ್ಯ ಮತ್ತು ವಿಪತ್ತು ಪರಿಹಾರಕ್ಕೆ ಭಾರತದ ಬದ್ಧತೆಯನ್ನು ಸೂಚಿಸುವ ಮಾನವೀಯ ಉಪಕ್ರಮ ಇದಾಗಿದೆ.
- 100ಕ್ಕೂ ಹೆಚ್ಚು ದೇಶಗಳಿಗೆ ಭಾರತೀಯ ಉತ್ಪಾದಿತ COVID-19 ಲಸಿಕೆಗಳನ್ನು ವಿತರಿಸಿದ 'ಲಸಿಕೆ ಮೈತ್ರಿ' ಕಾರ್ಯಕ್ರಮದ ಯಶಸ್ಸಿನ ಮೇಲೆ ರೂಪಿಸಲಾದ, 'ಆರೋಗ್ಯ ಮೈತ್ರಿ' ನೈಸರ್ಗಿಕ ವಿಪತ್ತುಗಳು ಅಥವಾ ಮಾನವೀಯ ಬಿಕ್ಕಟ್ಟುಗಳಿಂದ ಬಳಲುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಗತ್ಯ ವೈದ್ಯಕೀಯ ಸರಬರಾಜುಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.
- ಈ ಯೋಜನೆಯು ಜವಾಬ್ದಾರಿಯುತ ಜಾಗತಿಕ ಪಾಲುದಾರನಾಗಿ ಭಾರತದ ಪಾತ್ರವನ್ನು ಎತ್ತಿ ತೋರಿಸುತ್ತದೆ. ಸಂಕಷ್ಟದ ಸಮಯದಲ್ಲಿ ನಿರ್ಣಾಯಕ ಬೆಂಬಲವನ್ನು ನೀಡುತ್ತದೆ. ಅಂತರರಾಷ್ಟ್ರೀಯ ಮಾನವೀಯ ಪ್ರಯತ್ನಗಳಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ.

ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಸರ್ಕಾರಕ್ಕೆ ಈಚೆಗೆ ನಾಲ್ಕು (BHISHM) ಕ್ಯೂಬ್‌ಗಳನ್ನು ಒದಗಿಸಿದ ಸಂದರ್ಭ. ಚಿತ್ರ :ಪಿಟಿಐ

BHISHMನ ವೈಶಿಷ್ಟ್ಯ

- 'ಭಾರತ್ ಹೆಲ್ತ್ ಇನಿಶಿಯೇಟಿವ್ ಫಾರ್ ಸಹಯೋಗ್ ಹಿತಾ & ಮೈತ್ರಿ' (BHISHM)ಯು ಆರೋಗ್ಯ ಮೈತ್ರಿ ಯೋಜನೆಯ ಭಾಗವಾಗಿದ್ದು, ಇದು ಅತ್ಯಾಧುನಿಕ ತುರ್ತು ವೈದ್ಯಕೀಯ ನೆರವು ಕಾರ್ಯಕ್ರಮವಾಗಿದೆ.
- BHISHM ಕಾಂಪ್ಯಾಕ್ಟ್ ಮತ್ತು ಪೋರ್ಟಬಲ್ ಆದ ಮಿನಿ ಕ್ಯೂಬ್‌ಗಳನ್ನು ಹೊಂದಿದೆ. ಇದು ಅಗತ್ಯ ಔಷಧಗಳು ಮತ್ತು ಸಲಕರಣೆಗಳನ್ನು ಒಳಗೊಂಡಿರುತ್ತದೆ. ಕ್ಷಿಪ್ರವಾಗಿ ಜೋಡಿಸುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.
- BHISHM ವ್ಯವಸ್ಥೆಯಲ್ಲಿ ಮೂವತ್ತಾರು ಮಿನಿ ಕ್ಯೂಬ್‌ಗಳನ್ನು ಜೋಡಿಸಿ ಒಂದು ಪ್ರಧಾನ ಕ್ಯೂಬ್ ರೂಪಿಸಲಾಗುತ್ತದೆ. ಮತ್ತು ಎರಡು ಪ್ರಧಾನ ಕ್ಯೂಬ್‌ಗಳನ್ನು ಜೋಡಿಸಿದರೆ ಪೂರ್ಣ BHISHM ಕ್ಯೂಬ್ ಘಟಕವು ತಯಾರಾಗುತ್ತವೆ. ಈ ಸಿದ್ಧಮಾದರಿಯ ಆಸ್ಪತ್ರೆಯು ಶಸ್ತ್ರಚಿಕಿತ್ಸಾ ವಿಧಾನಗಳನ್ನು ಒಳಗೊಂಡಂತೆ 200 ಪ್ರಕರಣಗಳಿಗೆ ವೈದ್ಯಕೀಯ ಆರೈಕೆಯನ್ನು ನೀಡಲು ಶಕ್ತವಾಗಿರುತ್ತವೆ.
- ರೇಡಿಯೊ-ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್ (RFID) ಮತ್ತು 180 ಭಾಷೆಗಳಲ್ಲಿ ಡಿಜಿಟಲ್ ಬೆಂಬಲದ ಮೂಲಕ ದಾಸ್ತಾನು ನಿರ್ವಹಣೆಯನ್ನು ಒಳಗೊಂಡಿರುವ ಸುಧಾರಿತ ತಂತ್ರಜ್ಞಾನವನ್ನು ಈ ವ್ಯವಸ್ಥೆಯು ಹೊಂದಿದೆ.
- BHISHM ಕ್ಯೂಬ್‌ನ ಒಂದು ವಿಶಿಷ್ಟ ಲಕ್ಷಣವೆಂದರೆ ಅದರ ಕ್ಷಿಪ್ರ ನಿಯೋಜನೆ ಸಾಮರ್ಥ್ಯ. ಅಪಘಾತದಂಥ ಸಂದರ್ಭದಲ್ಲಿ ಸಂಪೂರ್ಣ ಘಟಕವನ್ನು 12 ನಿಮಿಷಗಳಲ್ಲಿ ತಯಾರಿಸಬಹುದು.
- ತುರ್ತುಸ್ಥಿತಿಗಳ 'ಗೋಲ್ಡನ್ ಅವರ್' ಸಮಯದಲ್ಲಿ ಇದು ನಿರ್ಣಾಯಕ ಆರೈಕೆಯನ್ನು ಒದಗಿಸುತ್ತದೆ.
- ಕ್ಯೂಬ್ ಸುಲಭವಾಗಿ ಸಾಗಿಸಬಹುದಾದ 72 ಘಟಕಗಳನ್ನು ಒಳಗೊಂಡಿದೆ. ಕೈಯಲ್ಲಿಯೇ ಸಾಗಿಸಬಹುದಾದ, ಸೈಕಲ್ ಮೂಲಕ ಅಥವಾ ಡ್ರೋನ್ ಸೇರಿ ಯಾವುದರಲ್ಲಿಯಾದರೂ ಇವುಗಳನ್ನು ಸುಲಭವಾಗಿ ಕೊಂಡೊಯ್ಯುವಂತೆ ಹಗುರವಾಗಿ ವಿನ್ಯಾಸಗೊಳಿಸಲಾಗಿದೆ.
- ಈ ಕ್ಯೂಬ್‌ಗಳು ದೃಢವಾದ ಜಲನಿರೋಧಕವಾಗಿದ್ದು, ಹಗುರವಾಗಿರುತ್ತವೆ. ಅವುಗಳು ಕಠಿಣ ಪರಿಸ್ಥಿತಿಗಳನ್ನು ತಡೆದುಕೊಳ್ಳುವಂತೆ ಮತ್ತು ವಿವಿಧ ತುರ್ತು ಪರಿಸ್ಥಿತಿಗಳಲ್ಲಿ ಬಳಸಲು ಸುಲಭವಾಗುವಂತೆ ರಚಿಸಲಾಗಿದೆ.
- BHISHM ಕ್ಯೂಬ್‌ನ ಸುಧಾರಿತ ವೈದ್ಯಕೀಯ ಉಪಕರಣವು ಸಮರ್ಥ ನಿರ್ವಹಣೆಗಾಗಿ RFID(Radio frequency Identification) ನಿಂದ ಟ್ಯಾಗ್ ಮಾಡಲ್ಪಟ್ಟಿದೆ. ಅತ್ಯಾಧುನಿಕ ಸಾಫ್ಟ್‌ವೇರ್ ಸಿಸ್ಟಮ್ ಮೂಲಕ ಆಪರೇಟರ್‌ಗಳಿಗೆ ತ್ವರಿತವಾಗಿ ವಸ್ತುಗಳನ್ನು ಪತ್ತೆಹಚ್ಚಲು, ಬಳಕೆ ಮತ್ತು ಮುಕ್ತಾಯ ದಿನಾಂಕಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಸಿದ್ಧತೆಯನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ.
- ಈ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ ಮತ್ತು ಡೇಟಾ ವಿಶ್ಲೇಷಣೆಯಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿದೆ. ಪರಿಣಾಮಕಾರಿ ಸಮನ್ವಯ, ನೈಜ-ಸಮಯದ ಮೇಲ್ವಿಚಾರಣೆ ಮತ್ತು ಕ್ಷೇತ್ರದಲ್ಲಿ ವೈದ್ಯಕೀಯ ಸೇವೆಗಳ ಸಮರ್ಥ ನಿರ್ವಹಣೆಯನ್ನು ಸುಗಮಗೊಳಿಸಿ ವಿಪತ್ತಿನ ಸಮಯದಲ್ಲಿ ಆಪತ್ಬಾಂಧವನಂತೆ ಕಾರ್ಯನಿರ್ವಹಿಸುತ್ತದೆ. ❖

BHISHMನ ಇತ್ತೀಚಿನ ನಿಯೋಜನೆಗಳು

- ಜನವರಿ 2024ರಲ್ಲಿ, 'ಪ್ರಾಣ ಪ್ರತಿಷ್ಠಾ' ಸಮಾರಂಭಕ್ಕೆ ವೈದ್ಯಕೀಯ ಸಿದ್ಧತೆಯ ಸಲುವಾಗಿ ಅಯೋಧ್ಯೆಯಲ್ಲಿ ಎರಡು ಆರೋಗ್ಯ ಮೈತ್ರಿ ವಿಪತ್ತು ನಿರ್ವಹಣಾ ಕ್ಯೂಬ್-ಭೀಷ್ಮ ಘಟಕಗಳನ್ನು ನಿಯೋಜಿಸಲಾಗಿತ್ತು.
- ಈ ನಿಯೋಜನೆಯಿಂದ ಯೋಜಿತ ಘಟನೆಗಳು ಮತ್ತು ಅನಿರೀಕ್ಷಿತ ತುರ್ತುಸ್ಥಿತಿಗಳೆರಡನ್ನೂ ನಿರ್ವಹಿಸುವಲ್ಲಿ ಭೀಷ್ಮ ಪ್ರಮುಖ ಪಾತ್ರ ವಹಿಸಬಲ್ಲದು ಎಂಬುದನ್ನು ನಿರೂಪಿಸುತ್ತದೆ.
- ಇದಲ್ಲದೆ, ಆಗಸ್ಟ್ 17, 2024ರಂದು, ಭಾರತೀಯ ವಾಯುಪಡೆ (IAF) ಮತ್ತು ಭಾರತೀಯ ಸೇನೆಯು ಸುಮಾರು 15,000 ಅಡಿ ಎತ್ತರದ ಪ್ರದೇಶದಲ್ಲಿ ಆರೋಗ್ಯ ಮೈತ್ರಿ ಹೆಲ್ತ್ ಕ್ಯೂಬ್ ಅನ್ನು ಪ್ಯಾರಾ-ಡ್ರಾಪ್ ಮಾಡುವ ಮೂಲಕ ಅದ್ಭುತ ಕಾರ್ಯಾಚರಣೆಯನ್ನು ನಡೆಸಿತು.
- ಈ ಕಾರ್ಯಾಚರಣೆಯು ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (HADR) ಸನ್ನಿವೇಶಗಳಲ್ಲಿ ತ್ವರಿತ ಮತ್ತು ಪರಿಣಾಮಕಾರಿ ಬೆಂಬಲವನ್ನು ಒದಗಿಸುವ ಭಾರತದ ಸಾಮರ್ಥ್ಯ ಹೆಚ್ಚಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತದೆ.
- ಆರೋಗ್ಯ ಮೈತ್ರಿ ಯೋಜನೆ ಮತ್ತು BHISHM ಉಪಕ್ರಮವು ಪೋರ್ಟಬಲ್ ತುರ್ತು ವೈದ್ಯಕೀಯ ಆರೈಕೆಯಲ್ಲಿ ಮಹತ್ವದ ಪ್ರಗತಿಯನ್ನು ಪ್ರತಿನಿಧಿಸುತ್ತದೆ. ಈ ನವೀನ ಉಪಕ್ರಮಗಳು ವ್ಯಾಪಕ ವೈದ್ಯಕೀಯ ಸಾಮರ್ಥ್ಯಗಳು, ಕ್ಷಿಪ್ರ ನಿಯೋಜನೆ ಮತ್ತು ಸುಧಾರಿತ ತಂತ್ರಜ್ಞಾನವನ್ನು ಸಂಯೋಜಿಸುತ್ತವೆ.
- ಇದು ಜೀವಗಳನ್ನು ಉಳಿಸಲು ಮತ್ತು ವಿಶ್ವದಾದ್ಯಂತ ಸವಾಲಿನ ಸಂದರ್ಭಗಳಲ್ಲಿ ಅಗತ್ಯ ವೈದ್ಯಕೀಯ ಬೆಂಬಲವನ್ನು ನೀಡಲು ನಿರ್ಮಿಸಲಾದ ವಿಶೇಷ ಸಾಧನಗಳಾಗಿವೆ.
- ಈ ಪ್ರಯತ್ನಗಳ ಮೂಲಕ, ಭಾರತವು ತನ್ನದೇ ಆದ ತುರ್ತು ವೈದ್ಯಕೀಯ ಪ್ರತಿಕ್ರಿಯೆಯನ್ನು ಮುನ್ನಡೆಸುತ್ತಿದೆ.
- ಅಂತರರಾಷ್ಟ್ರೀಯ ತುರ್ತು ಮತ್ತು ವೈದ್ಯಕೀಯ ಆರೈಕೆಯಲ್ಲಿ ಮಾನವೀಯ ನೆರವನ್ನು ಬೆಂಬಲಿಸುವ ತನ್ನ ಬದ್ಧತೆಯನ್ನು ಭಾರತವು ಈ ಮೂಲಕ ಎತ್ತಿಹಿಡಿದಿದೆ.

ಬಹು ಆಯ್ಕೆಯ ಪ್ರಶ್ನೆಗಳು

1.BHISHM ಕ್ಯೂಬ್‌ಗಳ ಪ್ರಾಥಮಿಕ ಉದ್ದೇಶವೇನು ?
(1) COVID-19 ಲಸಿಕೆಗಳನ್ನು ವಿತರಿಸಲು
(2) ತ್ವರಿತ ತುರ್ತು ವೈದ್ಯಕೀಯ ನೆರವು ಒದಗಿಸಲು
(3) ಬಾಹ್ಯಾಕಾಶ ಸಂಶೋಧನೆ ನಡೆಸಲು
(4) ಹೊಸ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸಲು
ಉತ್ತರ: (2)

2.BHISHM ಉಪಕ್ರಮವು ಯಾವ ಯೋಜನೆಯ ಭಾಗವಾಗಿದೆ ?
(1) ಲಸಿಕೆ ಮೈತ್ರಿ
(2) ಜಾಗತಿಕ ಆರೋಗ್ಯ ಉಪಕ್ರಮ
(3) ಆರೋಗ್ಯ ಮೈತ್ರಿ ಯೋಜನೆ
(4) ಭಾರತ್ ಹೆಲ್ತ್ ಇನಿಶಿಯೇಟಿವ್
ಉತ್ತರ: (3)

3.ಯಾವ ವಿಶಿಷ್ಟ ಅಂಶವು ತುರ್ತು ಸಂದರ್ಭಗಳಲ್ಲಿ ತ್ವರಿತವಾಗಿ ಹೊಂದಿಸಲು BHISHM ಕ್ಯೂಬ್‌ಗಳನ್ನು ಅನುಮತಿಸುತ್ತದೆ ?
(1) ಸುಧಾರಿತ ರೋಗನಿರ್ಣಯ ಸಾಧನಗಳು
(2) ಸ್ವಯಂ ಉತ್ಪಾದಿಸುವ ಶಕ್ತಿ ಮತ್ತು ಆಮ್ಲಜನಕ ಪೂರೈಕೆ
(3)12 ನಿಮಿಷಗಳಲ್ಲಿ ಸೆಟಪ್‌ನೊಂದಿಗೆ ತ್ವರಿತ ನಿಯೋಜನೆ ಸಾಮರ್ಥ್ಯ
(4) ಉಪಗ್ರಹ ಸಂವಹನ ವ್ಯವಸ್ಥೆ
ಉತ್ತರ: (3)

4. BHISHM ವ್ಯವಸ್ಥೆಯಲ್ಲಿ ಎಷ್ಟು ಮಿನಿ ಕ್ಯೂಬ್‌ಗಳು ಒಂದು ಪ್ರಧಾನ ಕ್ಯೂಬ್ ಅನ್ನು ರೂಪಿಸಲು ಸಂಯೋಜಿಸುತ್ತವೆ ?
(1) ಇಪ್ಪತ್ತು
(2) ಮೂವತ್ತಾರು
(3) ನಲವತ್ತೈದು
(4) ಐವತ್ತು
ಉತ್ತರ: (2)

5. ಕೆಳಗಿನ ಯಾವ ಇಲಾಖೆಗಳು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ?
1. ಆಂತರಿಕ ಭದ್ರತೆ ಇಲಾಖೆ
2. ರಾಜ್ಯಗಳ ಇಲಾಖೆ
3. ಗೃಹ ಇಲಾಖೆ
4. ಕಂದಾಯ ಇಲಾಖೆ
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2, 3 ಮತ್ತು 4 ಡಿ. 1, 2 ಮತ್ತು 3
ಉತ್ತರ : ಡಿ

6. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳ ಇಲಾಖೆ ನಿರ್ವಹಿಸುವ ಕಾರ್ಯಗಳನ್ನು ಗುರುತಿಸಿ ?
1. ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಿಗೆ ಸಂಬಂಧಿಸಿದಂತೆ ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು.
2. ಅಂತರರಾಜ್ಯ ಸಂಬಂಧಗಳಲ್ಲಿ ಸೂಕ್ತ ಸಮನ್ವಯತೆಯನ್ನು ತರುವುದು.
3. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವುದು.
4. ಪೊಲೀಸ್ ವ್ಯವಸ್ಥೆಯ ಸುಧಾರಣೆಗಳು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮಾತ್ರ
ಉತ್ತರ : ಎ

7. ಕೇಂದ್ರ ಕ್ಯಾಬಿನೆಟ್ ಅನುಮೋದಿಸಿದ ಡಿಜಿಟಲ್ ಕೃಷಿ ಮಿಷನ್‌ನ ಪ್ರಾಥಮಿಕ ಉದ್ದೇಶವೇನು ?
(1) ಜಾನುವಾರು ರೈತರ ಆದಾಯವನ್ನು ಹೆಚ್ಚಿಸಲು
(2) ಡಿಜಿಟಲ್ ತಂತ್ರಜ್ಞಾನಗಳ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು
(3) ತೋಟಗಾರಿಕಾ ಪದ್ಧತಿಗಳನ್ನು ಸುಧಾರಿಸಲು
(4) ಕೃಷಿ ಶಿಕ್ಷಣವನ್ನು ಬಲಪಡಿಸಲು
ಉತ್ತರ: (2)

8. ಕೆಳಗಿನ ಯಾವ ಘಟಕಗಳು ಅಗ್ರಿಸ್ಟ್ಯಾಕ್ ಚೌಕಟ್ಟಿನ ಭಾಗವಾಗಿಲ್ಲ?
(1) ರೈತರ ನೋಂದಣಿ
(2) ಕ್ರಾಪ್ ಸೋನ್ ರಿಜಿಸ್ಟ್ರಿ
(3) ಮಣ್ಣಿನ ಪ್ರೊಫೈಲ್ ಮ್ಯಾಪಿಂಗ್
(4) ಗ್ರಾಮ ಭೂ ನಕ್ಷೆಗಳ ನೋಂದಣಿ
ಉತ್ತರ: (3)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH
Prose
Gentleman of Rio en Medio

Think About The Text

2. Whose argument do you agree with? Don Anselmo's or the storytellers? Give reasons.
Ans:We agree with Don Anselmo's argument when he sold his property. Though it is unusual and far way from reality, according to him it was correct. He was a man of principles, he thought that it was right to stand on his words. So he refused to take more than the amount agreed upon. In the second incident also he was right because the tree was planted in the name of new born child. All the trees belong to children only. He had no right to sell them though it is unusual. But here the story teller's saying is in vogue.

3. Don Anselmo was passionate about his land and the children of Rio en Medio. Which details in the text support this statement? Write to them.
Ans: Don Anselmo was very much passionate about his land and the children. His land had come from his ancestors. He lived in that land from his birth. He took possession of his house from his mother. Everyone in the village were his relatives and the children are his nieces, nephews and grand children. Every time a child has been bom in Rio en Medio, a tree was planted in its name.

1. Don Anselmo's reaction to the offer of more money was not expected. justify this statement.
Ans: Usually any person get offer for more money he would accepted. But Don Anselmo's reaction was not at all expected. Though it is a fair offer, after surveying, the land rate was double. Double the land, double the money. But once he agreed to sell his land for twelve hundred dollars, he should stick on his words. It was not expected.

2. Read paragraph 5 and identify the tone or reaction of the old man while uttering the following word/words. Some examples are given.
– You may use any other appropriatly
(Mild / harsh /blunt /authoritative / self-assertive/ confident/comfortable /polite / aggressive)

The old man		Tone / reaction
a) Friend	–	…………
b) I do not like	–	…………….
c) I know these	–	……………..
d) I do not care to be	–	………………
e) That is the price	–	……………..

Answer:

The old man		Tone / reaction
a) Friend	–	Comfortable
b) I do not like	–	harsh
c) I know these	–	confident
d) I do not care to be	–	aggressive
e) That is the price	–	authoritative

6. Why do you think the Americans wanted to buy Don Anselmo's land?
Ans: In the given prose, the reason was not mentioned. Generally we can think that the land and orchard was good, beautiful and fruitful. A stream was running through the orchard. The trees had more fruits. The land was fertile and big. So Americans wanted to buy DonAnselmo's land.

7. Don Anselmound the Americans were generous in their own ways. Comment on this.
Ans: Don Anselmo was generous. He refused to accept more money for his property. He loved children and planted a tree for every child. Americans were generous, they won't quarrel with the old man though they had legal right to own the trees.

8.At last, the problem of ownership was resolved. But it took a long time. What might be the reasons for it? Write a paragraph on it.
Ans: The story teller or Americans convinced the persons individually. The descendants have agreed to sell their trees to them. It was a long procedure to convince every one. At last they have agreed and sold the trees to American, The problem was solved but it took a long time.

9. Read the story and arrange the given events in the order in which they occur in the &text.
a) The story tefitfeoffered Don Anselmo more money than what had been agreed upon.
b) The children of Rio en Medio disturbed the peace of the Americ
c) The Americans bought the trees from the descendants of Don Anselmo
d) The story teller was surprised at the strange argument of Don Anselmo.
e) Don Anselmo lived up in Rio en Medio
f) The buyers renovated the house.
g) Don Anselmo signed the sale deed after the negotiation for 12 hundred dollars.
h) Don Anselmo felt offended when he – was offered more money.
i) The occupants of the house came up with lots of complaints about the children of Rio enMedio.
Ans: (e) (a) (h) (g) (f) (b) (i) (d) (c)

Enrich Your Vocabulary:

Task–1 : **Look for the words in the word maze which match with the given meaning. One is done for you. Note the number given in brakets is the number of letters in that word. Read across, down and diagonally.**

W	A	A	I	P	T	Q	M	R	H	G
T	J	N	D	R	F	O	E	D	V	B
H	S	L	I	D	K	W	R	T	S	N
K	I	O	S	M	O	B	L	K	H	M
R	O	K	C	P	P	O	P	P	A	R
B	D	P	O	R	C	H	A	R	D	T
V	K	I	V	O	D	M	O	O	U	Q
L	G	O	E	P	E	K	F	P	R	A
M	P	N	R	T	H	C	E	E	L	P
Q	A	T	Y	Y	L	W	R	R	P	D
C	R	B	X	L	S	V	N	T	O	C
M	O	L	A	F	P	U	Y	Y	R	B

(4): a long thin stick - Cane
(9) finding something that was not known earlier discovery- DISCOVERY

(Contd…)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

The d and f Block Elements

82. Although Zr belongs to 4d and Hf belongs to 5d transition series but it is quite difficult to separate them. Why?
Ans: Separation of Zr and Hf is pretty tricky because of lanthanoid contraction. Due to lanthanoid contraction, they have almost identical sizes (Zr = 160 pm and Hf =159 pm) and, thus, similar chemical properties. That's why it is tough to separate them by chemical methods.

83. Which of the following ion is coloured? Sc^{2+}, Zn^{2+} and Cr^{3+}
Ans: Cr^{3+} ion is coloured due to the presence of 3 unpaired d-electrons.

84. Cu(I) salts are colourless and Cu(II) salts are coloured. Why?
Ans: Cu(I) salts are colourless because the Cu+ ion has a fully filled d-orbital (3d10), preventing any d-d electron transitions that would absorb visible light, while Cu(II) salts are coloured due to the presence of one unpaired electron in the d-orbital (3d9) which allows for d-d transitions, absorbing visible light and producing colour.

85. Name a transition element in 3d series which is colourless in both atomic state and oxidation state.
Ans: Zinc (both Zn and Zn^{2+} are colourless).

19. **While filling up of electrons in the atomic orbitals, the 4s orbital is filled before the 3d orbital but reverse happens during the ionisation of the atom. Explain why?**
Ans: Atomic orbitals are filled in order of increasing energies. Since the energy of 3d orbital is more than 4s orbital, based on the (n+l) rule, it is filled after 4s orbital. But during ionisation, electrons in the outermost orbital are lost. Since 4s will be the outermost orbital, in this case, electrons from this orbital will be ionised first.

86. Transition metals form large number of complex compounds. Give reasons.
Ans:This is due to (i) smaller size of transition metal ions.
(ii) larger ionic charges (or high polarizing power i.e., high charge by size ratio)
(iii) the availability of vacant-orbitals for bond formation.

87.Explain the catalytic properties of transition metals.
Ans: The transition elements and their compounds behaves as catalysts due to –
(i) Variable oxidation states.
(ii) Large surface area for absorption of reactant molecules.
(iii) The presence of incompletely filled or partially filled d-orbitals.
(iv) Formation of intermediate compounds.
Examples:(1) Vanadium pentoxide is used as catalyst in contact process (Manufacture of H_2SO_4)
(2) Iron oxide is used as a catalyst in the Haber's process (Manufacture of NH_3)
(3) Nickel is used as a catalyst in the hydrogenation of oils $\left(\text{Oils} \xrightarrow[+H_2]{Ni} \text{Fat}\right)$.

88. Explain the formation of interstitial compounds.
Ans:The compounds in which small atoms like H, C or N are trapped into the (empty space) cavities of the crystal lattices of metals. Such compounds are called interstitial compounds.
Example: TiC, Mn_4C, Fe_3H, $VH_{0.56}$ and $TiH_{1.7}$ etc.
[Interstital compounds are non-stoichiometric]
The physical and chemical properties of interstitial compounds are:
(i) They have high melting points, higher than those of pure metals.
(ii) They are very hard, some borides are as hard as diamond.
(iii) They are chemically inert.
(iv) They retain metallic conductivity.
Note: The empty space present in the crystal lattice is called as interstitial site or void.

89. Explain the formation of alloys of transition elements.
Ans: Transition elements have strong tendency to form alloys because their atomic sizes are very similar and in the crystal lattice one metal can be readily replaced by another. Alloys have high melting point and hard.

Transition metals are miscible with each other in a molten state. When the molten solution cools, the alloy forms.

There are different types of alloys, each prepared for specific properties and applications. For example, bearing alloys are designed to withstand high pressure, while corrosion-resistant alloys use noble metals to create a protective layer.

(Contd…….)

ಪಕ್ಷ ಕೈಬಿಟ್ಟಾಗ ಜನ ಕೈ ಹಿಡಿದಿದ್ದಾರೆ • ಟಿಕೆಟ್ ಸಿಗದಿದ್ದರೆ ಬೆಂಬಲಿಗರ ನಿರ್ಧಾರದಂತೆ ಮುಂದಿನ ನಡೆ

ಟಿಕೆಟ್ ಕೈ ತಪ್ಪುವುದು ಹೊಸದಲ್ಲ: ಯೋಗೇಶ್ವರ್

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಟಿಕೆಟ್ ಕೈ ತಪ್ಪುವುದು ನನಗೆ ಹೊಸದೇನಲ್ಲ. 1999ರಲ್ಲಿ ಮೊದಲ ಚುನಾವಣೆಯಲ್ಲೂ ಟಿಕೆಟ್ ಕೈ ತಪ್ಪಿತ್ತು. ಆಗ ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದೆ. ರಾಜಕೀಯ ಪಕ್ಷಗಳಿಂದ ಅನ್ಯಾಯ ಆದಾಗಲೆಲ್ಲ ಜನ ನನ್ನ ಕೈ ಹಿಡಿದಿದ್ದಾರೆ. ಹಿಂದಿನಂತೆ ಈಗಲೂ ಚನ್ನಪಟ್ಟಣ ಜನ ನನ್ನ ಕೈ ಬಿಡುವುದಿಲ್ಲ' ಎಂದು ಬಿಜೆಪಿ-ಜೆಡಿಎಸ್ ಮೈತ್ರಿ ಟಿಕೆಟ್ ಆಕಾಂಕ್ಷಿ ಸಿ.ಪಿ. ಯೋಗೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ ಕೂಡ್ಲೂರು ರಸ್ತೆಯಲ್ಲಿ ಬುಧವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆ ಹಾಗೂ ಮಾಧ್ಯಮಗಳ ಜೊತೆ ಮಾತನಾಡಿದ ಅವರು, 'ಈ ಉಪ ಚುನಾವಣೆಯಲ್ಲಿ ನಾನೇ ಮೈತ್ರಿ ಅಭ್ಯರ್ಥಿಯಾಗುವೆ. ಇನ್ನೆರಡು ದಿನದಲ್ಲಿ ನನ್ನ ಹೆಸರು ಘೋಷಣೆಯಾಗಲಿದೆ' ಎಂದು ಹೇಳಿದರು.

'ಪಕ್ಷ ಟಿಕೆಟ್ ನೀಡದಿದ್ದರೆ ನಮ್ಮ ಕಾರ್ಯಕರ್ತರ ಒತ್ತಾಸೆಯಂತೆ ನಿರ್ಧಾರ ಕೈಗೊಳ್ಳುವೆ. ಪಕ್ಷದ ವರಿಷ್ಠರು ಭರವಸೆ ಕೊಟ್ಟಿದ್ದಾರೆ. ಆತಂಕ ಬೇಡ, ಒಂದೆರಡು ದಿನ ಕಾಯಿರಿ' ಎಂದು ಕಾರ್ಯಕರ್ತರು, ಬೆಂಬಲಿಗರಿಗೆ ಕಿವಿಮಾತು ಹೇಳಿದರು.

'ನಾನೆಂದಿಗೂ ದ್ವೇಷದ ರಾಜಕಾರಣ ಮಾಡಿಲ್ಲ. ಹಾಗಾಗಿಯೇ, ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದವರೂ ನನಗೆ ಅಭ್ಯರ್ಥಿಯಾಗುವಂತೆ ಎನ್ನುತ್ತಿದ್ದಾರೆ. ಸ್ವತಂತ್ರವಾಗಿಯಾದರೂ ನನ್ನನ್ನು ಎಂಎಲ್‌ಸಿ ಮಾಡಲು ಎಲ್ಲರೂ ಸಿದ್ಧರಾಗಿದ್ದಾರೆ. ಹಾಗಾಗಿ ದುಡುಕಿ ನಿರ್ಧಾರ ಕೈಗೊಳ್ಳುವ ಅಗತ್ಯವಿಲ್ಲ' ಎಂದು ಯೋಗೇಶ್ವರ್ ಹೇಳಿದರು.

ಸಭೆಯಲ್ಲಿ ಮಾತನಾಡಿದ ಪಕ್ಷದ ಮುಖಂಡರು, 'ಮೈತ್ರಿ ಟಿಕೆಟ್ ಕೈ ತಪ್ಪಿ ಸ್ವತಂತ್ರವಾಗಿ ಸ್ಪರ್ಧಿಸಿದರೂ ನಾವು ನಿಮ್ಮ ಬೆನ್ನಿಗೆ ನಿಲ್ಲುತ್ತೇವೆ' ಎಂದು ಭರವಸೆ ನೀಡಿದರು.

ಕುಮಾರಸ್ವಾಮಿ ಒಕ್ಕಲಿಗ ನಾಯಕರನ್ನು ತುಳಿಯುತ್ತಿದ್ದಾರೆಂದು ನಾನು ಹೇಳಿಲ್ಲ. ಎಚ್‌ಡಿಕೆ ಪ್ರಜ್ಞಾವಂತರಿದ್ದು ಎಲ್ಲರನ್ನೂ ಸಮಾಧಾನಪಡಿಸಿ ನನಗೇ ಟಿಕೆಟ್ ಕೊಡಲಿದ್ದಾರೆ

ಸಿ.ಪಿ. ಯೋಗೇಶ್ವರ್
ಬಿಜೆಪಿ-ಜೆಡಿಎಸ್ ಮೈತ್ರಿ ಟಿಕೆಟ್ ಆಕಾಂಕ್ಷಿ

ತುಕಾರಾಂ ಪತ್ನಿಗೆ ಟಿಕೆಟ್ ಬೇಡ ಎಂದ ಅತೃಪ್ತ ಕಾಂಗ್ರೆಸ್ ನಾಯಕರು

ತೋರಣಗಲ್ಲು (ಬಳ್ಳಾರಿ): ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸಂಸದ ತುಕಾರಾಂ ಪತ್ನಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಗುವುದು ಬಹುತೇಕ ಖಚಿತವಾದ ಹಿನ್ನೆಲೆಯಲ್ಲಿ ಬುಧವಾರ ತೋರಣಗಲ್‌ನಲ್ಲಿ ಸಭೆ ಸೇರಿದ ತಾಲ್ಲೂಕಿನ ಅತೃಪ್ತ ನಾಯಕರು ಬೇರೆಯವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರು, ಸಂಡೂರು, ತೋರಣಗಲ್, ಕುರುಕುಪ್ಪ ಪುರಸಭೆ ಸದಸ್ಯರು, ಮಾಜಿ ಸದಸ್ಯರು, ಮುಖಂಡರು, ಕಾರ್ಯಕರ್ತರು ಸೇರಿದ್ದ ಈ ಸಭೆಯಲ್ಲಿ ತುಕಾರಾಂ ಅವರ ಕುಟುಂಬ ಬಿಟ್ಟು ಬೇರೆಯವರಿಗೆ ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯ ಕೇಳಿ ಬಂತು. ಕ್ಷೇತ್ರದ ಮೇಲೆ ಹಿಡಿತ ಹೊಂದಿರುವ ಸಂತೋಷ್ ಲಾಡ್ ಅವರು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಹಲವರು ಒತ್ತಾಯಿಸಿದರು.

'ಪಕ್ಷ ಕುಟುಂಬ ರಾಜಕಾರಣಕ್ಕೆ ಅವಕಾಶ ನೀಡದೇ ಸಾಮಾಜಿಕ ನ್ಯಾಯಕ್ಕೆ ಆದ್ಯತೆ ಕೊಡಬೇಕು. ಪಕ್ಷದ ಸಾಮಾನ್ಯ ಕಾರ್ಯಕರ್ತನಿಗೆ ಅವಕಾಶ ನೀಡಬೇಕು. ಇ.ತುಕಾರಾಂ ನಾಲ್ಕು ಬಾರಿ ಶಾಸಕರು, ಸಚಿವರು ಮತ್ತು ಸಂಸದರಾಗಿ ಆಯ್ಕೆಯಾಗಿದ್ದಾರೆ. ಈಗ ಮತ್ತೆ ಅವರ ಕುಟುಂಬದವರಿಗೆ ಟಿಕೆಟ್ ಕೊಟ್ಟರೆ ಸರಿಯಾಗದು' ಎಂದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ತುಮಟಿ ಲಕ್ಷ್ಮಣ ಹೇಳಿದರು.

'ಸಂವಿಧಾನದಲ್ಲಿ ಸರ್ವರಿಗೂ ಸಮಬಾಳು, ಸಮಪಾಲು ಎಂಬ ಧ್ಯೇಯವಿದೆ. ಅದರಂತೆ ನಮ್ಮ ಹಕ್ಕುಗಳನ್ನು ಪಡೆಯಲು ನಾವೆಲ್ಲರೂ ಸಭೆ ಸೇರಿದ್ದೇವೆ. ಸಚಿವ ಸಂತೋಷ್ ಲಾಡ್ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಪರಿಶಿಷ್ಟ ಪಂಗಡದ ಬೇರೆ ವ್ಯಕ್ತಿಗೆ ಅವಕಾಶ ನೀಡಬೇಕು' ಎಂದು ಸಂಡೂರಿನ ಕಾಂಗ್ರೆಸ್ ಮುಖಂಡ ಜಯಣ್ಣ ಒತ್ತಾಯಿಸಿದರು.

3 ದಿನದಲ್ಲಿ ಅಭ್ಯರ್ಥಿಗಳು ಅಂತಿಮ

ಬೆಂಗಳೂರು: ಶಿಗ್ಗಾವಿ, ಚನ್ನಪಟ್ಟಣ, ಸಂಡೂರು ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಮುಖ ನಾಯಕರ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಿ, ಮೂರು ದಿನದಲ್ಲಿ ಅಂತಿಮಗೊಳಿಸಲಾಗುವುದು ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಈ ಕ್ಷೇತ್ರಗಳಿಗೆ ಮೂರು ತಂಡಗಳು ಹೋಗಿ ಸ್ಥಳೀಯ ಅಭಿಪ್ರಾಯ ಪಡೆದು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ನೀಡಿದ್ದಾರೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಶಿಗ್ಗಾವಿಯಲ್ಲಿ ನನ್ನ ಮಗನ ಸ್ಪರ್ಧೆ ಬಗ್ಗೆ ನನಗೆ ಇಚ್ಛೆ ಇಲ್ಲ. ಪ್ರಸ್ತಾವವನ್ನೂ ಇಟ್ಟಿಲ್ಲ. ಕೋರ್ ಕಮಿಟಿ ಸಭೆಯಲ್ಲಿ ಪ್ರಸ್ತಾಪ ಆಗಿದೆ. ನನ್ನ ಜೊತೆ ಚರ್ಚಿಸಿ ತೀರ್ಮಾನಿಸುವುದಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಹೇಳಿದ್ದಾರೆ' ಎಂದರು. 'ಶಿಗ್ಗಾವಿ ನಾನು ಪ್ರತಿನಿಧಿಸುತ್ತಿದ್ದ ಕ್ಷೇತ್ರ, ನನ್ನ ಮೇಲೆ ಹೆಚ್ಚು ಜವಾಬ್ದಾರಿ ಇದೆ. ನಮ್ಮ ಪಕ್ಷದ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಅವರು ಕ್ಷೇತ್ರಕ್ಕೆ ಭೇಟಿ ನೀಡಿ, ಸ್ಥಳೀಯರ ಅಭಿಪ್ರಾಯ ಪಡೆದಿದ್ದಾರೆ. ನನಗೆ ಸಿಕ್ಕಿದ್ದ ಸುಮಾರು 36 ಸಾವಿರ ಗೆಲುವಿನ ಅಂತರ ಈ ಬಾರಿಯೂ ಸಿಗುವ ನಂಬಿಕೆ ಇದೆ' ಎಂದು ಬೊಮ್ಮಾಯಿ ಹೇಳಿದರು.

ಮಾಜಿ ಸಚಿವ ಮುರುಗೇಶ್ ನಿರಾಣಿ ಸ್ಪರ್ಧೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಹೊರಗಿನವರ ಸ್ಪರ್ಧೆ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಿ ತೀರ್ಮಾನಿಸಲಾಗುತ್ತದೆ. 50ಕ್ಕೂ ಹೆಚ್ಚು ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ' ಎಂದರು.

ಯೋಗೇಶ್ವರ್ ಪರ ಮಾತು: 'ನಾವು ಐದಾರು ಜನ ಬಿಜೆಪಿ ಮುಖಂಡರು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಸಿ.ಪಿ. ಯೋಗೇಶ್ವರ್ ಸ್ಪರ್ಧೆಯ ಬಗ್ಗೆ ಅವರಿಗೆ ಕೇಳಿದ್ದೇವೆ. ಚನ್ನಪಟ್ಟಣ ಕ್ಷೇತ್ರದ ಟಿಕೆಟನ್ನು ನಮ್ಮ ಪಕ್ಷದ ಹೈಕಮಾಂಡ್ ಹಾಗೂ ಕುಮಾರಸ್ವಾಮಿಯವರು ಸೇರಿ ತೀರ್ಮಾನ ಮಾಡುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬೀದಿ ನಾಯಿಗಳ ದಾಳಿ 10 ವರ್ಷದ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಮಿಥುನ್

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ವಸತಿಶಾಲೆ ಪ್ರವೇಶ ಪರೀಕ್ಷೆಯ ತರಬೇತಿ ಕೇಂದ್ರದಿಂದ ಮನೆಗೆ ಮರಳುತ್ತಿದ್ದ ಬಾಲಕನ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿದ ಪರಿಣಾಮ ಆತ ತೀವ್ರ ಗಾಯಗೊಂಡು ಮೃತಪಟ್ಟಿರುವ ಘಟನೆ ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ಚನ್ನಮಲ್ಲಿಕಾರ್ಜುನ ಅವರ ಪುತ್ರ ಮಿಥುನ್ (10) ಮೃತ ಬಾಲಕ. ಮಿಥುನ್ ನಿತ್ಯವೂ ಬೆಳಿಗ್ಗೆ ನವೋದಯ, ಮೊರಾರ್ಜಿ ಮತ್ತಿತರ ವಸತಿಶಾಲೆಯ ಪ್ರವೇಶ ಪರೀಕ್ಷೆಯ ತರಬೇತಿಗೆ ತೆರಳುತ್ತಿದ್ದ. ಎಂದಿನಂತೆ ಬೆಳಿಗ್ಗೆ 9 ಗಂಟೆಗೆ ತರಗತಿ ಮುಗಿಸಿಕೊಂಡು ಮನೆಗೆ ಮರಳುವಾಗ 3 ಬೀದಿ ನಾಯಿಗಳು ದಾಳಿ ನಡೆಸಿವೆ.

ಬಾಲಕನನ್ನು ಸುತ್ತುವರಿದ ನಾಯಿಗಳು ಕಚ್ಚಿ ತೀವ್ರ ಗಾಯಗೊಳಿಸಿವೆ. ಬಾಲಕ ಅರಚುವುದನ್ನು ಕೇಳಿಸಿಕೊಂಡ ಆಟೊ ಚಾಲಕರೊಬ್ಬರು ನಾಯಿಗಳನ್ನು ಓಡಿಸಿದ್ದಾರೆ. ಅವರು ತಕ್ಷಣವೇ ಬಾಲಕನನ್ನು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದ್ದಾರೆ. ತಲೆ ಹಾಗೂ ಎದೆ ಭಾಗದಲ್ಲಿ ತೀವ್ರ ಗಾಯಗಳಾಗಿದ್ದ ಕಾರಣ ವೈದ್ಯರು ಬಳ್ಳಾರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದರು. ಅಲ್ಲಿ ಬಾಲಕ ಮೃತಪಟ್ಟಿದ್ದಾನೆ.

ಬಾಲಕ ಸ್ಥಳೀಯ ಅರುಣೋದಯ ಶಾಲೆಯಲ್ಲಿ 5ನೇ ತರಗತಿ ಓದುತ್ತಿದ್ದ. ಗ್ರಾಮದಲ್ಲಿ ಬೀದಿನಾಯಿ ಹಾವಳಿ ತೀವ್ರವಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ರಾಂಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ್ದ ಕೈದಿ ಸಾವು

ಬೆಳಗಾವಿ: 'ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ನೇಣು ಹಾಕಿಕೊಳ್ಳಲು ಯತ್ನಿಸಿದ್ದ ಕೈದಿಯೊಬ್ಬ ಬುಧವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. 'ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಬಳ್ಳಾರಿ ಗಿರೀಶ ಮೃತಪಟ್ಟವ. ನಿತ್ರಾಣಗೊಂಡಿದ್ದ ಆತನನ್ನು ಕಂಡು ಸಹ ಕೈದಿಗಳು ಬಂದಿಖಾನೆ ಅಧಿಕಾರಿಗಳಿಗೆ ತಿಳಿಸಿದ್ದರು.

ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಸ್ಪಂದಿಸದೇ ಕೊನೆಯುಸಿರೆಳೆದಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'2 ದಿನದಲ್ಲಿ ಆಕಾಂಕ್ಷಿಗಳ ಪಟ್ಟಿ ಕಳುಹಿಸಿ'

ರಾಜ್ಯ ನಾಯಕರಿಗೆ ಕೆ.ಸಿ.ವೇಣುಗೋಪಾಲ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಗೆ ತಲಾ ಇಬ್ಬರು ಆಕಾಂಕ್ಷಿಗಳ ಪಟ್ಟಿ ಸಿದ್ಧಪಡಿಸಿ, ಎರಡು ದಿನಗಳ ಒಳಗೆ ಕಳುಹಿಸಿಕೊಡುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ.

ಲೋಕಸಭೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷರೂ ಆಗಿರುವ ವೇಣುಗೋಪಾಲ್ ಅವರು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆ ಉಪಚುನಾವಣೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಶಿಗ್ಗಾವಿ ಕ್ಷೇತ್ರದಲ್ಲಿ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಹಾವೇರಿ ಜಿಲ್ಲೆ ಹಾಗೂ ಶಿಗ್ಗಾವಿ ಕ್ಷೇತ್ರದ ಮುಖಂಡರ ಜತೆ ಚರ್ಚಿಸಿ, ಇಬ್ಬರ ಹೆಸರು ಕಳುಹಿಸಿಕೊಡಬೇಕು. ಸಂಡೂರು ಕ್ಷೇತ್ರದಲ್ಲಿ ಸಂಸದ ಇ.ತುಕಾರಾಂ ಮಗಳು ಅಥವಾ ಪತ್ನಿ ಪೈಕಿ ಯಾರನ್ನು ಕಣಕ್ಕೆ ಇಳಿಸಿದರೆ ಅನುಕೂಲವಾಗುತ್ತದೆ ಎನ್ನುವುದನ್ನು ನೀವೇ ನಿರ್ಧರಿಸಬೇಕೆಂದು ಹೇಳಿದ್ದಾರೆಂದು ಮೂಲಗಳು ತಿಳಿಸಿವೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಜತೆ ಚರ್ಚಿಸಿದರು

ಚನ್ನಪಟ್ಟಣ ಅಭ್ಯರ್ಥಿ ಆಯ್ಕೆ ಕುರಿತು ಬಿಜೆಪಿ-ಜೆಡಿಎಸ್ ಮಿತ್ರ ಪಕ್ಷಗಳಲ್ಲಿ ಒಮ್ಮತ ಇರುವಂತೆ ಕಾಣುತ್ತಿಲ್ಲ. ಬಿಜೆಪಿಯ ಯೋಗೇಶ್ವರ ನಡೆ ನೋಡಿಕೊಂಡು ಯಾರನ್ನು ಕಣಕ್ಕೆ ಇಳಿಸಬೇಕೆಂಬ ನಿರ್ಧಾರ ಡಿ.ಕೆ. ಶಿವಕುಮಾರ್ ಮಾಡಲಿ. ಯಾರನ್ನೇ ನಿಲ್ಲಿಸಿದರೂ ಗೆಲ್ಲಿಸುವ ಜವಾಬ್ದಾರಿ ಅವರಿಗೆ ಬಿಡೋಣ ಎಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಉಪಚುನಾವಣೆಗೆ ಬಿಜೆಪಿ-ಜೆಡಿಎಸ್ ಮಾಡಿಕೊಂಡಿರುವ ಸಿದ್ಧತೆ, ಕಣಕ್ಕಿಳಿಸಲಿರುವ ಅಭ್ಯರ್ಥಿಗಳು, ಕ್ಷೇತ್ರಗಳಲ್ಲಿ ಪಕ್ಷಕ್ಕಿರುವ ಅನುಕೂಲ, ಮೈತ್ರಿ ಪಕ್ಷಗಳನ್ನು ಎದುರಿಸುವ ಮಾರ್ಗಗಳ ಕುರಿತು ಚರ್ಚಿಸಿದ್ದಾರೆ.

ಮುಡಾ, ವಾಲ್ಮೀಕಿ ನಿಗಮದ ಚರ್ಚೆ: ಮುಡಾ, ವಾಲ್ಮೀಕಿ ನಿಗಮದ ಪ್ರಕರಣಗಳ ತನಿಖೆ, ಪ್ರಸ್ತುತ ಸನ್ನಿವೇಶಗಳ ಕುರಿತು ವೇಣುಗೋಪಾಲ್ ಮಾಹಿತಿ ಪಡೆದುಕೊಂಡಿದ್ದಾರೆ. ಮುಖ್ಯಮಂತ್ರಿ ಪತ್ನಿ ಹೆಸರಿನಲ್ಲಿದ್ದ ನಿವೇಶನಗಳನ್ನು ವಾಪಸ್ ನೀಡಿದ ನಂತರ ಆಗಿರುವ ಅನುಕೂಲ, ಲೋಕಾಯುಕ್ತ ತನಿಖೆಯ ಪ್ರಗತಿ ಕುರಿತು ವಿಚಾರ ವಿನಿಮಯ ನಡೆಸಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಕುರಿತು ಸಚಿವರು, ಶಾಸಕರು ನೀಡಿರುವ ಹೇಳಿಕೆಗಳು, ದಲಿತ ಮುಖ್ಯಮಂತ್ರಿ ಹೇಳಿಕೆ, ಸಚಿವರ ರಹಸ್ಯ ಸಭೆಗೆ ತಡೆ ಹಾಕಿರುವ ಕುರಿತು ಚರ್ಚಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಧ್ಯಕ್ಷೆ ಕುರ್ಚಿಯಲ್ಲಿ ರಾಜವಂಶಸ್ಥೆ: ಸಿ.ಎಂ.ಗೆ ದೂರು

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಆನೆಗೊಂದಿ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ (ಅ.15) ನಡೆದ ಸಾಮಾನ್ಯ ಸಭೆ ವೇಳೆ ರಾಜವಂಶಸ್ಥ ಮಹಿಳೆಯನ್ನು ಅಧ್ಯಕ್ಷೆ ಸ್ಥಾನದಲ್ಲಿ ಕೂಡಿಸಿ ಸಭೆ ನಡೆಸಲಾಗಿದೆ. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಆನೆಗೊಂದಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೆ.ಮಹಾದೇವಿ ಅವರು ಬುಧವಾರ ಮುಖ್ಯಮಂತ್ರಿ ಹಾಗೂ ಸಂಬಂಧಿಸಿದ ಇಲಾಖೆಯ ಸಚಿವರಿಗೆ ದೂರು ನೀಡಿದ್ದಾರೆ.

ಆನೆಗೊಂದಿ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಅಧ್ಯಕ್ಷೆ ಕೆ.ಮಹಾದೇವಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ತ್ಯಾಜ್ಯ ಸಂಗ್ರಹಣೆ ಮತ್ತು ವಿಂಗಡಣೆ ಬಗ್ಗೆ ಸಾಮಾನ್ಯ ಸಭೆ ನಡೆದಿತ್ತು. ಸಭೆಯ ನಡುವೆ ಅನಾರೋಗ್ಯದ ಕಾರಣ ಗುಳಿಗೆ ತೆಗೆದುಕೊಳ್ಳಲು ಸಭೆಯಿಂದ ಹೊರ ಹೋಗಿದ್ದ ವೇಳೆ ಜಿ.ಪಂ.ಸಿಇಒ, ತಾ.ಪಂ.ಇಒ ಸಭೆಗೆ ಬಂದಿದ್ದಾರೆ. ಬಳಿಕ ರಾಜವಂಶಸ್ಥೆ ರತ್ನಶ್ರೀ ರಾಯಲು ಅವರನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆಯ ಕುರ್ಚಿಯಲ್ಲಿ ಕೂರಿಸಿ ಸಭೆಯನ್ನು ಮುಂದುವರಿಸಲಾಗಿದ್ದು, ಸಂವಿಧಾನಿಕ ನೀತಿ-ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಅಧ್ಯಕ್ಷೆ ದೂರಿದ್ದಾರೆ.

ವಿಜಯ ಸಂಕೇಶ್ವರಗೆ ಪಂಚವರ್ಣ ರಾಜ್ಯೋತ್ಸವ ಪ್ರಶಸ್ತಿ

ಬ್ರಹ್ಮಾವರ (ಉಡುಪಿ): ಕೋಟದ ಪಂಚವರ್ಣ ಯುವಕ ಮಂಡಲ, ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ನವೆಂಬರ್ 16ರಂದು ನಡೆಯುವ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಉದ್ಯಮಿ ವಿಜಯ ಸಂಕೇಶ್ವರ ಅವರಿಗೆ ಪಂಚವರ್ಣ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಗುವುದು.



ಪ್ರಶಸ್ತಿಯು ₹20 ಸಾವಿರ ಮೌಲ್ಯದ ಬೆಳ್ಳಿ ಫಲಕ, ₹10 ಸಾವಿರ ನಗದು ಒಳಗೊಂಡಿದೆ.

ಕಾರ್ಕಳದ ಪರಿಸರ ಸ್ನೇಹಿ ಸಂಘಟನೆ 'ಸ್ವಚ್ಛ ಬ್ರಿಗೇಡ್ ಕಾರ್ಕಳ' ತಂಡಕ್ಕೆ ವಿಶೇಷ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಅಜಿತ್ ಆಚಾರ್, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ ಗಾಣಿಗ ಅವರು ತಿಳಿಸಿದ್ದಾರೆ.

ನೀಟ್: ಮಾಪ್‌ಅಪ್ ಫಲಿತಾಂಶ ಪ್ರಕಟ

ಬೆಂಗಳೂರು: ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಮಾಪ್‌ಅಪ್ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ.

ಆಕ್ಷೇಪಣೆಗಳು ಇದ್ದಲ್ಲಿ ಅ.17ರ ಮಧ್ಯಾಹ್ನ 1ರ ಒಳಗೆ ಇ-ಮೇಲ್ ಮೂಲಕ ಸಲ್ಲಿಸಬಹುದು. ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಫಲಿತಾಂಶವನ್ನು ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಮಾಪ್‌ಅಪ್ ಸುತ್ತಿನಲ್ಲಿ ಹಂಚಿಕೆಗೆ ಇದ್ದ 710 ವೈದ್ಯಕೀಯ ಸೀಟುಗಳಲ್ಲಿ ಆಡಳಿತ ಮಂಡಳಿ ಕೋಟಾದ 70 ಸೀಟು ಹೊರತುಪಡಿಸಿ ಉಳಿದ ಎಲ್ಲ ಸೀಟುಗಳನ್ನೂ ಹಂಚಿಕೆ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಹಿಜಾಬ್: ನಟ ಚೇತನ್ ವಿರುದ್ಧದ ವಾರಂಟ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಕುರಿತು ತೀರ್ಪು ನೀಡಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಟ್ವೀಟ್ ಮಾಡಿದ ಆರೋಪದಡಿ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನಟ ಚೇತನ್ ಕುಮಾರ್ ಅಹಿಂಸಾ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅವರ ವಿರುದ್ಧ ಹೊರಡಿಸಲಾಗಿದ್ದ ಜಾಮೀನು ರಹಿತ ವಾರಂಟ್ ಅನ್ನು ಹೈಕೋರ್ಟ್ ಹಿಂಪಡೆದಿದೆ.

ಬೆಂಗಳೂರಿನ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಚೇತನ್ ಪರ ವಕೀಲ ಜೆ.ಡಿ.ಕಾಶಿನಾಥ್, 'ಅರ್ಜಿದಾರ ಚೇತನ್ ವಿರುದ್ಧ 2024ರ ಸೆಪ್ಟೆಂಬರ್ 14ರಂದು ನ್ಯಾಯಾಲಯ ಹೊರಡಿಸಿರುವ ಜಾಮೀನು ರಹಿತ ವಾರಂಟ್ ಹಿಂಪಡೆಯಬೇಕು' ಎಂದು ನ್ಯಾಯ ಪೀಠಕ್ಕೆ ಮನವಿ ಮಾಡಿದರು. ಈಕುರಿತಾದ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಪೀಠ, 'ಜಾಮೀನು ರಹಿತ ಬಂಧನದ ವಾರಂಟ್ ಜೊತೆಗೆ ಚೇತನ್‌ಗೆ ವಿಧಿಸಲಾಗಿರುವ ₹5 ಸಾವಿರ ದಂಡವನ್ನು ಹೈಕೋರ್ಟ್‌ನ ವಕೀಲರ ಗ್ರಂಥಾಲಯಕ್ಕೆ ಪಾವತಿಸಬೇಕು' ಎಂದು ನಿರ್ದೇಶಿಸಿತು.

ಅಂತೆಯೇ, 'ಚೇತನ್, ಈ ಮೊದಲಿನ ಕೋರ್ಟ್ ಆದೇಶ ಪಾಲಿಸಲು ವಿಫಲವಾಗಿರುವ ಕಾರಣ ಅವರಿಗೆ ನೀಡಲಾಗಿದ್ದ ಜಾಮೀನು ರದ್ದಾಗಿದೆ.

ಚೇತನ್ ಅಹಿಂಸಾ

ಆದ್ದರಿಂದ, ಹೊಸದಾಗಿ ₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಇಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ ಒದಗಿಸಬೇಕು' ಎಂದು ನ್ಯಾಯಪೀಠ ಆದೇಶಿಸಿತು.

ಇದೇ ವೇಳೆ ಪ್ರಕರಣದ ಮೊದಲನೇ ಆರೋಪಿ ಆರ್.ರಹಮತ್ ಉಲ್ಲಾ ಪರ ವಕೀಲ ಎ.ವೇಲನ್, 'ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ವಿಳಂಬವಾಗಿರುವ ಕಾರಣ ಈ ಅರ್ಜಿ ಅನೂರ್ಜಿತವಾಗಲಿದೆ' ಎಂದು ಪ್ರತಿಪಾದಿಸಿದರು.

ಆದರೆ ಇದನ್ನು ನಿರಾಕರಿಸಿದ ನ್ಯಾಯಪೀಠ, 'ಈ ಹಂತದಲ್ಲಿ ಅದನ್ನು ಪರಿಗಣಿಸಲಾಗದು' ಎಂದು ಹೇಳಿ ವಿಚಾರಣೆಯನ್ನು ನವೆಂಬರ್ 6ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಮಧುಸೂದನ್ ಅಡಿಗ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು.

ಹೈಕೋರ್ಟ್ ನ್ಯಾಯಮೂರ್ತಿಗಳ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ಟ್ವೀಟ್ ಮಾಡಿದ ಆರೋಪದಡಿ ಚೇತನ್ ಕುಮಾರ್ ಅಹಿಂಸಾ ಅಲಿಯಾಸ್ ಚೇತನ್ ಅಹಿಂಸಾ ವಿರುದ್ಧ ಮತ್ತು ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಹಾಕಿದ ಆರೋಪದಡಿ ತಮಿಳುನಾಡಿನ ಮದುರೈನ ಆರ್.ರಹಮತ್ ಉಲ್ಲಾ ವಿರುದ್ಧ ನಗರದ ಗಿರೀಶ್ ಭಾರದ್ವಾಜ್ ಈ ಕ್ರಿಮಿನಲ್ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದ್ದಾರೆ.

ಮಮದಾಪುರ ಅರಣ್ಯಕ್ಕೆ ಸಿದ್ದೇಶ್ವರ ಶ್ರೀ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯ 1,494.38 ಎಕರೆ ಒಳಗೊಂಡ ಮಮದಾಪುರ ಅರಣ್ಯಪ್ರದೇಶಕ್ಕೆ 'ಶ್ರೀ ಸಿದ್ದೇಶ್ವರ ಸ್ವಾಮೀಜಿ ಜೀವವೈವಿಧ್ಯ ಪಾರಂಪರಿಕ ತಾಣ' ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಧ್ಯಾತ್ಮಿಕ ಬೋಧನೆಗಳಿಂದ ಜನಮನಗೆದ್ದಿದ್ದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಪರಿಸರ ಸಂರಕ್ಷಣೆ ಮತ್ತು ಸಮುದಾಯ ಯೋಗಕ್ಷೇಮಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಶ್ರೀಗಳ ಸ್ಮರಣಾರ್ಥ ಅವರ 2ನೇ ಪುಣ್ಯ ಸ್ಮರಣೆಯ ದಿನವಾದ ಜ.2ರಂದು ವಿಜಯಪುರದಲ್ಲಿ ನೂತನ ಹೆಸರಿನ ಫಲಕವನ್ನು ಅನಾವರಣ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

'ವಿಜಯಪುರ, ಬಾಗಲಕೋಟೆ ಭಾಗದಲ್ಲಿ ಅರಣ್ಯ ಪ್ರದೇಶವೇ ಕಡಿಮೆ ಇದ್ದು, ಈಗಿರುವ ಪ್ರದೇಶ ಹಾಗೂ ಇಲ್ಲಿನ ಜೀವ ವೈವಿಧ್ಯತೆಯನ್ನು ಸಂರಕ್ಷಿಸಲಾಗುವುದು. ಜೀವವೈವಿಧ್ಯ ಕಾಯಿದೆ 2022ರ ಸೆಕ್ಷನ್ 37ರ ಅನ್ವಯ ಮರುನಾಮಕರಣ ಮಾಡಲಾಗುವುದು. ಶ್ರೀಗಳ ಹೆಸರಿಟ್ಟರೆ ಜನರಲ್ಲಿ ಪರಿಸರ ಜಾಗೃತಿ ಮೂಡಿಸಲು ನೆರವಾಗಲಿದೆ. ಆದಿವಾಸಿಗಳ ದೈನಂದಿನ ಬದುಕಿನ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ' ಎಂದರು.

'50 ಲಕ್ಷ ದಾಟಿದ ಬಿಜೆಪಿ ಸದಸ್ಯತ್ವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 'ಸದಸ್ಯತ್ವ ಅಭಿಯಾನ'ದಡಿ 50 ಲಕ್ಷ ಸದಸ್ಯತ್ವ ನೋಂದಣಿ ಪೂರ್ಣಗೊಳಿಸಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದರು.

ಈ ಬಾರಿ 1.25 ಕೋಟಿ ಸದಸ್ಯತ್ವದ ಗುರಿ ನೀಡಲಾಗಿದ್ದು, ಅದನ್ನೂ ಮೀರಿ 50 ಲಕ್ಷ ಹೆಚ್ಚು ಮಾಡಲು ಅಮಿತ್ ಶಾ ಸೂಚಿಸಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

2014 ರಲ್ಲಿ ಆನ್‌ಲೈನ್ ಮೂಲಕ ಸದಸ್ಯತ್ವ ಅಭಿಯಾನ, 2019 ರಲ್ಲಿ ಮಿಸ್ಡ್ ಕಾಲ್ ಮೂಲಕ ಸದಸ್ಯತ್ವ ನೋಂದಣಿ ಪ್ರಕ್ರಿಯೆ ನಡೆದಿತ್ತು. ಮಿಸ್ಡ್ ಕಾಲ್ ಜೊತೆಗೆ, ಈ ಬಾರಿ ಸದಸ್ಯತ್ವ ಅಭಿಯಾನ ಸಮಿತಿಯನ್ನೂ ರಚಿಸಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಹಿರಿಯ ನಾಯಕರಿಗೆ ನೇತೃತ್ವ ವಹಿಸಲಾಗಿದೆ. ವಿಳಾಸ, ಕುಟುಂಬದ ಮಾಹಿತಿ, ವಿಧಾನಸಭಾ ಕ್ಷೇತ್ರ, ಬೂತ್ ವಿವರ, ಇ-ಮೇಲ್ ಐಡಿಯನ್ನೂ ಪಡೆಯಲಾಗುತ್ತಿದೆ ಎಂದರು.

2014ರಲ್ಲಿ ರಾಜ್ಯದಲ್ಲಿ 74.88 ಲಕ್ಷ ಸದಸ್ಯತ್ವ ಇತ್ತು. 2019ರಲ್ಲಿ 26 ಲಕ್ಷ ಸದಸ್ಯರು ಸೇರಿದರು. 'ರಾಷ್ಟ್ರ ಮಟ್ಟದಲ್ಲಿ 9.22 ಕೋಟಿ ಸದಸ್ಯತ್ವ ಪೂರ್ಣಗೊಂಡಿದೆ. ನಮ್ಮ ಗುರಿ 11 ಕೋಟಿಯಾಗಿದ್ದು, ಅಭಿಯಾನವನ್ನು ಇದೇ 31ರವರೆಗೆ ವಿಸ್ತರಿಸಲಾಗಿದೆ' ಎಂದರು.

ಪೊಲೀಸ್ ಅಧಿಕಾರಿ ಹೆಸರಿನಲ್ಲಿ ಉದ್ಯಮಿಗೆ ₹1.39 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಪೊಲೀಸ್ ಅಧಿಕಾರಿ ಹೆಸರಿನಲ್ಲಿ ಅಪರಿಚಿತ ವ್ಯಕ್ತಿ ನಗರದ ಉದ್ಯಮಿ ಪಾರ್ವತಿದೇವಿ ಅವರಿಂದ ಆನ್‌ಲೈನ್ ಮೂಲಕ ₹1.39 ಕೋಟಿ ಪಡೆದು ವಂಚಿಸಿದ್ದಾರೆ.

ಸೆ.18ರಂದು ಪಾರ್ವತಿ ಅವರಿಗೆ ಕರೆ ಮಾಡಿದ ವ್ಯಕ್ತಿ ತನ್ನನ್ನು ದೆಹಲಿಯ ಪೊಲೀಸ್‌ಅಧಿಕಾರಿಯೆಂದು ಪರಿಚಯಿಸಿಕೊಂಡಿದ್ದಾನೆ. 'ಟೆಲಿಕಾಂ ರಿಜಿಸ್ಟರಿಂಗ್ ಅಥಾರಿಟಿ ಆಫ್ ಇಂಡಿಯಾದಲ್ಲಿ ನಿಮ್ಮ ವಿರುದ್ಧ ಪ್ರಕರಣ ದಾಖಲಾಗಿದ್ದು, ದೆಹಲಿಯಲ್ಲಿ ನಿಮ್ಮ ಹೆಸರಿನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದು ಕೋಟ್ಯಂತರ ರೂಪಾಯಿ ವ್ಯವಹಾರ ಮಾಡಲಾಗಿದೆ. ಆಧಾರ್ ಕಾರ್ಡ್‌ನ್ನೂ ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ಬೆದರಿಸಿದ್ದಾನೆ.

'ಮಹಿಳೆಗೆ ಬಂಧನದ ವಾರಂಟ್ ಪ್ರತಿ, ಜಾಮೀನು ಭದ್ರತಾ ಬಾಂಡ್‌ನ ನಕಲಿ ಪ್ರತಿ ಕಳಿಸಿ ₹2 ಕೋಟಿಯನ್ನು ಸೆಕ್ಯೂರಿಟ್ ಬಾಂಡ್ ಇಡಬೇಕು. ಪ್ರಕರಣದ ತನಿಖೆ ಮುಗಿದ ಬಳಿಕ ಅ.10ರಂದು ಹಣ ಹಿಂದಿರುಗಿಸುತ್ತೇವೆ ಎಂದು ತಿಳಿಸಿದ್ದಾನೆ. ಅದನ್ನು ನಂಬಿದ ಮಹಿಳೆ ಆತ ತಿಳಿಸಿದ್ದ ಖಾತೆಗೆ ಹಂತ ಹಂತವಾಗಿ ಹಣ ಕಳುಹಿಸಿದ್ದಾರೆ. ಹಣವನ್ನು ಹಿಂದುರಿಗಿಸದೆ, ಸಂಪರ್ಕಕ್ಕೂ ಸಿಗದೆ ಇದ್ದಾಗ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎರಡು ಪಟ್ಟು ಶುಲ್ಕ: ವಿಟಿಯು ನಿರ್ಧಾರಕ್ಕೆ ವಿರೋಧ

ದಾವಣಗೆರೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಸರ್ಕಾರಿ ಎಂಜಿನಿಯರಿಂಗ್ ಘಟಕ ಕಾಲೇಜುಗಳಲ್ಲಿ ಪೇಮೆಂಟ್ ಕೋಟಾ ವ್ಯವಸ್ಥೆ ಜಾರಿಗೊಳಿಸಿರುವುದನ್ನು ವಿರೋಧಿಸಿ 'ಯುಬಿಡಿಟಿ ಕಾಲೇಜು ಉಳಿಸಿ ಹೋರಾಟ ಸಮಿತಿ' ಬುಧವಾರ ಕರೆ ನೀಡಿದ್ದ ದಾವಣಗೆರೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ನಗರದ ಕೆಲವೆಡೆ ಅಂಗಡಿಗಳು ಬಾಗಿಲು ಮುಚ್ಚಿದ್ದು ಹೊರತುಪಡಿಸಿ ಜನಜೀವನ ಸಹಜವಾಗಿತ್ತು.

ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಇಲ್ಲಿನ ಯುಬಿಡಿಟಿಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಶೇ 50ರಷ್ಟು ಸೀಟುಗಳನ್ನು ಪೇಮೆಂಟ್ ಕೋಟಾದಡಿ ಭರ್ತಿ ಮಾಡಿಕೊಳ್ಳಲು ಕೈಗೊಂಡಿರುವ ನಿರ್ಧಾರವನ್ನು ವಿರೋಧಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ಹೋರಾಟ ಕೈಗೆತ್ತಿಕೊಂಡಿದೆ. ಚಳವಳಿಯನ್ನು ತೀವ್ರಗೊಳಿಸಲು ನಗರ ಬಂದ್‌ಗೆ ನೀಡಿದ್ದ ಕರೆಗೆ ಕನ್ನಡಪರ, ರೈತ, ಕಾರ್ಮಿಕ ಹಾಗೂ ದಲಿತ ಸಂಘಟನೆಗಳು ಬೆಂಬಲ ನೀಡಿದ್ದವು.

ಪ್ರತಿಭಟನಕಾರರು ಜಮಾಯಿಸಿದ್ದ ರಸ್ತೆಯಲ್ಲಿದ್ದ ಅಂಗಡಿಗಳು ಬಂದ್ ಆಗಿದ್ದವು. ಅರ್ಧ ದಿನ ವಾಣಿಜ್ಯ ವಹಿವಾಟು ಸ್ಥಗಿತಗೊಂಡಿತ್ತು. ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಬಸ್‌ಗಳ ಸಂಚಾರ ಕೆಲಹೊತ್ತು ಸ್ಥಗಿತಗೊಂಡಿತ್ತು. ನಗರ ಸಾರಿಗೆ ಬಸ್ ಸಂಚರಿಸಿದರೂ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಪದವಿ ಕಾಲೇಜು ವಿದ್ಯಾರ್ಥಿಗಳು ತರಗತಿಯಿಂದ ಹೊರಗುಳಿದು ಹೋರಾಟಕ್ಕೆ ಕೈಜೋಡಿಸಿದರು.

ಬಸ್ ಸಂಚಾರ ತಡೆಯಲು ಯತ್ನಿಸಿದ 20ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದರು. ಆಕ್ರೋಶಕೊಂಡ ಹೋರಾಟ ಸಮಿತಿ ಸದಸ್ಯರು ಜಯದೇವ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಬಿಡುಗಡೆಗೆ ಪಟ್ಟು ಹಿಡಿದರು. ನಂತರ ಪೊಲೀಸರು ಬಂಧಿತರನ್ನು ಬಿಡುಗಡೆಗೊಳಿಸಿದರು.

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ.ನಂ.220307
ಕ್ರ.ಸಂ:ಜಿಆಕುಕಸೋಗ/ಎನ್‌ಹೆಚ್‌ಎಮ್/ಮ.ಆ.ಘು.ಟೆ/182/2024-25 ದಿನಾಂಕ:16/10/2024
ಟೆಂಡರ ಪ್ರಕಟಣೆ
2024-25ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ ಎನ್.ಹೆಚ್.ಎಂ ಕಾರ್ಯಕ್ರಮದಡಿಯಲ್ಲಿ ವಿವಿಧ ಕಾರ್ಯಕ್ರಮಗಳ ಚಟುವಟಿಕೆಗಳಿಗೆ ಅವಶ್ಯವಿರುವ ಆಹಾರ/ಊಟ, ಉಪಹಾರ, ಟೀ/ಕಾಫೀ ಮತ್ತು ಸ್ನ್ಯಾಕ್ಸ್ ಸೇವೆ ಪಡೆಯಲು ಇ-ಪ್ರಕ್ಯೂರ್‌ಮೆಂಟ ಮೂಲಕ ಮರು ಅಲ್ಪಾವಧಿ ಟೆಂಡರ್ ಅಹ್ವಾನಿಸಲಾಗಿದೆ. ಮರು ಅಲ್ಪಾವಧಿ ಟೆಂಡರ್ ಅಂದಾಜು ಮೊತ್ತ ರೂ.24.57 ಲಕ್ಷಗಳು. ಇ.ಎಮ್.ಡಿ ಮೊತ್ತ ರೂ.49,140/- ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ: 16.10.2024 ರಿಂದ ದಿನಾಂಕ: 24.10.2024ರ ಮಧ್ಯಾಹ್ನ 02-00 ಗಂಟೆ ವರೆಗೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No-DHFWS/2024-25/SE0971/CALL-3 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ dhogadag@gmail.com/ rchogadag@gmail.com ಸಂಪರ್ಕಿಸಬಹುದಾಗಿದೆ.
ಸಹಿ/- ಸದಸ್ಯ ಕಾರ್ಯದರ್ಶಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಜಿಲ್ಲಾ ಆರ್.ಸಿ..ಹೆಚ್ ಅಧಿಕಾರಿಗಳು ಗದಗ
ವಾ.ಸಾ.ಇ/ಗದಗ/300/ದೇಶಪಾಂಡೆಪಬ್ಲಿಸಿಟಿ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ದಾಸರಹಳ್ಳಿ ವಲಯ, ಹೆಸರಘಟ್ಟ ಮುಖ್ಯ ರಸ್ತೆ, ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು - 560073
ಸಂ. ಹಿಸತೋನಿ/ದಾವ/ಟೆಂಡರ್/54/2024-25 ದಿನಾಂಕ : 16-10-2024
ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಅಲ್ಪಾವಧಿ) (ದ್ವಿಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಕೆಪಿಪಿ ಮೂಲಕ ಮಾತ್ರ) (ಜಿಎಸ್‌ಟಿ ಹೊರತುಪಡಿಸಿದ ದರಗಳು)
ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ದಾಸರಹಳ್ಳಿ) (ಈ ದಾಖಲೆಗಳಲ್ಲಿ ಉದ್ಯೋಗದಾತರು ಎಂದು ಉಲ್ಲೇಖಿಸಲಾಗಿದೆ) ಇವರು ಕೆಟಿಪಿಪಿ ನಿಯಮಗಳು 2000 ಗೆ ಅನುಸಾರವಾಗಿ ಅನುಷ್ಠಾನಗೊಳಿಸಲು ಅರ್ಹ ಮತ್ತು ಅನುಭವವುಳ್ಳ ವ್ಯಕ್ತಿ / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲೆಗಳಲ್ಲಿ ಟೆಂಡರ್‌ದಾರರು ಎಂದು ಉಲ್ಲೇಖಿಸಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಯ ಹೆಸರು
1	ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಕರ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳು. **ಟೆಂಡರ್‌ಗಿಟ್ಟ ಮೊತ್ತ** (ಜಿಎಸ್‌ಟಿ ಹೊರತುಪಡಿಸಿ) : ರೂ. 1,34,87,980/- **ಇಎಂಡಿ ಮೊತ್ತ** : ರೂ. 2,02,320/-

(1) ಪ್ರಕಟಣೆಯ ದಿನಾಂಕ : 16-10-2024 (2) ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಟೆಂಡರ್‌ನ್ನು ಡೌನ್‌ಲೋಡ್ ಮಾಡಬಹುದಾದ ದಿನಾಂಕ : 21-10-2024 (3) ಬಿಡ್-ಪೂರ್ವ ಸಭೆಯ ದಿನಾಂಕ : 23-10-2024 ರಂದು ಬೆಳಿಗ್ಗೆ 11.00 ಗಂಟೆಗೆ (4) ಟೆಂಡರ್ ಮುಕ್ತಾಯದ ದಿನಾಂಕ : 28-10-2024 ರಂದು ಸಂಜೆ 5.00 ಗಂಟೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 29-10-2024 ರಂದು ಬೆಳಿಗ್ಗೆ 11.00 ಗಂಟೆಗೆ (6) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯ ನಂತರ.
ಸಹಿ/- ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಬೃಬೆಂಮಪಾ

ಪಂಜಾಬ್ ನ್ಯಾಷನಲ್ ಬ್ಯಾಂಕ್ ...भरोसे का प्रतीक! punjab national bank ...the name you can BANK upon!
ಜೆಡ್‌ಒ: 6-1-73, 2ನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ-ಕಾ-ಪೂಲ್, ಹೈದರಾಬಾದ್-04, ಫೋ:040-24475118. ಇ-ಮೇಲ್: zohydsec@pnb.co.in
ಟೆಂಡರ್ ಪ್ರಕಟಣೆ
ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವರು, ಹೈದರಾಬಾದ್ ವಲಯದಲ್ಲಿರುವ ತಮ್ಮ ಶಾಖೆಗಳಿಗೆ / ಕರೆನ್ಸಿ ಚೆಸ್ಟ್‌ಗಳಿಗೆ ಕ್ಯಾಷ್ ವ್ಯಾನ್ ಸೇವೆಗಳನ್ನು ಒದಗಿಸಲು, ಪ್ರೈವೇಟ್ ಸೆಕ್ಯೂರಿಟಿ ಏಜೆನ್ಸೀಸ್ (ರೆಗ್ಯುಲೇಶನ್) ಆಕ್ಟ್, 2005ರ ಪ್ರಕಾರ ಸಂಬಂಧಿತ ರಾಜ್ಯದಿಂದ ಪರವಾನಿಗೆ ಪಡೆದಿರುವ ಖಾಸಗಿ ಭದ್ರತಾ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿದ್ದಾರೆ. ಕಾಮಗಾರಿಯ ಅಂದಾಜು ವೆಚ್ಚ ರೂ. 4.23 ಕೋಟಿ; ಇಎಂಡಿ: ರೂ. 8.46 ಲಕ್ಷ; ಟೆಂಡರ್ ಶುಲ್ಕ ರೂ.2950 (18% ಜಿಎಸ್‌ಟಿ ಸೇರಿದಂತೆ). ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 06.11.2024ರಂದು 15:30 ಗಂಟೆ. ವಿವರಗಳಿಗಾಗಿ ನಮ್ಮ https://pnbindia.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಮೇಲ್ಕಂಡ ಕಾಮಗಾರಿಗೆ ಸಂಬಂಧಿತ ಯಾವುದೇ ತಿದ್ದುಪಡಿ/ಸ್ಪಷ್ಟೀಕರಣಗಳನ್ನು ನಮ್ಮ https://pnbindia.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಆದ್ದರಿಂದ ಆಸಕ್ತಿಯುಳ್ಳ ಬಿಡ್‌ದಾರರು ನಿಯಮಿತವಾಗಿ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು.
ಆಸಕ್ತಿಯುಳ್ಳ ಬಿಡ್‌ದಾರರು, ನಿರ್ದಿಷ್ಟ ನಮೂನೆಯಲ್ಲಿ ತಮ್ಮ ಅರ್ಜಿಯನ್ನು ಭರ್ತಿ ಮಾಡಿ, ಅಗತ್ಯ ದಾಖಲಾತಿ ಪುರಾವೆಗಳ ಸಮೇತ ಸಹಾಯಕ ವಲಯ ಪ್ರಬಂಧಕರು, ಪಂಜಾಬ್ ನ್ಯಾಷನಲ್ ಬ್ಯಾಂಕ್ ಜೋನಲ್ ಆಫೀಸ್, ಹೈದರಾಬಾದ್, 6-1-73, 2ನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ-ಕಾ-ಪೂಲ್, ಹೈದರಾಬಾದ್-500004 ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು.
ದಿನಾಂಕ: 17.10.2024, ಸ್ಥಳ: ಹೈದರಾಬಾದ್ ಸಹಾಯಕ ಮಹಾಪ್ರಬಂಧಕರು

ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ
ಸಿ.ಟಿ.ಎಸ್.ನಂ.4125/1ಬಿ, ಗಣೇಶಪೂರ ರಸ್ತೆ, ಲಕ್ಷ್ಮೀಟೆಕ, ಬೆಳಗಾವಿ-590009 (ಕರ್ನಾಟಕ)
ಕಚೇರಿ: 0831-2472482, ಫ್ಯಾಕ್ಸ: 0831-2472464
ಇಮೇಲ್ ವಿಳಾಸ: snsibgm@yahoo.com
ಟೆಂಡರ್ ಪ್ರಕಟಣೆ
ವಿಷಯ : ಸಂಸ್ಥೆಯಲ್ಲಿ ಜೈವಿಕ ಪೀಡೆ ಮತ್ತು ಜೈವಿಕ ಗೊಬ್ಬರ ಉತ್ಪಾದನೆಗೆ ಟೆಂಡರ ಸಂಖ್ಯೆ SNSI/2024-25/SE0005 ದಿನಾಂಕ 15.10.2024 ರಂದು ಪ್ರಕಟಿಸಲಾಗಿದೆ.
1. ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿಯಲ್ಲಿ ಜೈವಿಕ ಪೀಡೆ ಮತ್ತು ಜೈವಿಕ ಗೊಬ್ಬರ ಉತ್ಪಾದನೆಗೆ ಇ-ಟೆಂಡರ್ ಮುಖಾಂತರ ದರಪಟ್ಟಿಗಳನ್ನು ಕರೆಯಲಾಗಿದೆ.
2 ಜೈವಿಕ ಪೀಡೆ ಮತ್ತು ಜೈವಿಕ ಗೊಬ್ಬರ ಉತ್ಪಾದನೆಗೆ ಮಾಹಿತಿಯನ್ನು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲಿನ ಅಂತರ್ಜಾಲ https://kppp.karnataka.gov.in ದ ಟೆಂಡರ ಸಂಖ್ಯೆ SNSI/2024-25/SE0005 ರಲ್ಲಿ ವೀಕ್ಷಿಸಬಹುದಾಗಿದೆ.
3.ಇ-ಟೆಂಡರ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 23.10.2024 ರಂದು 17.00 ಗಂಟೆಯವರೆಗೆ ಇರುತ್ತದೆ.
Date:15.10.2024 ಸಹಿ/- ನಿರ್ದೇಶಕರು

ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್:080-29550091, 080-29500191
ಇ-ಮೇಲ್:shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/13/2024-25 ದಿನಾಂಕ: 16/10/2024
ಪತ್ರಿಕಾ ಪ್ರಕಟಣೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಅಕ್ಕಿಯನ್ನು ದಿನಾಂಕ: 25-10-2024 ರಂದು ಶುಕ್ರವಾರ ಬೆಳಿಗ್ಗೆ 11.00 ಘಂಟೆಗೆ ದೇವಾಲಯದ ಅನ್ನದಾಸೋಹ ಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಅಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.
ಸಹಿ/- ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಎಸ್.ಎಸ್.ಘಾಟಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059 ಫೋನ್ : 080-28484515/080-28484518
ಅಧಿಸೂಚನೆ ಸಂಖ್ಯೆ: DPS/PURC/TDRC/1/2024-PUR/Stationery Dated: 15/10/2024
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮುಖಾಂತರ)
ಲೇಖನ ಸಾಮಗ್ರಿಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.92.00 ಲಕ್ಷಗಳಾಗಿರುತ್ತದೆ ಹಾಗೂ ಇ.ಎಂ.ಡಿ. ರೂ.4.60 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 04-11-2024, 17.30 ಗಂಟೆಗಳು. ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ನಿರ್ದೇಶಕರು (ಪ್ರ)
ವಾ.ಸಾ.ಸಂ.ಇ/ವಾಪ್ರ/2575/ಆಕಾರ್/2024-25

ಜಿಲ್ಲಾ ಪಂಚಾಯತ್ ಕಾರ್ಯಾಲಯ ಶಿವಮೊಗ್ಗ
ಅಂಚೆ ಪೆಟ್ಟಿಗೆ ಸಂಖ್ಯೆ : 127, ಕುವೆಂಪು ರಸ್ತೆ, ಶಿವಮೊಗ್ಗ-577201
ಸಂ:ಜಿಪಂಶಿ/ಆಡಳಿತ(6)/ವಿವ-/2024-25 ದಿನಾಂಕ : 08.10.2024
E-PROCUREMENT TENDER NOTIFICATION
ಶಿವಮೊಗ್ಗ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಅಭಿವೃದ್ಧಿಪಡಿಸಲು ಅವಶ್ಯವಿರುವ ಗಣಕಯಂತ್ರ ಮತ್ತು ಯು.ಪಿ.ಎಸ್ ಅನ್ನು ಸರಬರಾಜು ಮಾಡಲು ಆಸಕ್ತಿಯುಳ್ಳ ಅರ್ಹ ಸಂಸ್ಥೆಗಳಿಂದ E-Portal ನಲ್ಲಿ ಇ-ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಸಲ್ಲಿಸಲು ದಿನಾಂಕ : 08/10/2024 ಪ್ರಾರಂಭ ದಿನಾಂಕವಾಗಿರುತ್ತದೆ ಹಾಗೂ ದಿನಾಂಕ: 23/10/2024 ರ ಸಂಜೆ 4.00 ಗಂಟೆ ಕಡೆಯ ದಿನವಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್ ದಾರರು Website: www.kppp.karnataka.gov.in ನಲ್ಲಿ ಅಪ್ ಲೋಡ್ ಮಾಡುವುದು ಹಾಗೂ ಸದರಿ ವೆಬ್ ಸೈಟ್‌ನಲ್ಲಿ ಟೆಂಡರ್ ದಾಸ್ತಾವೇಜು ಮತ್ತು ಮಾಹಿತಿಗಳು ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08182-267242 ರಲ್ಲಿ ಸಂಪರ್ಕಿಸುವುದ
ಸಹಿ/- ಉಪಕಾರ್ಯದರ್ಶಿ (ಆಡಳಿತ)
ಜಿಲ್ಲಾ ಪಂಚಾಯತ್ ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.61-10
ಝೇಂಕಾರ್/2024-25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು - 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/09/2024-25 ದಿನಾಂಕ: 16-10-2024
ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ
2024-25 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 24-10-2024 ರಂದು ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2582/ಅಡ್ವರ್ಟೋರ್/2024-25

ಸುಭಾಷಿತ

ಎದುರಲ್ಲಿ ಹೊಗಳಿ ಬೆನ್ನಲ್ಲಿ ಇರಿಯುವಂಥ ಮಿತ್ರರನ್ನು ಬಿಟ್ಟುಬಿಡಬೇಕು.

-ಚಾಣಕ್ಯ

ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆಗೆ ಅನುಮತಿ ವಿಳಂಬ ಸಮರ್ಥನೀಯವಲ್ಲ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಅಂಗಸಂಸ್ಥೆಗಳ ಅಧಿಕಾರಿಗಳು, ನೌಕರರು ಹಾಗೂ ರಾಜ್ಯದಲ್ಲಿನ ಚುನಾಯಿತ ಪ್ರತಿನಿಧಿಗಳ ವಿರುದ್ಧದ ಭ್ರಷ್ಟಾಚಾರದ ಆರೋಪಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಲೋಕಾಯುಕ್ತದ ಪೊಲೀಸ್ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಅಧಿಕಾರಿಗಳು, ನೌಕರರು ಹಾಗೂ ಚುನಾಯಿತ ಪ್ರತಿನಿಧಿಗಳು ಘೋಷಿತ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವುದು, ಲಂಚಕ್ಕೆ ಬೇಡಿಕೆ, ಲಂಚ ಪಡೆಯುವುದು, ಅಧಿಕಾರ ದುರ್ಬಳಕೆಯಂತಹ ಆರೋಪಗಳ ಕುರಿತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವ ಅಧಿಕಾರವನ್ನು ಈ ತನಿಖಾ ಸಂಸ್ಥೆ ಹೊಂದಿದೆ. ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸಿದರೂ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ಅಭಿಯೋಜನಾ ಮಂಜೂರಾತಿ ಪಡೆಯುವುದು ಕಡ್ಡಾಯ. ಆರೋಪಪಟ್ಟಿ ಸಲ್ಲಿಸಿ, ವಿಚಾರಣೆ ಆರಂಭಿಸಲು ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡದಿದ್ದರೆ ತನಿಖಾ ಸಂಸ್ಥೆ ನಡೆಸಿದ ತನಿಖೆಯು ನಿಷ್ಫಲವಾಗುತ್ತದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರವು 2023ರ ಮೇ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡ ನಂತರ ಈವರೆಗೆ ಲೋಕಾಯುಕ್ತ ಪೊಲೀಸರು ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಸಕ್ಷಮ ಪ್ರಾಧಿಕಾರಗಳಿಗೆ 525 ಪ್ರಸ್ತಾವಗಳನ್ನು ಸಲ್ಲಿಸಿದ್ದರು. ಈ ಪೈಕಿ 329 ಪ್ರಸ್ತಾವಗಳಿಗೆ ಸಕ್ಷಮ ಪ್ರಾಧಿಕಾರಗಳು ಒಪ್ಪಿಗೆ ನೀಡಿವೆ. ಆರು ಪ್ರಸ್ತಾವಗಳನ್ನು ತಿರಸ್ಕರಿಸಲಾಗಿದೆ. 190 ಪ್ರಸ್ತಾವಗಳು ದೀರ್ಘಕಾಲದಿಂದಲೂ ಸಕ್ಷಮ ಪ್ರಾಧಿಕಾರಗಳ ಬಳಿ ಉಳಿದಿವೆ. ಗಣಿ ಗುತ್ತಿಗೆ ಮಂಜೂರಾತಿಯಲ್ಲಿ ಕಾನೂನು ಉಲ್ಲಂಘನೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಅಕ್ರಮ ಗಣಿಗಾರಿಕೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಶಾಸಕ ಜಿ. ಜನಾರ್ದನ ರೆಡ್ಡಿ ಸೇರಿದಂತೆ ಕೆಲವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವಗಳು ರಾಜ್ಯಪಾಲರ ಹಂತದಲ್ಲೇ ತೀರ್ಮಾನ ಆಗಬೇಕಿದೆ.

ಭ್ರಷ್ಟಾಚಾರದ ಆರೋಪಿಗಳ ರಕ್ಷಣೆಗೆ ನಿಲ್ಲುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ದಿಟ್ಟ ಹೆಜ್ಜೆಯನ್ನು ರಾಜ್ಯ ಸರ್ಕಾರ ಇಡಬೇಕು

ಒಂದೂವರೆ ವರ್ಷದಲ್ಲಿ ಲೋಕಾಯುಕ್ತ ಪೊಲೀಸರು ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವಗಳಲ್ಲಿ ಶೇಕಡ 36.19ರಷ್ಟು ಬಾಕಿ ಉಳಿದಿವೆ ಎಂಬ ಮಾಹಿತಿಯು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಲೋಕಾಯುಕ್ತದ ರಿಜಿಸ್ಟ್ರಾರ್ ಬರೆದಿರುವ ಪತ್ರದಿಂದ ಬಹಿರಂಗವಾಗಿದೆ. ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ತನಿಖೆ ಮತ್ತು ವಿಚಾರಣೆಯಲ್ಲಿನ ವಿಳಂಬವು ಆರೋಪಿಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತದೆ. ತ್ವರಿತವಾಗಿ ತನಿಖೆ ನಡೆಸಿ ಆರೋಪಪಟ್ಟಿಯನ್ನು ಸಲ್ಲಿಸಿ, ಕಾಲಮಿತಿಯಲ್ಲಿ ವಿಚಾರಣೆ ಪೂರ್ಣಗೊಳಿಸಿದರೆ ಮಾತ್ರ ಆರೋಪಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸುವ ಅವಕಾಶ ಹೆಚ್ಚಾಗಿರುತ್ತದೆ. ಈ ಕಾರಣಕ್ಕಾಗಿಯೇ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್-19ಕ್ಕೆ 2018ರಲ್ಲಿ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರವು ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖಾಧಿಕಾರಿಯು ಪ್ರಸ್ತಾವ ಸಲ್ಲಿಸಿದ ದಿನದಿಂದ ಮೂರು ತಿಂಗಳೊಳಗೆ ಸಕ್ಷಮ ಪ್ರಾಧಿಕಾರವು ತೀರ್ಮಾನ ಕೈಗೊಳ್ಳುವುದನ್ನು ಕಡ್ಡಾಯಗೊಳಿಸಿದೆ. ಈ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ಕೂಡ 2022ರ ತನ್ನ ತೀರ್ಪಿನಲ್ಲಿ ಎತ್ತಿಹಿಡಿದಿದೆ. ಆದರೂ, ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ತನಿಖಾ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವಗಳನ್ನು ದೀರ್ಘಕಾಲ ಬಾಕಿ ಇರಿಸಿಕೊಂಡು ಸತಾಯಿಸುವುದು ನಿರಂತರವಾಗಿ ನಡೆಯುತ್ತಲೇ ಇದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಯಾವುದೇ ಪಕ್ಷ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದರೂ ಈ ವಿಚಾರದಲ್ಲಿ ಭಿನ್ನವಾಗಿಯೇನೂ ವರ್ತಿಸಿಲ್ಲ.

ಚುನಾವಣೆ ಬಂದಾಗಲೆಲ್ಲ ಸಾರ್ವಜನಿಕ ವೇದಿಕೆಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಅಬ್ಬರಿಸುವ ರಾಜಕೀಯ ಪಕ್ಷಗಳ ನಾಯಕರು, ಅಧಿಕಾರ ಸಿಕ್ಕಾಗ ಆರೋಪಿಗಳ ಪ್ರಭಾವಕ್ಕೆ ಮಣಿದುಬಿಡುತ್ತಾರೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 329 ಪ್ರಕರಣಗಳಲ್ಲಿ ಒಪ್ಪಿಗೆ ನೀಡಿದ್ದರೂ ಶೇ 36.19ರಷ್ಟು ಪ್ರಸ್ತಾವಗಳನ್ನು ಬಾಕಿ ಉಳಿಸಿಕೊಂಡಿರುವುದು ಒಪ್ಪತಕ್ಕ ನಡೆಯಲ್ಲ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾದವರನ್ನು ಕಾನೂನು ಕ್ರಮದ ವ್ಯಾಪ್ತಿಗೆ ತಂದಾಗ ಮಾತ್ರ ಈ ಪಿಡುಗಿಗೆ ಕಡಿವಾಣ ಹಾಕಲು ಸಾಧ್ಯ. ಆದರೆ, ಆರೋಪಪಟ್ಟಿ ಸಲ್ಲಿಸಲು ಕಾಲಮಿತಿಯಲ್ಲಿ ಅನುಮತಿ ನೀಡದೇ ಇದ್ದರೆ ತನಿಖಾ ಸಂಸ್ಥೆಗಳಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಆರೋಪಪಟ್ಟಿ ಸಲ್ಲಿಕೆಗೆ ಅನುಮತಿ ಕೋರುವ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮಾಡುವುದು ಕೂಡ ಭ್ರಷ್ಟರನ್ನು ರಕ್ಷಿಸುವ ಕೆಲಸದಂತೆಯೇ ಕಾಣುತ್ತದೆ. ಈ ವಿಷಯದಲ್ಲಿ ಸಕ್ಷಮ ಪ್ರಾಧಿಕಾರಗಳನ್ನೇ ಹೊಣೆ ಮಾಡಬೇಕಿದೆ. ವಿಳಂಬ ಧೋರಣೆ ಅನುಸರಿಸುವ ಮೂಲಕ ಭ್ರಷ್ಟಾಚಾರದ ಆರೋಪಿಗಳ ರಕ್ಷಣೆಗೆ ನಿಲ್ಲುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ದಿಟ್ಟ ಹೆಜ್ಜೆಯನ್ನು ರಾಜ್ಯ ಸರ್ಕಾರ ಇಡಬೇಕು. ಭ್ರಷ್ಟಾಚಾರ ಪ್ರಕರಣಗಳ ಆರೋಪಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸುವ ವಿಷಯದಲ್ಲಿ ಕಿಂಚಿತ್ತೂ ರಾಜಿ ಇಲ್ಲ ಎಂಬ ನಿಲುವು ರಾಜ್ಯ ಸರ್ಕಾರದ್ದಾಗಿರಬೇಕು.

ದಿನದ ಟ್ವೀಟ್

ಕೆರೆ ಒತ್ತುವರಿ ತೆರವುಗೊಳಿಸಿ



ನೀರು ಯಾವಾಗಲೂ ತನ್ನ ದಾರಿಯನ್ನು ಕಂಡುಕೊಳ್ಳುತ್ತದೆ. ಕೆರೆಯ ಜಾಗದಲ್ಲಿ ನೀವು ಎಷ್ಟೇ ದೊಡ್ಡ ಕಟ್ಟಡ ಕಟ್ಟಿದ್ದರೂ ನೀರು ಮತ್ತೆ ಅಲ್ಲಿಗೆ ಹರಿಯದೇ ಇರುವುದಿಲ್ಲ.

ಶ್ರೀನಿವಾಸ್ ದೀಪು, ಫಿಟ್‌ನೆಸ್ ಕೋಚ್

ಕಿಡಿನುಡಿ

ಕೊಯಮತ್ತೂರು 'ದಕ್ಷಿಣ ಭಾರತದ ಮ್ಯಾಂಚೆಸ್ಟರ್' ಎಂದು ಕರೆಸಿಕೊಳ್ಳುವ ಬಗ್ಗೆ ಚೆನ್ನೈ ಜನ ಯಾವಾಗಲೂ ಅಸೂಯೆಪಡುತ್ತಾರೆ. ಆದರೆ ಈಗ ಡಿಎಂಕೆ ನೇತೃತ್ವದ ಸರ್ಕಾರವು ಚೆನ್ನೈ ಜನರ ಮನದ ಮಾತನ್ನು ಬಹು ಎಚ್ಚರದಿಂದ ಆಲಿಸಿದೆ ಮತ್ತು ಚೆನ್ನೈ ನಗರವನ್ನು 'ಭಾರತದ ವೆನಿಸ್' ಆಗಿ ಪರಿವರ್ತಿಸಿದೆ.

(ಚೆನ್ನೈನಲ್ಲಿನ ವಿಶ್ವವಿದ್ಯಾಲಯವೊಂದರ ಆವರಣ ಮಳೆನೀರಿನಿಂದ ಸಂಪೂರ್ಣ ಜಲಾವೃತಗೊಂಡಿದ್ದಕ್ಕೆ ಪ್ರತಿಕ್ರಿಯೆ)

ಪ್ರಭು ನಟರಾಜನ್

25 ವರ್ಷಗಳ ಹಿಂದೆ

ಭಾನುವಾರ, 17-10-1999

• ಭ್ರಷ್ಟಾಚಾರದ ವಿರುದ್ಧ ಸಮರ ಪ್ರಧಾನಿ ವಾಜಪೇಯಿ ಪಣ

ನವದೆಹಲಿ, ಅ. 16 (ಪಿಟಿಐ, ಯುಎನ್‌ಐ)– ಭಯೋತ್ಪಾದನೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ, ಚುನಾವಣಾ ಪದ್ಧತಿಯಲ್ಲಿ ಸಮಗ್ರ ಬದಲಾವಣೆ, ಆರ್ಥಿಕ ವಲಯದ ಕಾನೂನುಗಳಿಗೆ ತಿದ್ದುಪಡಿ ಮತ್ತು ತೆರಿಗೆ ನೀತಿಯಲ್ಲಿ ಬದಲಾವಣೆಗಳನ್ನು ಮಾಡಿ ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವುದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ದೇಶದ ಜನತೆ ಮುಂದೆ ಪಣ ತೊಟ್ಟಿದ್ದಾರೆ.

ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಇಂದು ರಾತ್ರಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು 'ಹೆಮ್ಮೆಯ ಮತ್ತು ಶ್ರೀಮಂತ ಭಾರತವನ್ನು ನಿರ್ಮಾಣ ಮಾಡಲು ಇಂದಿನಿಂದಲೇ ನಮ್ಮ ಸರ್ಕಾರ ಬದ್ಧವಾಗಿದೆ. ಉತ್ತಮ ಸರ್ಕಾರವನ್ನು ನೀಡುವ ನಮ್ಮ ಉದ್ದೇಶಕ್ಕೆ ಯಾವುದೇ ಅಡೆತಡೆಗಳಿಲ್ಲ' ಎಂದು ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 17-10-1974

• 'ದಂಡೋಪಾಯ'- ಸಚಿವರಿಗೆ ಸಮಯಪ್ರಜ್ಞೆ

ಬೆಂಗಳೂರು, ಅ. 16– ಸಚಿವ ಸಂಪುಟದ ಸಭೆಗೆ ಸಚಿವರು ತಡವಾಗಿ ಬಂದರೆ, ನಿಮಿಷಕ್ಕೆ ಒಂದು ರೂಪಾಯಿ ದಂಡ. ಈಚೆಗೆ ಒಂದು ಬಾರಿ ಮುಖ್ಯಮಂತ್ರಿ ದೇವರಾಜ ಅರಸು ಅವರೇ 25 ರೂಪಾಯಿ ದಂಡ ಕೊಟ್ಟರು.

ಎರಡು- ಮೂರು ತಿಂಗಳುಗಳಿಂದ ಜಾರಿಯಲ್ಲಿರುವ ಈ 'ದಂಡೋಪಾಯ' ನಿರೀಕ್ಷಿತ ಫಲ ತಂದಿದೆ. ಸಚಿವರೆಲ್ಲರೂ ಬಹುತೇಕ ಮಟ್ಟಿಗೆ ಸಮಯಕ್ಕೆ ಸರಿಯಾಗಿ ಬರುತ್ತಿದ್ದಾರೆ. ಪಟ್ಟಿಯಲ್ಲಿರುವ ವಿಷಯಗಳೆಲ್ಲ ಅಂದೇ ತೀರ್ಮಾನವಾಗುತ್ತಿವೆ.

ಈ 'ದಂಡನಿಧಿ'ಯ ಖಜಾಂಚಿ ಕಂದಾಯ ಮಂತ್ರಿ ಹುಚ್ಚಮಾಸ್ತಿಗೌಡರು. ಇದುವರೆಗೆ ಎಷ್ಟು ಸಂಗ್ರಹವಾಗಿದೆ ಎಂಬುದರ ವಿವರ ತಕ್ಷಣ ದೊರೆತಿಲ್ಲ. ಆ ನಿಧಿಯ ವಿನಿಯೋಗ ಹೇಗಾಗಬೇಕು ಎಂಬುದು ನಿರ್ಧಾರವಾಗಿಲ್ಲ.

ಆದರೆ, ಅಧಿಕೃತ ಕಾರ್ಯಕ್ರಮಗಳಿಂದಾಗಿ ಸಚಿವರು ತಡವಾಗಿ ಬಂದರೆ, ಈ ದಂಡದ ಶಿಕ್ಷೆ ಇಲ್ಲ. ಇಂದು ರಾಜಭವನಕ್ಕೆ ಹೋಗಿ ತುಸು ತಡವಾಗಿ ಬಂದ ಮುಖ್ಯಮಂತ್ರಿಯವರಿಗೆ ದಂಡ ಅನ್ವಯವಾಗಲಿಲ್ಲ.

• ಕಾಳಿ ಇನ್ನು ಕೇವಲ ರಾಜ್ಯ ಯೋಜನೆ: ಪಂತ್

ಬೆಂಗಳೂರು, ಅ. 16– ಪೂರ್ತಿ ಕೇಂದ್ರೀಯ ನೆರವಿನ, 3 ವರ್ಷಗಳ ಆ ಭರವಸೆಗಳೆಲ್ಲ ಸೋರಿಹೋಗಿ, ಇದೀಗ 280 ಕೋಟಿ ರೂಪಾಯಿಗಳ ಕಾಳಿ ಜಲ ವಿದ್ಯುತ್ ಯೋಜನೆಯು ಕರ್ನಾಟಕವೇ ನಿಭಾಯಿಸಿಕೊಳ್ಳಬೇಕಾದ ಮೇರು ಭಾರವಾಗಿ ಪರಿಣಮಿಸಿದೆ.

'ಇದು ಕೇಂದ್ರ ಯೋಜನೆಯಲ್ಲ; ರಾಜ್ಯದ ಯೋಜನೆ. ಕೇಂದ್ರದಿಂದ ಆಗುವ ಸಹಾಯದ ಸಹಾನುಭೂತಿಯಿದ್ದೇ ಇದೆ. ಆದರೆ ಹೆಚ್ಚಿನ ಖರ್ಚನ್ನು ರಾಜ್ಯ ಸರ್ಕಾರವೇ ವಹಿಸಬೇಕಾಗುತ್ತದೆ' ಎಂದು ಕೇಂದ್ರ ಶಕ್ತಿ ಉತ್ಪಾದನಾ ಮಂತ್ರಿ ಕೃಷ್ಣ ಚಂದ್ರ ಪಂತ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ರಾಜಧಾನಿಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅಪಸವ್ಯಗಳು ಮೇರೆಮೀರಿವೆ

ಅಭಿವೃದ್ಧಿ, ಅನಾಹುತ, ಅರಿವು

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ನಂದಿಬೆಟ್ಟದ ಆಸುಪಾಸಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ಹೇಗೆ ಆ ಬೆಟ್ಟಕ್ಕೆ ಅಪಾಯ ಒದಗಲಿದೆ ಎಂಬುದರ ಕುರಿತು ಸಮಾನಮನಸ್ಕರು ಮತ್ತು ಪರಿಸರದ ಬಗ್ಗೆ ಕಾಳಜಿಯುಳ್ಳ ವ್ಯಕ್ತಿಗಳ ಸಭೆಯೊಂದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ನಂದಿಬೆಟ್ಟವೂ ಸೇರಿದಂತೆ ಪರಿಸರವನ್ನು ಉಳಿಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ದಾಟಿಸುವ ದಿಸೆಯಲ್ಲಿ ನಾವೇನು ಮಾಡಬೇಕು, ಈಗ ಆಗುತ್ತಿರುವ ವಿಧ್ವಂಸಕ ಕೃತ್ಯಗಳಿಗೆ ಕಡಿವಾಣ ಹಾಕಬೇಕಾಗಿರುವುದು ಎಷ್ಟು ಅನಿವಾರ್ಯ, ಅದಕ್ಕಿರುವ ಮಾರ್ಗೋಪಾಯಗಳೇನು ಎಂಬುದರ ಬಗ್ಗೆ ಈ ಸಂದರ್ಭದಲ್ಲಿ ವಿಸ್ತೃತ ಹಾಗೂ ಆರೋಗ್ಯಪೂರ್ಣ ಚರ್ಚೆ ನಡೆಯಿತು. ನಂದಿಬೆಟ್ಟವನ್ನು ಭೌಗೋಳಿಕ, ಜೈವಿಕ ಮತ್ತು ಜಲಸಂಪತ್ತಿನ ಮೂಲತಾಣವೆಂದು ಪರಿಗಣಿಸಿ, ಅಲ್ಲಿ ಯಾವುದೇ ಪರಿಸರ ವಿರೋಧಿ ಕೃತ್ಯಗಳಿಗೆ ಅವಕಾಶ ಕೊಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಲಾಯಿತು.

ಬೆಂಗಳೂರಿನಲ್ಲಿ ಗಗನಚುಂಬಿ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯವಾದ ಮರಳು ಇಂದು ಎಲ್ಲೂ ಸಿಗುತ್ತಿಲ್ಲ. ಹೀಗಾಗಿ, ನಂದಿಬೆಟ್ಟದ ತಪ್ಪಲಿನಲ್ಲಿರುವ ಬಂಡೆಗಳನ್ನು ಪುಡಿಗಟ್ಟಿ, ಎಂ.ಸ್ಯಾಂಡ್ ತಯಾರಿಸಿ, ಅದನ್ನು ಬೆಂಗಳೂರಿಗೆ ಸಾಗಿಸಿ, ಅಲ್ಲಿನ ನಿರ್ಮಿತಿಗಳಿಗೆ ಬಳಸುವ ದೊಡ್ಡ ದಂಧೆ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಸ್ಥಾಪಿತ ಹಿತಾಸಕ್ತಿಗಳು, ಲಾಭಬಡುಕರು ಇದರ ಹಿಂದೆ ಇದ್ದಾರೆ. ಪಾರಂಪರಿಕ ಇತಿಹಾಸವುಳ್ಳ ಬೆಟ್ಟದ ಆಸುಪಾಸಿನಲ್ಲಿ ಈ ರೀತಿ ಡೈನಮೈಟ್ ಇಟ್ಟು ಧ್ವಂಸ ಮಾಡಿ, ಅಲ್ಲಿನ ಸಂಪನ್ಮೂಲವನ್ನು ಬಳಸಿಕೊಂಡು ಬೆಂಗಳೂರನ್ನು 'ಬ್ರ್ಯಾಂಡ್ ಬೆಂಗಳೂರು', 'ಸ್ಮಾರ್ಟ್ ಸಿಟಿ' ಮಾಡುವುದೆಂದರೆ ಅದು ಖಂಡಿತವಾಗಿ ಅಭಿವೃದ್ಧಿ ಎನಿಸಿಕೊಳ್ಳುವುದಿಲ್ಲ. ಆಗ ಅದು ಬೆಂಗಳೂರಿಗರ ಪಾಲಿಗೆ ಶಾಪವಾಗುತ್ತದೆಯೇ ವಿನಾ ವರದಾನ ಆಗುವುದಿಲ್ಲ.

ನಂದಿಬೆಟ್ಟ ಒಂದು ಗಿರಿಧಾಮ. ಅಲ್ಲಿ ಅರ್ಕಾವತಿ, ಕುಮುದ್ವತಿ, ಪಾಪಾಗ್ನಿ, ಪಾಲಾರ್, ಪೆನ್ನಾರ್ ನದಿಗಳ ಉಗಮವಾಗಿ, ಒಂದು ಕಾಲದಲ್ಲಿ ಅವೆಲ್ಲವೂ ಸಮೃದ್ಧವಾಗಿ ಹರಿದು, ಹಲವು ಉಪನದಿಗಳನ್ನು ಕೂಡಿಕೊಂಡು ಬಂಗಾಳಕೊಲ್ಲಿಯನ್ನು ಸೇರುತ್ತಿದ್ದವು ಎಂದರೆ ಇಂದಿನ ಪೀಳಿಗೆಯವರು ನಂಬಲಾರರು. ನಂದಿಬೆಟ್ಟ ಸೇರಿದಂತೆ ಪರಿಸರದ ಸಮಸ್ತ ಪಳೆಯುಳಿಕೆಗಳು ನಮ್ಮ ಬದುಕಿನ ಅವಿಭಾಜ್ಯ ಅಂಗ. ಅವುಗಳನ್ನು ತುಂಡರಿಸುವ ಮೂಲಕ ನಾವೇ ವಿಪತ್ತನ್ನು ಆಹ್ವಾನಿಸುತ್ತಿದ್ದೇವೆ. ನಂದಿಬೆಟ್ಟದ ತಪ್ಪಲಿನಲ್ಲಿ ಅದೆಷ್ಟೋ ರೆಸಾರ್ಟುಗಳು, ಹೋಮ್‌ಸ್ಟೇಗಳು ನಿರ್ಮಾಣವಾಗಿವೆ, ರಸ್ತೆ, ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ಭಂಜನೆ ದಿನನಿತ್ಯ ಆಗುತ್ತಲೇ ಇದೆ. ಇದು ಹೀಗೇ ಮುಂದುವರಿದಲ್ಲಿ, ವಯನಾಡಿನಲ್ಲಿ ಆದಂತಹ ದುರಂತ ಇಲ್ಲೂ ಸಂಭವಿಸಬಹುದು.

ಮೂರು ದಶಕಗಳಿಂದ ಬೆಂಗಳೂರಿನಲ್ಲಿ ಅಭಿವೃದ್ಧಿ ಎಂಬ ವಿಷಯ ಬಂದಾಗಲೆಲ್ಲ ರಿಯಲ್ ಎಸ್ಟೇಟ್ ಉದ್ದಿಮೆ ಮುಂಚೂಣಿಯಲ್ಲಿ ನಿಲ್ಲುತ್ತದೆ. ಅಂದರೆ ರಸ್ತೆ, ಕಟ್ಟಡ, ಸೇತುವೆಯಂತಹ ಮೂಲ ಸೌಕರ್ಯಗಳ ನಿರ್ಮಾಣ. ಅದಕ್ಕೆ ಬೇಕಾದ ಕಚ್ಚಾವಸ್ತುಗಳನ್ನು ನಂದಿಬೆಟ್ಟ, ರಾಮನಗರ ಬೆಟ್ಟ, ಕನಕಪುರ ಬೆಟ್ಟದ ಹೃದಯಭಾಗವನ್ನು ಛಿದ್ರ ಮಾಡಿ ತರಲಾಗುತ್ತದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷಗಳವರೂ ಪರಿಸರವನ್ನು ಹಾಳುಗೆಡಹುವ ಕಾರ್ಯದಲ್ಲಿ ಸಮಾನ ಮನಃಸ್ಥಿತಿಯಿಂದ ಕೈಜೋಡಿಸಿದ್ದಾರೆ. ಪರಿಸರದ ಬಗ್ಗೆ ಇನ್ನಿಲ್ಲದ ಅನಾದರ, ಉಪೇಕ್ಷೆ ಆಡಳಿತ ನಡೆಸುವವರಲ್ಲಿ ಇದೆ. ನಾನು ಕೂಡ ಅರಣ್ಯ ಮತ್ತು ಪರಿಸರ ಇಲಾಖೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ಕಾರಣ, ಇವೆಲ್ಲವೂ ನೇರಾನೇರ ನನ್ನ ಅನುಭವಕ್ಕೆ ಬಂದಿವೆ. ಪರಿಸರಸಂಬಂಧಿತ ಯಾವುದೇ ಯೋಜನೆ ಅನುಷ್ಠಾನಗೊಳಿಸುವಲ್ಲಿ ಸರ್ಕಾರಕ್ಕಿರುವ ಕಡು ನಿರ್ಲಕ್ಷ್ಯವನ್ನು ಕಂಡಿದ್ದೇನೆ, ನೊಂದಿದ್ದೇನೆ.

ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕಾಮಗಾರಿಗಳಲ್ಲಿ ಸರ್ಕಾರದ ಪಟ್ಟಭದ್ರ ಹಿತಾಸಕ್ತಿಗಳು, ರಾಜಕಾರಣಿಗಳು, ಕಂಪನಿಗಳ ಪಾತ್ರ ಇರುತ್ತದೆ. ಉಸಿರಾಡಲು ಯೋಗ್ಯವಾದ ಪ್ರಾಣವಾಯು, ಕುಡಿಯಲು ಯೋಗ್ಯವಾದ ಶುದ್ಧ ನೀರು ಎಲ್ಲೂ ಇಲ್ಲವಾಗಿದೆ. ಎಲ್ಲವೂ ಮಲಿನ ಮತ್ತು ಕಲುಷಿತ. ಮಣ್ಣು ಕೂಡ ಇದರಿಂದ ಹೊರತಾಗಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಬರುವ ಕಳೆನಾಶಕಗಳಿಂದ ಮಣ್ಣು ಮತ್ತು ಸೂಕ್ಷ್ಮಜೀವಜಾಲ ನಶಿಸಿಹೋಗಿವೆ. ಪರಾಗಸ್ಪರ್ಶದ ಕೆಲಸ ಮಾಡುವ ಜೇನ್ನೊಣಗಳು ಕೂಡ ಅಳಿವಿನ ಅಂಚಿಗೆ ಬರುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಮಾರಾಟ ಮಾಡುವ 'ರೌಂಡಪ್' ಎಂಬ ಕಳೆನಾಶಕ ವಿಶ್ವದ ಹಲವೆಡೆ ನಿಷೇಧಕ್ಕೆ ಒಳಗಾಗಿದೆ. ಅದೊಂದು ಕಾರ್ಕೋಟಕ ವಿಷ. ಅದರಿಂದ ಆಗುವ ಹಾನಿ ಅಷ್ಟು ಘೋರವಾದದ್ದು. ಹೀಗಾಗಿ ರೋಗರುಜಿನಗಳು ಹೆಚ್ಚಿವೆ. ಬೆಂಗಳೂರಿನಲ್ಲಿ ನಾವು ಸೇವಿಸುತ್ತಿರುವ ಗಾಳಿಯಲ್ಲಿರುವ ವಿಷಕಾರಕಗಳ ಪ್ರಮಾಣವನ್ನು ಅಂದಾಜು ಮಾಡಲು ವಿಜ್ಞಾನಿಗಳ ವಿಶ್ಲೇಷಣೆ ಬೇಕಿಲ್ಲ. ಎಲ್ಲವೂ ನಮ್ಮ ಅನುಭವಕ್ಕೇ ಬರುತ್ತಿವೆ. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಣ್ಮುಚ್ಚಿ ಕುಳಿತಿದೆ.

ಇದೀಗ ಬೆಂಗಳೂರಿನಲ್ಲಿ ಮೆಟ್ರೊ ಕಾಮಗಾರಿ ಭರದಿಂದ ಸಾಗಿದೆ. ನೂರಾರು ಕಿ.ಮೀ. ದೂರದ ಸುರಂಗ ಮಾರ್ಗಗಳನ್ನು ಕೊರೆಯಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಇವೆಲ್ಲವೂ ಮುಂದುವರಿದರೆ ಪ್ರಳಯಕಾಲ ಸನ್ನಿಹಿತವಾಗಲಿದೆ ಎಂಬುದನ್ನು ನಾವು ನೆನಪಿಡಬೇಕು. ಅಭಿವೃದ್ಧಿಯು ಪ್ರಕೃತಿಗೆ ಪೂರಕವಾಗಿದ್ದರೆ ಎಲ್ಲವೂ ಸರಿ, ತೀರಾ ಅತಿಯಾದರೆ ಅದರ ಪರಿಣಾಮ ವಿನಾಶವೇ ವಿನಾ ಬೇರೇನೂ ಅಲ್ಲ. ವಿಶೇಷತಃ ಬೆಂಗಳೂರು ನಗರದ ಅಭಿವೃದ್ಧಿಯ ಹೊಣೆ ಹೊತ್ತ ಅಧಿಕಾರಸ್ಥರು ಇದನ್ನು ತಕ್ಷಣ ಗಮನಿಸಿ, ಆಗಬಹುದಾದ ಅನಾಹುತಗಳನ್ನು ತಪ್ಪಿಸಬೇಕು. ಹಿಮಾಲಯ, ಅರಾವಳಿ, ಸಹ್ಯಾದ್ರಿ, ನಂದಿಬೆಟ್ಟವೂ ಸೇರಿದಂತೆ ಪಶ್ಚಿಮ-ಪೂರ್ವಘಟ್ಟಗಳನ್ನು ಸುಸ್ಥಿತಿಯಲ್ಲಿ ಕಾಪಾಡುವ ಕೆಲಸವನ್ನು ಮಾಡದೇ ಇದ್ದರೆ ಮುಂಬರುವ ದಿನಗಳು ಕರಾಳವಾಗಲಿವೆ.

ದಶಕಗಳ ಹಿಂದೆ ಕೊಡಗಿನಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಟಿಂಬರ್ ಮಾಫಿಯಾವನ್ನು ಹತ್ತಿಕ್ಕಲು ನನ್ನ ನೇತೃತ್ವದ ಆಯೋಗವೊಂದನ್ನು ಸರ್ಕಾರ ನೇಮಿಸಿತ್ತು. ನಾನು ನನ್ನ ಸಹೋದ್ಯೋಗಿಗಳ ಜೊತೆ ಅಲ್ಲೆಲ್ಲ ಓಡಾಡಿ, ಆಗುತ್ತಿರುವ ಅನಾಹುತ, ಸರ್ಕಾರಕ್ಕೆ ಆಗುತ್ತಿರುವ ಮೋಸ ಎಲ್ಲವನ್ನೂ ಪತ್ತೆ ಹಚ್ಚಿ ಸಲ್ಲಿಸಿದ ವರದಿ ವಿಧಾನಸೌಧದ ಕಡತಗಳಲ್ಲಿ ಕಳೆದುಹೋಯಿತು. ಟಿಂಬರ್ ಮಾಫಿಯಾದ ಸ್ಥಾಪಿತ ಹಿತಾಸಕ್ತಿಗಳು ವರದಿಯಲ್ಲಿನ ಶಿಫಾರಸುಗಳನ್ನು ಜಾರಿ ಮಾಡದಂತೆ ಸಂಬಂಧಪಟ್ಟವರಿಗೆ ₹ 50 ಕೋಟಿಯ ರುಷುವತ್ತು ಕೊಟ್ಟು, ₹ 5,000 ಕೋಟಿ ಮೌಲ್ಯದ ಅರಣ್ಯ ನಾಶವನ್ನು ಬರೀ 45 ದಿನಗಳಲ್ಲಿ ಮಾಡಿದವು ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ. ನಿವೃತ್ತ ಅರಣ್ಯಾಧಿಕಾರಿ ಬಿ.ಕೆ.ಸಿಂಗ್ ತಮ್ಮ ಪುಸ್ತಕದಲ್ಲಿ ಇದನ್ನು ದಾಖಲಿಸಿದ್ದಾರೆ.

ಬೆಂಗಳೂರಿನಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅಪಸವ್ಯಗಳು ಮೇರೆಮೀರಿವೆ. ಭೂಮಿಯ ಬೆಲೆ ಗಗನಕ್ಕೇರಿದೆ. ಸಣ್ಣ ದುಡಿಮೆಯ ಕುಟುಂಬ ಸ್ವಂತದ ಸೂರನ್ನು ಕಟ್ಟಿಕೊಳ್ಳಲಾಗದ ಪರಿಸ್ಥಿತಿ ಇದೆ. ನೂರಾರು ಸ್ಟಾರ್ ಹೋಟೆಲ್‌ಗಳು ಬೆಂಗಳೂರಿನ ಸರಹದ್ದುಗಳಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿವೆ. ಅಲ್ಲಿನ ದರಗಳನ್ನು ಕಂಡು ಮಧ್ಯಮವರ್ಗದ ಮಂದಿ ಕೂಡ ಹುಬ್ಬೇರಿಸುವಂತಹ ಸ್ಥಿತಿ ಇದೆ. ಅಂದರೆ ಬೆಂಗಳೂರಿನಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವುದೆಲ್ಲವೂ ಸಿರಿವಂತರಿಗೆ ಎಂಬುದು ಗಮನಿಸಬೇಕಾದ ಸಂಗತಿ.

ಕುದುರೆಮುಖ ಮತ್ತು ಗಂಗಡಿಕಲ್ಲು ಪರ್ವತಶ್ರೇಣಿಯು ವಿಶೇಷ ಭೂಪ್ರದೇಶ. ಇಲ್ಲಿ ಸಿಗುವಷ್ಟು ಉತ್ಕೃಷ್ಟ ಕಬ್ಬಿಣದ ಅದಿರು ವಿಶ್ವದಲ್ಲಿ ಬೇರೆಲ್ಲೂ ಸಿಗುವುದಿಲ್ಲ. ಇಂತಹ ಬೆಟ್ಟಸಾಲುಗಳನ್ನು ಕೆಐಒಸಿಎಲ್ ಕಂಪನಿಗೆ ದಶಕಗಳ ಅವಧಿಗೆ ಗುತ್ತಿಗೆಗೆ ಕೊಟ್ಟು, ಗಣಿಗಾರಿಕೆಯಿಂದ ಆಗಿರುವ ಅಪಾರ ಪರಿಸರ ನಾಶಕ್ಕೆ ಯಾರು ಹೊಣೆ? ಇದೀಗ ಅದರ ಬೆನ್ನಲ್ಲೇ ಅದೇ ಕಂಪನಿಗೆ ಬಳ್ಳಾರಿಯ ಗುಡ್ಡಗಳನ್ನೂ ಅದಿರು ಬಗೆಯುವುದಕ್ಕೆ ಗುತ್ತಿಗೆ ಮೇರೆಗೆ ವಹಿಸಿಕೊಡಲು ಮುಂದಾಗಿರುವುದರ ಕುರಿತು ಚರ್ಚೆ ನಡೆಯುತ್ತಿದೆ. ಇದು ಸಮೃದ್ಧ ಪ್ರದೇಶವನ್ನು ಮರುಭೂಮಿಯಾಗಿಸುವ ಸಂಗತಿ. ಕೆಐಒಸಿಎಲ್‌ಗೆ ತಿಂಗಳಿಗೆ ₹ 27 ಕೋಟಿ ನಷ್ಟವಾಗುತ್ತಿರುವ, ಅಲ್ಲಿನ 300 ಕಾರ್ಮಿಕರು ವಜಾಗೊಳ್ಳಲಿರುವ ಸುದ್ದಿ ಇತ್ತೀಚೆಗೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಎಲ್ಲರೂ ಕಂಪನಿಯ ಹಿತಾಸಕ್ತಿ ಮತ್ತು ನಷ್ಟದ ಬಗ್ಗೆಯೇ ಕಾಳಜಿ ವಹಿಸುವವರಾಗಿದ್ದಾರೆ ವಿನಾ ಆ ಕಂಪನಿಯಿಂದ ಪರಿಸರಕ್ಕೆ ಆಗುತ್ತಿರುವ ಹಾನಿಯ ಬಗ್ಗೆ ಯಾರಿಗೂ ಕಳವಳವೇ ಇಲ್ಲವಾಗಿದೆ.

ಪರಿಸರ ನಾಶ ನರಹತ್ಯೆಗೆ ಸಮನಾದ ಅಪರಾಧ. ಪರಿಸರಸಂಬಂಧಿತ ಅನಾಹುತಗಳಿಗೆ ಕಡಿವಾಣ ಹಾಕದೇ ಇದ್ದಲ್ಲಿ, ನಮ್ಮ ಮತ್ತು ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ಕರಾಳವಾಗಲಿದೆ.

ಚುರುಮುರಿ

ರಾಜಕೀಯ ಅಂತ್ಯಾಕ್ಷರಿ!

• ತುರುವೇಕೆರೆ ಪ್ರಸಾದ್

'ಇವತ್ತು ಒಂದು ಹೊಸ ಆಟ ಆಡೋಣ' ಎಂದ ಗುದ್ಲಿಂಗ ಹರಟೆಕಟ್ಟೇಲಿ. 'ಅದ್ಯಾವ ಆಟ ಹೇಳು' ಎಂದ ಮಾಲಿಂಗ.

'ನಮ್ ನಾಯಕ್ರು ಒಬ್ರಿಗೊಬ್ರು ಅಂತ್ಯ ಹಾಡಕ್ಕೆ ಒಂಟವ್ರಲ್ಲ. ಆ ರಾಜಕೀಯ ಅಂತ್ಯಾಕ್ಷರಿ ಆಡೋಣ. ನಾನು ಕೈ ಹಗರಣವೊಂದರಿಂದ ಶುರು ಮಾಡ್ತೀನಿ. ನೀವು ಕೊನೇ ಅಕ್ಷರದಿಂದ ಮೈತ್ರಿ ವಿರೋಧ ಪಕ್ಷದ್ದು ಇನ್ನೊಂದು ಹಗರಣ ಹೇಳ್ಬೇಕು. ಮುಡಾ' ಎಂದ ಗುದ್ಲಿಂಗ.

'ಡ'ದಿಂದ ಶುರುವಾಗ್ಬೇಕು... ಹಾಂ, ಸಿಕ್ತು. ಡಿ.ದೇವರಾಜ ಅರಸ್ ಟರ್ಮಿನಲ್' ಕಿರುಚಿದ ಕಲ್ಲೇಶಿ. ಲೂಟಿ ಲೂಟಿ... ನಿಗಮದಲ್ಲಿ ಲೂಟಿ ಎಂದ ಈರಭದ್ರ. ನಿಗಮದ ಆರಂಭಿಕ ಹೆಸರು 'ಕಿ'ಯಿಂದ ಕೊನೆಯಾಗುತ್ತದೆ... ಕಿಯೋನಿಕ್ಸ್'.

'ಸ ಅಂದ್ರೆ ಸಹಕಾರಿ'.

'ರ, ರಿ... ತಲೆ ಕೆರೆದುಕೊಂಡ ಮಾಲಿಂಗ. ಆಂ ಸಿಕ್ತು... ರೀಡೂ ಅರ್ಕಾವತಿ'.

'ಸೂಪರ್ ಕಣೋ, ತ, ಥದಿಂದ ಹೇಳ್ಬೇಕೀಗ. ಯಾವ್ದಿದೆ? ಹಾಂ! ಯುರೇಕಾ, ಸಿಕ್ತು ಸಿಕ್ತು ಥೀಂ ಪಾರ್ಕ್, ಪರಶುರಾಂ ಥೀಂ ಪಾರ್ಕ್. ಮತ್ತೆ 'ಕ'ಯಿಂದ ಶುರುವಾಗ್ಬೇಕು'.

'ಕ'ಗೊಂದು ಭಾರಿ ಐಟಂ ಐತೆ, ಕೊರೊನಾ'.

'ನ ಕಾರದಿಂದ ಬರ್ಬೇಕು. ಆಂ...ನಿವೇಶನ... ಸಿ.ಎ ನಿವೇಶನ... ಮತ್ತೆ 'ನ' ಬಂತು. ಅದರ ಬದ್ಲು ಸೈಟು. 'ಟ' ಇಂದ ಹೇಳ್ರಲಾ' ಎಂದ ಕಲ್ಲೇಶಿ.

'ಪ್ರವಾಸೋದ್ಯಮ ಇಲಾಖೆಲೂ ಹಿಂದೆ ಗೋಲ್‌ಮಾಲ್ ಆಗೈತೆ ಅಂತ ಕೈನೋರು ಹೇಳ್ತಾವ್ರಲ್ಲ, ಸೋ ಟೂರಿಸಂ'.

'ಸ, ಸಂ...ಯಾವ್ದಿದೆ? ಆಂ... ಸಮ್‌ಥಿಂಗ್... ನೇಮಕದಿಂದ ಹಿಡ್ದು ವರ್ಗಾವಣೆವರೆಗೆ ಎಲ್ಲದಕ್ಕೂ ಕೊಡ್ಬೇಕಲ್ಲ...!'

'ಗ...ಗ...ಗ... ಹಾಂ.. ಗಣಿ ಹಗರಣ, ಗಂಗಾಕಲ್ಯಾಣ' ಹುಡುಕೇಬಿಟ್ಟ ಗುದ್ಲಿಂಗ.

'ಣಯಿಂದ ಯಾವ ಶಬ್ದನೂ ಇಲ್ಲ ಕಣ್ರಲೇ. ಅಂತ್ಯಾಕ್ಷರಿ ಇಲ್ಲಿಗೆ ಬಂದ್' ಎಂದ ಮಾಲಿಂಗ.

'ರಾಜಕೀಯನೇ ಅಂಗೆ ಕಣ್ಲಾ. ಎಲ್ಲಾ ಮುಂದೆ ಹೇಳಕ್ಕಾಗದ 'ಣ'ಗೆ ಬಂದು ನಿಂತ್ಕತದೆ. ಕಲ್ಯಾಣ ಕಲ್ಯಾಣ ಅಂತಿರ್ತಾರೆ, ಆಮೇಲೆ ಹಗರಣ ಹಗರಣ ಆಯ್ತದೆ. ಜನಕ್ಕೆ ಉಳಿದಿರೋದು ಒಂದೇ: ನಾಯಕರೇ ನಿಮಗೆ 'ಣಮೋ ಣಮಃ' ಅಂತ ಕೈ ಮುಗ್ಯೋದು' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು!

ಸಂಗತ

ದಾರಿದ್ರ್ಯ ದೂರವಾಗಿಸುವ ಬಗೆ...

ಅನೇಕ ಸಮಸ್ಯೆಗಳ ಮೂಲವಾದ ಬಡತನದ ನಿರ್ಮೂಲನೆ ನಮ್ಮ ಕೈಯಲ್ಲೇ ಇದೆ

• ಬಿ.ಎಸ್.ಭಗವಾನ್

ಬೆಳಿಗ್ಗೆಯೇ ಮಳೆ ಜಡಿ ಹಿಡಿದಿತ್ತು. ಪೇಟೆ ಬೀದಿಯಲ್ಲಿ ಕೆಲವರು ಮಾತ್ರ ಕೊಡೆ ಹಿಡಿದು ಓಡಾಡುತ್ತಿದ್ದರು. ಕರವಸ್ತ್ರ ಸುರುಳಿ ಸುತ್ತಿ ತಲೆ ರಕ್ಷಿಸಿಕೊಳ್ಳುವ ಸಾಹಸವೂ ನಡೆದಿತ್ತು. 'ರಿಪೇರಿ ಎಲ್ಲಿ ಸ್ವಾಮಿ, ಛತ್ರಿ ಇರೋದೆ ಮರೆಯೋಕೆ ಅನ್ನೋ ಹಾಗೆ ಮನೇಲಿಟ್ಟು ಬರ್ತಾರೆ' ಅಂದ ಛತ್ರಿ ರಿಪೇರಿಯವನ ಮಾತು ನೆನಪಾಯಿತು. ಮಳೆ, ಬಿಸಿಲಿನಿಂದ ರಕ್ಷಣೆಗಾಗಿ ಇರುವ ಕೊಡೆಯನ್ನು ಅಲಕ್ಷಿಸಿದರೆ ಆಗುವುದೇನು? ಅತ್ತ ಕೊಡೆಯ ಉತ್ಪಾದನೆಗೂ ಇತ್ತ ಅಷ್ಟಿಷ್ಟು ಕಾಸಿಗೆ ದಾರಿಯಾಗುವ ಅದರ ದುರಸ್ತಿಗೂ ಧಕ್ಕೆ. ಬೆಳೆ, ಸಾಮಗ್ರಿ, ಸರಂಜಾಮು ವಗೈರೆ ಸಮರ್ಥವಾಗಿ ಬಳಸದಿದ್ದರೆ ಉದ್ಯೋಗ ಜಾಲ ಹೇಗೆ ಕುಂಠಿತವಾಗಬಹುದು ಎನ್ನಲು ಇದೊಂದು ನಿದರ್ಶನವಷ್ಟೆ.

ದುಡಿಮೆಯ ಅವಕಾಶಗಳ ಅಭಾವದ ಪರಿಣಾಮವಾಗಿಯೇ ಬಡತನ, ಅಸಹಾಯಕತೆ. ಬಡತನ ಬೇಡುವುದು ಭಿಕ್ಷೆ ಅಥವಾ ವಂತಿಗೆಯನ್ನಲ್ಲ, ನೌಕರಿ, ತರಬೇತಿಯನ್ನು. 'ಬಡತನ ಸ್ವಾಭಾವಿಕವಲ್ಲ, ಅದು ಮನುಷ್ಯಕೃತ' ಎಂದರು ನೆಲ್ಸನ್ ಮಂಡೇಲ. ಕಾಸಿಲ್ಲದೇ ಇರಬಹುದು, ಆದರೆ ಜ್ಞಾನ ಮತ್ತು ಕೌಶಲಕ್ಕೆ ಎಂಥ ಬರ? ಪ್ರತಿಭೆ ಯಾರೇ ಅರ್ಜಿಸಬಹುದಾದಷ್ಟು ಸುಂದರ. ಅದನ್ನು ನಗದಾಗಿಸಿಕೊಳ್ಳಬಹುದು, ವಿನಿಮಯ ಮಾಡಿಕೊಳ್ಳಬಹುದು. ನಿರ್ಗತಿಯನ್ನೇ ಸ್ಫೂರ್ತಿ ಆಗಿಸಿಕೊಂಡು ಆಯಾ ಕ್ಷೇತ್ರಗಳಲ್ಲಿ ಮಹಾಸಾಧನೆ ಮಾಡಿದವರು ನ್ಯೂಟನ್, ಶ್ರೀನಿವಾಸ ರಾಮಾನುಜನ್, ಲಾಲ್ ಬಹದ್ದೂರ್ ಶಾಸ್ತ್ರಿ... ಅಂಗವೈಕಲ್ಯಕ್ಕೆ ಅಂಜದೆ ದುಡಿಮೆನಿರತರಾಗುವ ಸ್ವಾಭಿಮಾನಿಗಳಿಗೆ ಲೆಕ್ಕವಿಲ್ಲ. ಮಹಾತ್ಮ ಗಾಂಧಿ 'ದುಡಿದೇ ಸಂಪತ್ತನ್ನು ಅರ್ಜಿಸಬೇಕು' ಎಂದರು.

ಹಿಡಿದ ಉದ್ಯೋಗವನ್ನು ಮಡಿಲ ಮಗು ಎಂದುಕೊಂಡು ಕರ್ತವ್ಯಮಗ್ನರಾದರೆ ದಾರಿದ್ರ್ಯ ದೂರ. ದೇಶದಿಂದ ಹಾಗೂ ಇಡೀ ವಿಶ್ವದಿಂದ ಬಡತನ ಇನ್ನಿಲ್ಲವಾಗಲು ಪ್ರತಿಯೊಬ್ಬರೂ ಸೆಣಸಾಡಬೇಕಿದೆ. ಎಲ್ಲರಿಗೂ ದೈಹಿಕ ಮತ್ತು ಮಾನಸಿಕ ಆರೋಗ್ಯ, ಸಾಕ್ಷರತೆ, ಆಶ್ರಯ, ಶಿಕ್ಷಣದ ಜೊತೆಗೆ ಸರಳ ಜೀವನ ನಡೆಸಲು ಇತರ ಅಗತ್ಯ ಸೌಲಭ್ಯಗಳು ದೊರಕಬೇಕು. ಕೀಳರಿಮೆಯಿಂದ ಮುಕ್ತವಾದ ಘನತೆಯ ಬದುಕಿಗೆ ಯಾರೂ ಹೊರತಾಗಬಾರದು. ಪ್ರತಿನಿತ್ಯವೂ ಒಂದು ಮೀನನ್ನು ತನ್ನ ಮಗನಿಗೆ ಕೊಡುತ್ತಿದ್ದ ಅಪ್ಪ. 'ಹೀಗೆ ಮಾಡುವ ಬದಲು ನಿನ್ನ ಮಗನಿಗೆ ಮೀನು ಹಿಡಿಯುವುದನ್ನು ಕಲಿಸು' ಅಂತ ಹಿತೈಷಿ ಸೂಚಿಸಿದ. ಈ ಧೋರಣೆಯೇ ಕಾರ್ಯಗತವಾದರೆ ಬಡತನ ಎನ್ನುವುದೇ ಬರಿಯ ಸುಳ್ಳಾದೀತು. ಬಡತನವು ವ್ಯಕ್ತಿತ್ವದ ದೋಷ ಎಂಬ ಮಾತಿದೆ. ಅದನ್ನು ನೀಗಲು ಎಷ್ಟು ಹಣ, ಸಂಪನ್ಮೂಲಗಳಿದ್ದರೂ ಸಾಲದು. ಈ ದೃಷ್ಟಿಯಿಂದ ಬಡತನದಷ್ಟು ದುಬಾರಿಯಾದುದು ಮತ್ತೊಂದಿಲ್ಲ.

ಅಸಮಾನತೆ ವಿಪರೀತಕ್ಕೆ ಹೋದರೆ ಸಾಮಾಜಿಕ ಒಗ್ಗಟ್ಟಿಗೆ ಭಂಗವಾಗುವುದು, ಹಿಂಸೆ ಮತ್ತು ಅಪರಾಧಗಳ ಮೇಲುಗೈಗೆ ಆಸ್ಪದವಾಗುವುದು.

ಜಗತ್ತಿನಲ್ಲಿ ಎಲ್ಲರಿಗೂ ಹೊಟ್ಟೆತುಂಬುವಷ್ಟು ಆಹಾರ ವೇನೊ ಇದೆ. ಆದರೂ ಹೊಟ್ಟೆ ತುಂಬಿದರೆ ಹೇಗಿರುತ್ತದೆ ಎನ್ನುವುದೇ ತಿಳಿಯದಷ್ಟು ಹಸಿವು ಕೊಟ್ಯಂತರ ಮಂದಿಯನ್ನು ಬಾಧಿಸಿದೆ. ಗ್ರೀಕ್ ದಾರ್ಶನಿಕ ಪ್ಲೇಟೊ ಬಡತನವನ್ನು 'ಅನೈತಿಕ ಬದುಕಿಗೆ ದೂಡಬಲ್ಲ ಸಾಮಾಜಿಕ ಅನಿಷ್ಟ' ಎಂದಿದ್ದ. ಅವನ ಪ್ರಕಾರ, ಕೊರತೆಯು ಸಿರಿತನವನ್ನು ಕಡಿತಗೊಳಿಸದು, ಬದಲಿಗೆ ಹಣದ ದಾಹ ಹೆಚ್ಚಿಸುವುದು!

ಹಣವಿಲ್ಲದೆ ಶಿಕ್ಷಣವಿಲ್ಲ. ಹಾಗಾಗಿ ನಿರುದ್ಯೋಗ. ನಿರುದ್ಯೋಗಿ ತನಗೆ ಮತ್ತು ತನ್ನ ಕುಟುಂಬಕ್ಕೆ ಅಗತ್ಯವಾದ ಪೌಷ್ಟಿಕ ಆಹಾರ ಒದಗಿಸಲಾರ. ಅನಾರೋಗ್ಯ ಬೆನ್ನೇರಿ ದುಡಿಯಲು ಅಸಾಧ್ಯವಾಗುವಷ್ಟು ದಯನೀಯ ಸ್ಥಿತಿ. ಎಂದಮೇಲೆ ಬಡತನ ಅನೇಕ ಸಮಸ್ಯೆಗಳ ಬೇರು. ಜಾಗತಿಕ ಮಟ್ಟದಲ್ಲಿ 712 ದಶಲಕ್ಷ ಮಂದಿ ಕಡುಬಡತನದಲ್ಲಿದ್ದಾರೆ ಎಂದು 2022ರಲ್ಲಿ ವಿಶ್ವಬ್ಯಾಂಕ್ ವರದಿ ಮಾಡಿತ್ತು. ಸುದೈವದಿಂದ ಈ ಸಂಖ್ಯೆ 692 ದಶಲಕ್ಷಕ್ಕೆ ಇಳಿದಿದೆ. ಶುದ್ಧ ನೀರು ಪೂರೈಕೆ, ಮಹಿಳಾ ಸಬಲೀಕರಣ, ಪರಿಸರ ರಕ್ಷಣಾ ಕಾರ್ಯಕ್ರಮಗಳಿಗೆ ಒತ್ತು, ಬಾಲ್ಯವಿವಾಹಕ್ಕೆ ತಡೆಯಂತಹ ವಿಷಯಗಳ ಬಗ್ಗೆ ಸಮೂಹ ಮಾಧ್ಯಮಗಳು ತಕ್ಕಮಟ್ಟಿಗಾದರೂ ಈ ದಿಸೆಯಲ್ಲಿ ಪ್ರಭಾವ ಬೀರಿವೆಯೆನ್ನೋಣ.

ಜಗತ್ತಿನ ಯಾವ ದೇಶವೂ ಬಡತನದಿಂದ ಸಂಪೂರ್ಣವಾಗಿ ಪಾರಾಗಿಲ್ಲ. ನಾರ್ವೆ, ಫಿನ್‌ಲ್ಯಾಂಡ್, ಡೆನ್ಮಾರ್ಕ್ ಸಾಪೇಕ್ಷವಾಗಿ ಕಡಿಮೆ ಬಡತನವಿರುವ ದೇಶಗಳು. ಅವುಗಳಲ್ಲಿನ ದೃಢ ಸಾಮಾಜಿಕ ಕಲ್ಯಾಣ ವ್ಯವಸ್ಥೆ, ಉತ್ತಮ ಜೀವನಮಟ್ಟದಿಂದಾಗಿ ಈ ಹೆಗ್ಗಳಿಕೆ ಕೈಗೂಡಿದೆ. ಭಾರತದಲ್ಲಿ ಜನಸಂಖ್ಯಾ ಹೆಚ್ಚಳವು ಆರ್ಥಿಕ ಬೆಳವಣಿಗೆಯನ್ನು ಮೀರಿದೆ. ಹಿಂದಿನ 45 ವರ್ಷಗಳಿಂದಲೂ ಜನಸಂಖ್ಯೆ ಏರುಗತಿಯಲ್ಲಿದೆ. ಜನಸಂಖ್ಯೆಯು ವರ್ಷಕ್ಕೆ ಶೇಕಡ 2.2ರಷ್ಟು ಹೆಚ್ಚುತ್ತಿದೆ. ಅಂದರೆ ಪ್ರತಿವರ್ಷವೂ 1.7 ಕೋಟಿ ಮಂದಿ ಸೇರ್ಪಡೆ ಆಗುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಕಡಿಮೆ ಉತ್ಪಾದನೆ, ಬೆಲೆ ಏರಿಕೆಯು ವಿಶೇಷವಾಗಿ ಬಡತನಕ್ಕೆ ಮಣೆ ಹಾಕುತ್ತಿವೆ.

ಮಕ್ಕಳ ವಿದ್ಯಾಭ್ಯಾಸಕ್ಕೆ, ಆರೋಗ್ಯ ಸುಧಾರಣೆಗೆ ಅಥವಾ ಮನೆ ದುರಸ್ತಿಗೆ ಬಳಸಬೇಕೆಂಬ ಷರತ್ತು ವಿಧಿಸಿಯೇ ಸಹಾಯ ಮಾಡುವುದು ಅರ್ಥಪೂರ್ಣ. ಅಂತರರಾಷ್ಟ್ರೀಯ ಬಡತನ ನಿರ್ಮೂಲನಾ ದಿನದ (ಅ. 17) ಈ ಸಂದರ್ಭದಲ್ಲಿ ಒಂದು ಸಲಹೆ ಪಾಲನೀಯ. ಬಡ ವಿದ್ಯಾರ್ಥಿಗಳಿಗೆ ಉಚಿತ ಪಾಠ ಹೇಳಿಕೊಡುವುದು. ಪ್ರತಿಯಾಗಿ ಒಬ್ಬೊಬ್ಬರೂ ಒಂದೊಂದು ಗಿಡ ನೆಟ್ಟು ಅದರ ಪೋಷಣೆಯ ಹೊಣೆ ಹೊತ್ತುಕೊಳ್ಳುವುದು.

ವಾಚಕರ ವಾಣಿ

ಪ್ರಾಣಿ ಸಂರಕ್ಷಣೆಗೂ ಇರಲಿ ಪ್ರೀತಿ

ನಾಡಹಬ್ಬ ದಸರಾದಲ್ಲಿ ಪ್ರಾಣಿಪ್ರಿಯರಿಂದ ವ್ಯಕ್ತವಾದ ಪ್ರೀತಿಯನ್ನು ನಾವೆಲ್ಲ ಸಾಮಾಜಿಕ ಜಾಲತಾಣದಲ್ಲಿ ನೋಡುತ್ತಿದ್ದೇವೆ. 'ಅರ್ಜುನ' ಆನೆ ಇಲ್ಲವೆಂಬ ಬೇಸರದ ಸಂಗತಿಯನ್ನು ಬಿಟ್ಟರೆ, ಆನೆಗಳ ಮೇಲೆ ಜನ ತೋರಿಸಿದ ಪ್ರೀತಿಯಂತೂ ಮನಮೋಹಕ. ಈ ಬಾರಿಯ ದಸರಾದಲ್ಲಿ ಎಲ್ಲ ಆನೆಗಳಿಗಿಂತಲೂ ಜನಾಕರ್ಷಣೆಯ ಕೇಂದ್ರಬಿಂದುವಾಗಿದ್ದು, ಜನ ಪ್ರೀತಿಯಿಂದ ತಿಂಡಿಪೋತ, ತುಂಟ ಎಂದೆಲ್ಲ ಕರೆಯುವ ಭೀಮ. ಅಂಬಾರಿಯನ್ನು ಹೊತ್ತು ಸಾಗಿದ ದಾರಿಯಲ್ಲಿ ಪ್ರೇಕ್ಷಕರು 'ಭೀಮ' ಎಂದು ಕರೆದ ತಕ್ಷಣ ತನ್ನ ಸೊಂಡಿಲಿನಿಂದ ಆತ ಪ್ರತಿಕ್ರಿಯಿಸುತ್ತಿದ್ದ ಮನಮೋಹಕ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಜನಪ್ರಿಯವಾಗಿದೆ.

ಹೀಗೆ ನಮ್ಮ ಜನರು ಪ್ರಾಣಿಗಳ ಮೇಲೆ ತೋರಿಸುವ ಪ್ರೀತಿಯು ಅವುಗಳ ಸಂರಕ್ಷಣೆಗೆ ಕಾರಣವಾಗಬೇಕು. ಈ ಕಾರ್ಯಕ್ಕೆ ಅರಣ್ಯ ಅವಶ್ಯಕ. ಆದ್ದರಿಂದ ಪರಿಸರ ಸಂರಕ್ಷಣೆಯ ಬಗ್ಗೆ ಎಲ್ಲರೂ ಕಾಳಜಿ ವಹಿಸಬೇಕು.

ರಾಮ್, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಚಾರ್‌ಧಾಮ್‌ಗೆ ಸಹಾಯಧನ: ಮಾರ್ಗ ಸರಳವಾಗಲಿ

2024-25ನೇ ಸಾಲಿನಲ್ಲಿ ಕರ್ನಾಟಕದಿಂದ ಮೊದಲ ಬಾರಿಗೆ ಚಾರ್‌ಧಾಮ್ ಯಾತ್ರೆ ಕೈಗೊಂಡವರಿಗೆ ತಲಾ ₹ 20,000 ಸಹಾಯಧನ ನೀಡುವ ಸಂಬಂಧ ಸರ್ಕಾರ ಅರ್ಜಿ ಆಹ್ವಾನಿಸಿರುವುದು ಸ್ವಾಗತಾರ್ಹ. ಅರ್ಜಿ ಸಲ್ಲಿಸಲು ಯಾತ್ರೆ ಕೈಗೊಂಡ ಪುರಾವೆಗಾಗಿ ಹಲವಾರು ದಾಖಲೆಗಳೊಂದಿಗೆ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮತ್ತು ರೇಷನ್ ಕಾರ್ಡ್ ಪ್ರತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಯಾತ್ರಾರ್ಥಿಯ ಬ್ಯಾಂಕ್ ಖಾತೆ ಚಾಲ್ತಿಯಲ್ಲಿರಬೇಕು.

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಆಧಾರ್ ಕಾರ್ಡ್ ಅನ್ನು ದಾಖಲೆಯನ್ನಾಗಿ ಪರಿಗಣಿಸಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಚುನಾವಣಾ ಗುರುತಿನ ಚೀಟಿ ಮತ್ತು ಬ್ಯಾಂಕ್ ಪಾಸ್‌ಬುಕ್‌ನಲ್ಲಿನ ವಿಳಾಸವನ್ನು ಪರಿಗಣಿಸಲಾಗುತ್ತದೆ. ಆದರೆ ಯಾರೂ ರೇಷನ್ ಕಾರ್ಡನ್ನು ದಾಖಲೆಯನ್ನಾಗಿ ಪರಿಗಣಿಸುತ್ತಿಲ್ಲ. ಒಂದು ವೇಳೆ ಸಹಾಯಧನವನ್ನು ಬಿಪಿಎಲ್ ಕಾರ್ಡ್ ಹೊಂದಿದವರಿಗಷ್ಟೇ ನೀಡುವುದಾದಲ್ಲಿ ರೇಷನ್ ಕಾರ್ಡ್ ಪ್ರತಿಯನ್ನು ಕೇಳುವುದು ಅರ್ಥಪೂರ್ಣವಾಗುತ್ತದೆ. ಚುನಾವಣಾ ಗುರುತಿನ ಚೀಟಿ ಪಡೆದುಕೊಳ್ಳಲು ಬಹಳ ತಡವಾಗುತ್ತದೆ. ರೇಷನ್ ಕಾರ್ಡ್‌ನಲ್ಲಿ ವಿಳಾಸ ಬದಲಾಯಿಸುವುದಂತೂ ಕಷ್ಟಕರ. ಈ ಎಲ್ಲಾ ಕಾರಣಗಳಿಂದ ಚಾರ್‌ಧಾಮ್ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳು ಸಹಾಯಧನ ಪಡೆಯುವುದರಿಂದ ವಂಚಿತರಾಗಬಹುದು. ಆದ್ದರಿಂದ ಸಹಾಯಧನ ಪಡೆದುಕೊಳ್ಳಲು, ಸುಲಭವಾಗಿ ಮಾಡಿಸಬಹುದಾದ ಆಧಾರ್ ಕಾರ್ಡನ್ನು ಮಾತ್ರ ಪರಿಗಣಿಸಿ ಯಾತ್ರಾರ್ಥಿಗಳು ಸಹಾಯಧನದಿಂದ ವಂಚಿತರಾಗುವುದನ್ನು ತಪ್ಪಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಬೆಂಗಳೂರಿಗೆ ಬೇಕು ಬಹುಪ್ರವೇಶಾವಕಾಶ

ತುಮಕೂರು ರಸ್ತೆಯ ಜೊತೆಗೆ ಬೆಂಗಳೂರು ಪ್ರವೇಶಕ್ಕೆ ಹೊಸದಾಗಿ ಬಹುಪ್ರವೇಶದ ಅವಕಾಶಗಳನ್ನು ಕಲ್ಪಿಸಬೇಕೆಂದು ಬಿಜೆಪಿ ಮುಖಂಡ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ ರಾವ್ ಅವರು ಅಭಿಪ್ರಾಯಪಟ್ಟಿರುವುದು (ದಿನದ ಟ್ವೀಟ್, ಅ. 15) ಸೂಕ್ತ ಹಾಗೂ ಸಮಂಜಸ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಬೆಂಗಳೂರಿನ ಪ್ರವೇಶಕ್ಕೆ ಇರುವುದು ತುಮಕೂರು ಮಾರ್ಗದ ಹೆದ್ದಾರಿ ಒಂದೇ. ಈ ಹೆದ್ದಾರಿಯಲ್ಲಿ ಬೆಂಗಳೂರಿನ ಗೊರಗುಂಟೆಪಾಳ್ಯದವರೆಗೆ ಸರಾಗವಾಗಿ ಬರಬಹುದು. ಅಲ್ಲಿಂದ ಮುಂದಕ್ಕೆ ಬೆಂಗಳೂರಿನತ್ತ ಪ್ರಯಾಣ 'ಸಾಕಪ್ಪಾ ಸಾಕು' ಎನಿಸುತ್ತದೆ. ದಿನದ ಯಾವ ಹೊತ್ತಿನಲ್ಲೂ ಈ ಮಾರ್ಗದಲ್ಲಿ ಸಂಚಾರ ದಟ್ಟಣೆಯ ಸಮಸ್ಯೆ ಕಾಡುತ್ತಿರುತ್ತದೆ. ಹೆದ್ದಾರಿಯಲ್ಲಿ ಜಿಂಕೆಯಂತೆ ವೇಗವಾಗಿ ಬರುವ ವಾಹನಗಳು ಗೊರಗುಂಟೆಪಾಳ್ಯದಿಂದ ಮುಂದಕ್ಕೆ ಆಮೆವೇಗ ಪಡೆಯುತ್ತವೆಂದರೆ ಇಲ್ಲಿನ ಪರಿಸ್ಥಿತಿಯನ್ನು ಊಹಿಸಬಹುದು. ಪ್ರಯಾಣಿಕರು ಅಥವಾ ಸಂಚಾರಿಗರು ಅನುಭವಿಸುವ ಕಿರಿಕಿರಿ ಅವರ್ಣನೀಯ. ಈ ಕಾರಣದಿಂದ ಭಾಸ್ಕರ ರಾವ್ ಅವರ ಅನಿಸಿಕೆ ಗಮನಾರ್ಹ.

ಆರ್.ಎಸ್.ಅಯ್ಯರ್, ತುಮಕೂರು

ಹೊಳೆಯಾದ ರಸ್ತೆ, ಕೆರೆಯಾದ ಬಯಲು

ನಗರಗಳು ಬೆಳೆಯುತ್ತಾ ಹೋದಂತೆ ನಾಗರಿಕರು ವಿವಿಧ ರೀತಿಯಲ್ಲಿ ಸಂಕಷ್ಟಗಳನ್ನು ಅನುಭವಿಸುವಂತಾಗಿದೆ. ಹಾಗೆ ನೋಡಿದರೆ, ಮಂಗಳವಾರ ಇಡೀ ದಿನ ಬಿದ್ದ ಮಳೆಗೆ ಬೆಂಗಳೂರಿನ ಹೊರ ವಲಯಗಳಲ್ಲಿ ರಸ್ತೆಗಳು ಹೊಳೆಗಳಂತಾಗಿ, ಬಯಲುಗಳು ಕೆರೆಗಳಂತಾಗಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಏಕೆಂದರೆ ಮೊದಲು ಅಲ್ಲೆಲ್ಲ ಬೆಳೆಗಳನ್ನು ಬೆಳೆಯುವ ಗದ್ದೆಗಳು ಇದ್ದವು ತಾನೇ. ಹೆಚ್ಚಿನ ಮಳೆ ಬೀಳುವ ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಈಗಲೂ ಗದ್ದೆಗಳಲ್ಲಿ ಮಳೆ ನೀರು ತುಂಬಿರುವುದು ಮಾಮೂಲೇ.

ಬೇರೆಯವರನ್ನು ದೂರುವ ಬದಲು, ನಾವು ಮನೆ ಕಟ್ಟುವಾಗ ಸೆಟ್‌ಬ್ಯಾಕ್ ಬಿಡದಿರುವುದು, ಅನುಮತಿ ಪಡೆದಿರುವುದಕ್ಕಿಂತ ಹೆಚ್ಚಿನ ಮಹಡಿಗಳನ್ನು ಕಟ್ಟುವುದು, ಕಟ್ಟಡ ತ್ಯಾಜ್ಯವನ್ನು ಅಲ್ಲಲ್ಲಿಯೇ ಬಿಡುವುದು, ವಾಹನಗಳನ್ನು ಮನೆಯ ಆವರಣದೊಳಗೆ ನಿಲ್ಲಿಸದೆ ರಸ್ತೆಯಲ್ಲಿ ನಿಲ್ಲಿಸುವುದು, ಪ್ಲಾಸ್ಟಿಕ್ ಚೀಲಗಳನ್ನು ವಿಪರೀತ ಬಳಸಿ ಅಲ್ಲಿ ಇಲ್ಲಿ ಎಸೆಯುವಂತಹ ನಮ್ಮ ದುರಭ್ಯಾಸಗಳನ್ನು ಸರಿಪಡಿಸಿಕೊಂಡರೆ ಸಾಕು. ನಮ್ಮ ಹಲವಾರು ಸಮಸ್ಯೆಗಳಿಗೆ ತನ್ನಿಂದ ತಾನೇ ಉತ್ತರಗಳು ದೊರಕಿಯಾವು.

ಬಿ.ಎನ್.ಭರತ್, ಬೆಂಗಳೂರು

ಜೈಲು: ಭೂಗತ ಲೋಕದ ಅಡ್ಡಾ ಅಲ್ಲ

ಕಾರಾಗೃಹವು ಅಪರಾಧಿಗಳ ಪಾಲಿಗೆ ತಮ್ಮ ತಪ್ಪಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು, ಪರಿವರ್ತನೆ ಹೊಂದುವ ಒಂದು ಸ್ಥಳ. ಆದರೆ ಇತ್ತೀಚಿನ ಪ್ರಕರಣಗಳಾದ ಚಿತ್ರನಟ ದರ್ಶನ್ ಜೈಲುವಾಸ, ಗುರ್ಮೀತ್ ರಾಮ್ ರಹೀಂ ಸಿಂಗ್‌ಗೆ ಪೆರೋಲ್ ನೀಡಿಕೆಯಂತಹವು ಇಂತಹದ್ದೊಂದು ನಂಬಿಕೆ ಹುಸಿಯಾಗುವಂತೆ ಮಾಡಿವೆ. ಮೊನ್ನೆ ಮುಂಬೈಯಲ್ಲಿ ನಡೆದ ಬಾಬಾ ಸಿದ್ದೀಕಿ ಹತ್ಯೆಯ ಮಾಸ್ಟರ್ ಮೈಂಡ್ ಎಂದು ಹೇಳಲಾಗುತ್ತಿರುವ ಲಾರೆನ್ಸ್ ಬಿಷ್ಣೋಯ್ ಕೂಡ ಹಲವು ವರ್ಷಗಳಿಂದಲೂ ಜೈಲುವಾಸ ಅನುಭವಿಸುತ್ತಿದ್ದಾನೆ. ಕೆಲವರು ಜೈಲನ್ನೇ ಸುರಕ್ಷಿತ ತಾಣವನ್ನಾಗಿಸಿಕೊಂಡು ಭೂಗತ ಜಗತ್ತನ್ನು ನಿಯಂತ್ರಿಸುತ್ತಿದ್ದಾರೆ. ಜೈಲು ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಆಗದಿದ್ದರೆ, ಗೂಂಡಾಗಿರಿ, ಕ್ರೂರ ಕೆಲಸಗಳನ್ನು ಮಾಡಲು ಯಾರೂ ಹಿಂಜರಿಯದ ವಾತಾವರಣ ನಿರ್ಮಾಣವಾಗುತ್ತದೆ. ಆಗ ಮುಂದೆ ಬಹು ದೊಡ್ಡ ಕಂಟಕವನ್ನು ಎದುರಿಸಬೇಕಾಗುತ್ತದೆ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿವಿಧ ರಾಜ್ಯ, ಹೊರದೇಶಗಳಲ್ಲಿ ಅಪರಾಧ ಕೃತ್ಯ; ಬಾಲಿವುಡ್ ಮಂದಿಯೂ ಗುರಿ

ಬಿಷ್ಣೋಯಿ ಗ್ಯಾಂಗ್ ಮತ್ತೊಂದು 'ಡಿ ಕಂಪನಿ'?

● ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಲಾರೆನ್ಸ್ ಬಿಷ್ಣೋಯಿ 2015ರಿಂದ ಜೈಲಿನಲ್ಲಿದ್ದಾನೆ. ಆದರೆ, ಮಾಜಿ ಸಚಿವ ಬಾಬಾ ಸಿದ್ದಿಕಿ, ಗಾಯಕ ಸಿಧು ಮೂಸೇವಾಲ ಸೇರಿದಂತೆ ಹಲವು ಖ್ಯಾತನಾಮರ ಹತ್ಯೆ ಪ್ರಕರಣದಲ್ಲಿ ಈತನ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಕೆನಡಾ–ಭಾರತದ ಕಲಹದಲ್ಲಿಯೂ ಈತನ ಹೆಸರು ಪ್ರಸ್ತಾಪವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಲ್ಮಾನ್ ಖಾನ್ ಅವರನ್ನು ಹತ್ಯೆ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿದ್ದಾನೆ. ಬಿಷ್ಣೋಯಿ ಸಮುದಾಯದ ನಂಬಿಕೆಗಳು ಮತ್ತು ಈತನ ಅಪರಾಧ ಕೃತ್ಯಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಗಾಗುತ್ತಿವೆ

ಲಾರೆನ್ಸ್ ಬಿಷ್ಣೋಯಿ... ಈ ಹೆಸರು ಆಗಿಂದಾಗ್ಗೆ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ. ಎಲ್ಲವೂ ಘಟನಾಘಟನೆಗಳಿಗೆ ಸಂಬಂಧಿಸಿದ ಇಲ್ಲವೇ ರಾಷ್ಟ್ರೀಯ ಮಹತ್ವದ ಅಪರಾಧ ಪ್ರಕರಣಗಳೇ. ವಿಶೇಷ ಅಂದರೆ, ಈಗ ಇದೇ ಹೆಸರು ಮಹಾರಾಷ್ಟ್ರದ ಮಾಜಿ ಸಚಿವ ಬಾಬಾ ಸಿದ್ದಿಕಿ ಅವರ ಹತ್ಯೆ ಪ್ರಕರಣ ಮತ್ತು ಭಾರತ–ಕೆನಡಾ ನಡುವಿನ ಕಲಹದಲ್ಲೂ ಕೇಳಿಬಂದಿದೆ. ಕೆನಡಾದಲ್ಲಿನ ಖಾಲಿಸ್ತಾನಿ ಹೋರಾಟಗಾರರನ್ನು ಗುರಿಯಾಗಿಸಿಕೊಳ್ಳುವ ವಿಚಾರದಲ್ಲಿ ಭಾರತದ ಏಜೆಂಟ್‌ಗಳು ಬಿಷ್ಣೋಯಿ ಗ್ಯಾಂಗ್‌ನಂಥ ಸಂಘಟಿತ ಅಪರಾಧ ತಂಡಗಳನ್ನು ಬಳಸಿದ್ದಾರೆ ಎನ್ನುವುದು ಕೆನಡಾದ ಆರೋಪ. ತಿರುವೇನೆಂದರೆ, ಭಾರತವು ಇದಕ್ಕೆ ವಿರುದ್ಧವಾದ ಆರೋಪ ಮಾಡಿದ್ದು, ಬಿಷ್ಣೋಯಿ ಗ್ಯಾಂಗ್ ಖಾಲಿಸ್ತಾನಿ ಪ್ರತ್ಯೇಕತಾವಾದಿಗಳಿಗೆ ಬೆಂಬಲ ನೀಡುತ್ತಿದೆ ಎಂದಿದೆ.

ಲಾರೆನ್ಸ್ ಬಿಷ್ಣೋಯಿ ಮತ್ತು ಆತನ ಗ್ಯಾಂಗ್ ಹೆಸರು ಈಗ ವಿಶ್ವದ ಎರಡು ಪ್ರಬಲ ರಾಷ್ಟ್ರಗಳ ನಡುವಿನ ಆರೋಪ ಪ್ರತ್ಯಾರೋಪದಲ್ಲೂ ಪ್ರಸ್ತಾಪವಾಗಿದೆ. ಭಾರತವಷ್ಟೇ ಅಲ್ಲದೇ ಹಲವು ದೇಶಗಳಿಗೆ ಬೇಕಾಗಿರುವ ಮೋಸ್ಟ್ ವಾಂಟೆಡ್ ಪಾತಕಿಯಾಗಿರುವ ಲಾರೆನ್ಸ್, 2015ರಿಂದ ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ಸಬರಮತಿ ಕಾರಾಗೃಹದಲ್ಲಿದ್ದಾನೆ. ಜೈಲಿನಲ್ಲಿದ್ದುಕೊಂಡೇ ಪಂಜಾಬ್, ದೆಹಲಿ, ರಾಜಸ್ಥಾನ, ಹರಿಯಾಣ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಮತ್ತು ಕೆನಡಾ, ನೇಪಾಳ ಸೇರಿ ಹಲವು ದೇಶಗಳಲ್ಲಿ ತನ್ನ ಗ್ಯಾಂಗ್ ಮೂಲಕ ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದಾನೆ ಎನ್ನುವುದು ಪೊಲೀಸರ ವಾದ.

ಪೊಲೀಸ್ ಅಧಿಕಾರಿಯ ಪುತ್ರ: ಅಂದ ಹಾಗೆ, ಬಿಷ್ಣೋಯಿ ಗ್ಯಾಂಗ್ ಎಂದರೆ ಅದು ಹತ್ತಿಪ್ಪತ್ತು ಮಂದಿಯ ಗುಂಪಲ್ಲ; ವಿವಿಧ ರಾಜ್ಯ ಮತ್ತು ದೇಶಗಳಲ್ಲಿ ವ್ಯಾಪಿಸಿರುವ 700 ಮಂದಿಯ ಬೃಹತ್ ಪಡೆ. ಅನೇಕ ಶಾರ್ಪ್‌ಶೂಟರ್‌ಗಳಿರುವ, ಗೋಲ್ಡಿ ಬ್ರಾರ್, ಸಚಿನ್ ಥಾಪನ್, ಅನ್ಮೋಲ್ ಬಿಷ್ಣೋಯಿ, ವಿಕ್ರಮ್‌ಜೀತ್ ಸಿಂಗ್, ಕಾಲಾ ಜಠೇರಿ, ಕಾಲಾ ರಾಣಾ ಮುಂತಾದ ಕುಖ್ಯಾತ ಗ್ಯಾಂಗ್‌ಸ್ಟರ್‌ಗಳ ಬೆಂಬಲ ಇರುವ ಬೃಹತ್ ಕ್ರಿಮಿನಲ್ ಜಾಲದ ರೂವಾರಿ 31 ವರ್ಷದ ಲಾರೆನ್ಸ್ ಬಿಷ್ಣೋಯಿ.

ಲಾರೆನ್ಸ್ ಹುಟ್ಟಿದ್ದು ಪಂಜಾಬ್‌ನಲ್ಲಿ. ಪೊಲೀಸ್ ಅಧಿಕಾರಿಯಾಗಿದ್ದ ಈತನ ತಂದೆ ಕೆಲಸಕ್ಕೆ ರಾಜೀನಾಮೆ ನೀಡಿ ಕೃಷಿಕರಾಗಿದ್ದರು. ನೂರಾರು ಎಕರೆ ಜಮೀನು ಹೊಂದಿರುವ ಶ್ರೀಮಂತ ಕುಟುಂಬ ಇವರದ್ದು. ದುಬಾರಿ ಬಟ್ಟೆ, ಶೂ ತೊಟ್ಟು, ಸ್ವಂತ ವಾಹನದಲ್ಲಿ ಕಾಲೇಜಿಗೆ ಹೋಗುತ್ತಿದ್ದ ಸುರದ್ರೂಪಿ ಲಾರೆನ್ಸ್ ಕಾನೂನು ಪದವೀಧರ. ಕಾಲೇಜಿನಲ್ಲಿದ್ದಾಗಲೇ ಭೂಗತ ಜಗತ್ತಿನೆಡೆಗೆ ಆಕರ್ಷಿತನಾದ ಈತ, ಕಾನೂನುವಿರೋಧಿ ಕೃತ್ಯಗಳಲ್ಲಿ ಭಾಗಿಯಾಗತೊಡಗಿದ. ಗೋಲ್ಡಿ ಬ್ರಾರ್ ಮತ್ತು ತನ್ನ ತಮ್ಮ ಅನ್ಮೋಲ್ ಬಿಷ್ಣೋಯಿ ಜತೆ ಸೇರಿ ಒಂದು ತಂಡವನ್ನೇ ಕಟ್ಟಿದ.

ಲಾರೆನ್ಸ್ ವಿರುದ್ಧ ಮಾದಕ ವಸ್ತು ಕಳ್ಳಸಾಗಣೆ, ಹತ್ಯೆ, ಬೆದರಿಕೆ, ಸುಲಿಗೆ ಸೇರಿದಂತೆ 71ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈತ 2015ರಿಂದ ಜೈಲಿನಲ್ಲಿದ್ದುಕೊಂಡೇ ಹಲವು ಖ್ಯಾತನಾಮರ ಹತ್ಯೆ ಮಾಡಿಸಿದ್ದಾನೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹೇಳುತ್ತಿದೆ. ಬಿಷ್ಣೋಯಿ ಹೆಸರು ದೇಶದಾದ್ಯಂತ ಹರಿದಾಡಿದ್ದು 2018ರಲ್ಲಿ. ಪ್ರಕರಣವೊಂದರ ವಿಚಾರಣೆಗೆ ಜೋಧಪುರ ಕೋರ್ಟ್‌ಗೆ ಹೋಗುವ ಹಾದಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಲಾರೆನ್ಸ್ ಬಿಷ್ಣೋಯಿ, ಸಲ್ಮಾನ್ ಖಾನ್ ಅವರನ್ನು ಕೊಲ್ಲುವುದಾಗಿ ಹೇಳಿದ್ದ. ಆಗ ಬಹುತೇಕರು ಅದನ್ನು ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ, ನಂತರ ಈತ ಎಸಗಿದ ಕೃತ್ಯಗಳು ಈತ ಸಾಮಾನ್ಯ ಪಾತಕಿಯಲ್ಲ ಎನ್ನುವುದನ್ನು ಸಾರಿದ್ದವು.

ಖ್ಯಾತ ಪಂಜಾಬಿ ಗಾಯಕ ಸಿಧು ಮೂಸೇವಾಲ 2022ರಲ್ಲಿ ಕೊಲೆಯಾದಾಗ ಅದರ ಹಿಂದೆ ಕೇಳಿಬಂದ ಹೆಸರು ಇದೇ ಲಾರೆನ್ಸ್ ಬಿಷ್ಣೋಯಿಯದ್ದು. 2023ರಲ್ಲಿ ಕರ್ಣಿ ಸೇನಾ ಮುಖ್ಯಸ್ಥ ಸುಖ್‌ದೇವ್ ಸಿಂಗ್ ಅವರ ಕೊಲೆಯಾಯಿತು. ಅದೂ ಈತನ ಗ್ಯಾಂಗ್‌ನ ಕೃತ್ಯ ಎನ್ನುವುದು ಪೊಲೀಸ್ ತನಿಖೆಯಿಂದ ತಿಳಿದುಬಂತು. ಭಾರತದಲ್ಲಷ್ಟೇ ಅಲ್ಲ; ಈತನ ತಮ್ಮ ಅನ್ಮೋಲ್, ಕೆನಡಾ–ಅಮೆರಿಕ ನಡುವೆ ಓಡಾಡಿಕೊಂಡಿದ್ದು, ಅಲ್ಲಿಂದಲೇ ಹಲವು ಅಪರಾಧ ಕೃತ್ಯಗಳನ್ನು ನಡೆಸುತ್ತಿರುವುದು ಕೂಡ ಪೊಲೀಸರ ಗಮನಕ್ಕೆ ಬಂದಿದೆ.

ಕೃಷ್ಣಮೃಗ ಬೇಟೆಗೆ ಪ್ರತೀಕಾರ?: ಸಲ್ಮಾನ್ ಖಾನ್ ಅವರನ್ನು ಕೊಲ್ಲುವುದಾಗಿ ಲಾರೆನ್ಸ್ ಹಲವು ಬಾರಿ ಘೋಷಿಸಿದ್ದರೂ ಮತ್ತು ಈ ವರ್ಷದ ಏಪ್ರಿಲ್‌ನಲ್ಲಿ ಆತನ ಗ್ಯಾಂಗ್ ಸದಸ್ಯರು ಸಲ್ಮಾನ್ ಖಾನ್ ಮನೆಯ ಹೊರಗಡೆ ಗುಂಡು ಹಾರಿಸಿದ್ದರೂ, ಆ ಬಗ್ಗೆ ಯಾರೂ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಆದರೆ, ಈಚೆಗೆ ಮುಂಬೈನಲ್ಲಿ ಮಾಜಿ ಸಚಿವ, ಸಲ್ಮಾನ್ ಖಾನ್ ಅವರ ಆಪ್ತ ಎನ್ನಲಾದ ಬಾಬಾ ಸಿದ್ದೀಕಿ ಅವರ ಹತ್ಯೆ ಪ್ರಕರಣವು ಬಾಲಿವುಡ್ ಸೇರಿದಂತೆ ಪೊಲೀಸ್ ವಲಯವನ್ನೂ ಬೆಚ್ಚಿಬೀಳಿಸಿದೆ. ಘಟನೆಯ ನಂತರ ಸಲ್ಮಾನ್ ಖಾನ್ ಮನೆಗೆ ಭದ್ರತೆ ಹೆಚ್ಚಿಸಲಾಗಿದೆ.

ಸಲ್ಮಾನ್ ಖಾನ್ ಅವರನ್ನು ಲಾರೆನ್ಸ್ ಬಿಷ್ಣೋಯಿ ಗುರಿ ಮಾಡಿಕೊಂಡಿರುವುದು ಏಕೆ? ಇದಕ್ಕೆ ಸಿಕ್ಕ ಉತ್ತರದಿಂದ ಪೊಲೀಸರು ಸೇರಿದಂತೆ ಅನೇಕರು ಅಚ್ಚರಿಗೊಂಡಿದ್ದಾರೆ. ಅದೇನೆಂದರೆ, ಸಲ್ಮಾನ್ ಖಾನ್ 1998ರಲ್ಲಿ ಕೃಷ್ಣಮೃಗಗಳನ್ನು ಬೇಟೆಯಾಡಿದ್ದು. ಕೃಷ್ಣಮೃಗ ಬಿಷ್ಣೋಯಿ ಸಮುದಾಯಕ್ಕೆ ದೈವ ಸಮಾನ. ಅದನ್ನು ಕೊಂದ ತಪ್ಪಿಗೆ ಲಾರೆನ್ಸ್, ಸಲ್ಮಾನ್ ಅವರನ್ನು ಹತ್ಯೆ ಮಾಡಲು ಪ್ರಯತ್ನಿಸುತ್ತಿದ್ದಾನೆ ಎನ್ನುವುದು ಒಂದು ವಾದ. ಇನ್ನೊಂದು ವಾದವೂ ಇದೆ. 'ಸಲ್ಮಾನ್ ಖಾನ್ ಕೃಷ್ಣಮೃಗ ಬೇಟೆಯಾಡಿದ ಘಟನೆ ನಡೆದಾಗ ಲಾರೆನ್ಸ್ ಐದು ವರ್ಷದ ಬಾಲಕ. ಕೃಷ್ಣಮೃಗ ಕೊಂದಿದ್ದಕ್ಕಾಗಿ ಒಬ್ಬ ವಕೀಲ/ಗ್ಯಾಂಗ್‌ಸ್ಟರ್, ಸೂಪರ್ ಸ್ಟಾರ್ ಒಬ್ಬರನ್ನು ಕೊಲ್ಲಲು ಹೊರಡುತ್ತಾನೆ ಮತ್ತು ಆತ ಪೊಲೀಸರ ವಶದಲ್ಲಿದ್ದುಕೊಂಡೇ ಇದನ್ನೆಲ್ಲ ಮಾಡುತ್ತಿದ್ದಾನೆ ಎಂದರೆ ಇದು ಸಿನಿಮಾದವರು ಕೂಡ ನಂಬಲಾಗದ ಕಥೆಯಂತಿದೆ' ಎಂದು ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಹೇಳಿದ್ದಾರೆ. ಹಲವರು ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಖ್ಯಾತನಾಮರು, ಉದ್ಯಮಿಗಳೇ ಗುರಿ: ತನಗೆ ಭಗತ್ ಸಿಂಗ್ ಸ್ಫೂರ್ತಿಯ ವ್ಯಕ್ತಿ ಎಂದು ಲಾರೆನ್ಸ್ ಹೇಳುತ್ತಾನೆ. ಆದರೆ, ಪೊಲೀಸರು ಹೇಳುವಂತೆ, ಲಾರೆನ್ಸ್ ಭೂಗತ ಪಾತಕಿ ದಾವೂದ್ ಇಬ್ರಾಹಿಂ ದಾರಿಯಲ್ಲಿ ಸಾಗುತ್ತಿದ್ದಾನೆ. ದಾವೂದ್ ಬಾಲಿವುಡ್‌ನಲ್ಲಿ ಹಲವರ ಸ್ನೇಹ ಮಾಡುವ ಮೂಲಕ ಮತ್ತು ಹಲವರನ್ನು ಗುರಿಯಾಗಿಸಿಕೊಳ್ಳುವ ಮೂಲಕ ಕುಖ್ಯಾತಿ ಗಳಿಸಿದ್ದ; ಚಿತ್ರರಂಗದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದ್ದ. ಲಾರೆನ್ಸ್ ಕೂಡ ಅದೇ ಹಾದಿಯಲ್ಲಿ ಸಾಗುತ್ತಿದ್ದು, ಬಾಲಿವುಡ್ ಮೇಲೆ ಹಿಡಿತ ಸಾಧಿಸಲು ಹೊರಟಿದ್ದಾನೆ. ಅದರ ಭಾಗವಾಗಿಯೇ ಚಿತ್ರರಂಗದ ಹಲವರಿಗೆ ಹತ್ತಿರವಾಗಿದ್ದ ಬಾಬಾ ಸಿದ್ದೀಕಿ ಅವರನ್ನು ಹತ್ಯೆ ಮಾಡಿರುವುದು ಮತ್ತು ಸಲ್ಮಾನ್ ಖಾನ್ ಅವರಂಥ ಸ್ಟಾರ್ ಅನ್ನು ಗುರಿಯಾಗಿಸಿಕೊಂಡಿರುವುದು ಎನ್ನಲಾಗುತ್ತಿದೆ.

ಸಮಾಜದ ಖ್ಯಾತನಾಮರನ್ನು, ಉದ್ಯಮಿಗಳನ್ನು, ನಟ ನಟಿಯರನ್ನು ಗುರಿಯಾಗಿಸಿಕೊಂಡು ಭಯದ ವಾತಾವರಣ ನಿರ್ಮಿಸುವುದು ಲಾರೆನ್ಸ್ ಗ್ಯಾಂಗ್‌ನ ಗುರಿ ಎಂದು ಹೇಳುತ್ತದೆ ಎನ್‌ಐಎ.

ನಟ ಸಲ್ಮಾನ್ ಖಾನ್ ಅವರಲ್ಲದೇ, ಹಾಸ್ಯ ಕಲಾವಿದ ಮುನವ್ವರ್ ಫಾರೂಕಿ, ಬಾಬಾ ಸಿದ್ದೀಕಿ ಮಗ ಜೀಶನ್ ಸಿದ್ದೀಕಿ, ಪಂಜಾಬಿ ಗಾಯಕ ಸಿಧು ಮೂಸೇವಾಲ ಮ್ಯಾನೇಜರ್ ಷಗನ್‌ಪ್ರೀತ್ ಸಿಂಗ್ ಸೇರಿದಂತೆ ಇನ್ನೂ ಕೆಲವರು ಬಿಷ್ಣೋಯಿಯ 'ಹಿಟ್ ಲಿಸ್ಟ್'ನಲ್ಲಿದ್ದಾರೆ ಎನ್ನಲಾಗುತ್ತಿದೆ.

ವಾಸ್ತವ, ವದಂತಿ, ಕಲ್ಪನೆ, ದಂತಕಥೆ ಎಲ್ಲವೂ ಬೆರೆತಂತಿರುವ ಲಾರೆನ್ಸ್ ಬಿಷ್ಣೋಯಿ ಕಥೆ ಏಕಕಾಲಕ್ಕೆ ಅಚ್ಚರಿಯನ್ನೂ, ಆತಂಕವನ್ನೂ ಉಂಟುಮಾಡುತ್ತಿದೆ. ಒಬ್ಬ ಸಾಧಾರಣ ಯುವಕ ಅಂತರರಾಷ್ಟ್ರೀಯ ಪಾತಕಿಯಾಗಿ ಬೆಳೆದ ಕಥೆ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಆಧಾರ: ಪಿಟಿಐ, ಬಿಬಿಸಿ, ಎನ್‌ಐಎ ಪ್ರಕಟಣೆ, ರಾಯಿಟರ್ಸ್

ಜೈಲಿನಿಂದಲೇ ಸಂದರ್ಶನ!

2022ರ ಸೆಪ್ಟೆಂಬರ್ 3 ಮತ್ತು 4ರಂದು ಲಾರೆನ್ಸ್ ಬಿಷ್ಣೋಯಿ ಜೈಲಿನಲ್ಲಿರುವಾಗಲೇ ಸುದ್ದಿ ವಾಹಿನಿಯೊಂದು ಆತನನ್ನು ಮೊಬೈಲ್ ಮೂಲಕ ಸಂದರ್ಶನ ನಡೆಸಿತ್ತು. ಮೊದಲ ಸಂದರ್ಶನದ ವೇಳೆ ಸಂದರ್ಶಕ ಖಾರಾರ್‌ನಲ್ಲಿರುವ ಪಂಜಾಬ್‌ನ ಅಪರಾಧ ತನಿಖಾ ಸಂಸ್ಥೆ (ಸಿಐಎ) ಕಚೇರಿ ಆವರಣದಲ್ಲಿದ್ದರು. ಎರಡನೇ ಸಂದರ್ಶನವನ್ನು ರಾಜಸ್ಥಾನದಿಂದ ಮಾಡಿದ್ದರು. ಕುಟುಕು ಕಾರ್ಯಾಚರಣೆಯ ಭಾಗವಾಗಿ ವಾಹಿನಿಯು ಈ ಸಂದರ್ಶನ ನಡೆಸಿತ್ತು ಎಂದು ಹೇಳಲಾಗಿದೆ. ವಾಹಿನಿಯು 2023ರ ಮಾರ್ಚ್‌ನಲ್ಲಿ ಸಂದರ್ಶನವನ್ನು ಪ್ರಸಾರ ಮಾಡಿತ್ತು. ನಂತರ ವಿಡಿಯೊವನ್ನು ಯುಟ್ಯೂಬ್, ವೆಬ್‌ಸೈಟ್‌ನಿಂದ ತೆಗೆದುಹಾಕಲಾಗಿತ್ತು. ಪ್ರಕರಣವು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಇದರ ತನಿಖೆಗಾಗಿ ಪಂಜಾಬ್ ಹರಿಯಾಣ ಹೈಕೋರ್ಟ್ ವಿಶೇಷ ತನಿಖಾ ತಂಡವನ್ನೂ ರಚಿಸಿತ್ತು.

ಬಿಷ್ಣೋಯಿ ವಿರುದ್ಧದ ಆರೋಪಗಳು



- ಪಂಜಾಬ್ ರಾಜ್ಯವೊಂದರಲ್ಲೇ ಲಾರೆನ್ಸ್ ಬಿಷ್ಣೋಯಿ ವಿರುದ್ಧ ಕೊಲೆ, ಕೊಲೆ ಯತ್ನ, ಬೆದರಿಕೆ ಸುಲಿಗೆ ಸೇರಿದಂತೆ 71 ಪ್ರಕರಣಗಳು ದಾಖಲಾಗಿವೆ. ನಾಲ್ಕು ಪ್ರಕರಣಗಳಲ್ಲಿ ಆತ ತಪ್ಪಿತಸ್ಥ ಎಂದು ಸಾಬೀತಾಗಿದೆ. ದೆಹಲಿ, ರಾಜಸ್ಥಾನ, ಹರಿಯಾಣ, ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಬಿಷ್ಣೋಯಿ ಮತ್ತು ತಂಡದ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ
- ದೆಹಲಿ ಪೊಲೀಸರು ಪಟ್ಟಿ ಮಾಡಿರುವ 11 ಕ್ರಿಮಿನಲ್ ಗ್ಯಾಂಗ್‌ಗಳಲ್ಲಿ ಮೊದಲ ಹೆಸರು ಬಿಷ್ಣೋಯಿ ಮತ್ತು ಗೋಲ್ಡಿ ಬ್ರಾರ್ ಗ್ಯಾಂಗ್‌ನದ್ದು
- ಭಯೋತ್ಪಾದಕರು ಮತ್ತು ಸಂಘಟಿತ ಅಪರಾಧಗಳನ್ನು ನಡೆಸುವ ತಂಡಗಳ ಸಂಪರ್ಕದ ಬಗ್ಗೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಲಾರೆನ್ಸ್ ಬಿಷ್ಣೋಯಿ ಮತ್ತು ತಂಡದ ವಿರುದ್ಧವೂ ತನಿಖೆ ನಡೆಸುತ್ತಿದೆ.
- **2022ರ ಮೇ 19:** ಪಂಜಾಬ್‌ನ ಖ್ಯಾತ ರ‍್ಯಾಪರ್, ಗಾಯಕ ಶುಭ್‌ದೀಪ್ ಸಿಂಗ್ ಸಿಧು ಅಲಿಯಾಸ್ ಸಿಧು ಮೂಸೇವಾಲ ಹತ್ಯೆ
- **2022ರ ಸೆಪ್ಟೆಂಬರ್:** 39 ಕೆಜಿ ಹೆರಾಯಿನ್ ಜಪ್ತಿ ಮಾಡಿದ್ದ ಗುಜರಾತ್ ಪೊಲೀಸರು
- **2023ರ ಸೆ.21:** ಕೆನಡಾದ ವಿನ್ನಿಪೆಗ್‌ನಲ್ಲಿ ಗ್ಯಾಂಗ್‌ಸ್ಟರ್, ಪ್ರತ್ಯೇಕ ಖಾಲಿಸ್ತಾನದ ಪರ ಸಹಾನುಭೂತಿ ಹೊಂದಿದ್ದ ಸಿಕ್ಖಾ ದುನುಕೆ ಕೊಲೆ
- **2023ರ ಡಿ.5:** ರಾಜಸ್ಥಾನದಲ್ಲಿ ಕರ್ಣಿ ಸೇನಾ ಮುಖ್ಯಸ್ಥ ಸುಖದೇವ್ ಸಿಂಗ್ ಗೊಗಾಮೆಡಿ ಹತ್ಯೆ
- **2024ರ ಏಪ್ರಿಲ್ 14:** ಮುಂಬೈನ ಬಾಂದ್ರಾದಲ್ಲಿರುವ ಸಲ್ಮಾನ್ ಖಾನ್ ಮನೆಯ ಹೊರಗಡೆ ಗುಂಡಿನ ದಾಳಿ
- **2024ರ ಸೆ.3:** ಕೆನಡಾದಲ್ಲಿ ನೆಲಸಿರುವ ಭಾರತೀಯ ಸಂಜಾತ ಗಾಯಕ ಎ.ಪಿ.ಧಿಲ್ಲೋನ್ ಅವರ ಮನೆಯ ಮುಂದೆ ಗುಂಡಿನ ದಾಳಿ
- **2024ರ ಸೆ.12:** ದೆಹಲಿಯಲ್ಲಿ ಜಿಮ್ ನಡೆಸುತ್ತಿದ್ದ ಉದ್ಯಮಿ ನಾದಿರ್ ಶಾ ಗುಂಡಿಟ್ಟು ಹತ್ಯೆ
- **2024ರ ಅ.12:** ಮುಂಬೈನಲ್ಲಿ ಮಾಜಿ ಸಚಿವ, ಎನ್‌ಸಿಪಿ ಮುಖಂಡ ಬಾಬಾ ಸಿದ್ದೀಕಿ ಹತ್ಯೆ

ಮರಗಿಡ, ಪ್ರಾಣಿಪಕ್ಷಿಗಳೇ ದೇವರು ಎನ್ನುವ ಬಿಷ್ಣೋಯಿಗಳು..

ಬಿಷ್ಣೋಯಿ ಒಂದು ಬುಡಕಟ್ಟು ಸಮುದಾಯವಾಗಿದ್ದು, ಈ ಸಮುದಾಯದವರು ಮುಖ್ಯವಾಗಿ ರಾಜಸ್ಥಾನದ ಥಾರ್ ಮರುಭೂಮಿಯ ಸುತ್ತಮುತ್ತ ವಾಸಿಸುತ್ತಾರೆ. 15ನೇ ಶತಮಾನದಲ್ಲಿ ಗುರು ಜಂಭೇಶ್ವರ ಅವರಿಂದ ಆರಂಭವಾದ ಈ ಪಂಗಡದಲ್ಲಿ ಇಂದು ಸುಮಾರು 15 ಲಕ್ಷ ಮಂದಿ ಇದ್ದಾರೆ. ಮರಗಿಡ, ಪ್ರಾಣಿಪಕ್ಷಿಗಳು, ವನ್ಯಮೃಗಗಳು ಇವರಿಗೆ ದೇವರ ಸಮಾನ. ಅವುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು, ಅವುಗಳೊಂದಿಗೆ ಸಹಬಾಳ್ವೆ ನಡೆಸುವುದು ತಮ್ಮ ಧಾರ್ಮಿಕ ಕರ್ತವ್ಯ ಎಂದೇ ಇವರು ಭಾವಿಸುತ್ತಾರೆ. ಬಿಬಿಸಿ ಇವರನ್ನು 'ಭಾರತದ ಮೂಲ ಪರಿಸರ ಸಂರಕ್ಷಕರು' ಎಂದು ಕರೆದಿದೆ. ಪರಿಸರ ಸಂರಕ್ಷಣೆ ಎನ್ನುವುದು ಮುಖ್ಯವಾಹಿನಿಯ ಚರ್ಚೆಯ ವಿಚಾರ ಆಗುವುದಕ್ಕೆ ಮುಂಚೆಯೇ ಆ ಕೆಲಸ ಮಾಡುತ್ತಿದ್ದವರು. ಇವರು ವಾಸ ಮಾಡುವ ಹಳ್ಳಿಗಳಲ್ಲಿ ಪ್ರಾಣಿ ಪಕ್ಷಗಳು ಯಾವುದೇ ಭಯ ಇಲ್ಲದೇ ಓಡಾಡಿಕೊಂಡಿರುತ್ತವೆ. ವಿಷ್ಣುವಿನ ಆರಾಧಕರಾದ ಇವರು ಸಸ್ಯಾಹಾರಿಗಳಾಗಿದ್ದು, ಪರಿಸರಕ್ಕೆ ಮತ್ತು ಪ್ರಾಣಿ ಸಂಕುಲಕ್ಕೆ ತೊಂದರೆಯಾಗದಂತೆ ಸರಳ ಜೀವನ ಶೈಲಿ ರೂಢಿಸಿಕೊಂಡಿದ್ದಾರೆ.

1730ರಲ್ಲಿ ರಾಜನೊಬ್ಬ ಅರಮನೆಯನ್ನು ಕಟ್ಟಲು ಮರಗಳನ್ನು ಕಡಿಯಲು ಆಜ್ಞಾಪಿಸುತ್ತಾನೆ. ಮರ ಕಡಿಯಬಾರದು ಎಂದು ಬಿಷ್ಣೋಯಿ ಸಮುದಾಯ ವಿರೋಧ ವ್ಯಕ್ತಪಡಿಸುತ್ತದೆ. ಆಗ ನಡೆದ ಸಂಘರ್ಷದಲ್ಲಿ ಸಮುದಾಯದ ಮಹಿಳೆಯರು, ಪುರುಷರು, ಮಕ್ಕಳು ಸೇರಿ 363 ಮಂದಿ ಹತರಾಗುತ್ತಾರೆ. ಈಗಲೂ ಪ್ರಾಣಿಬೇಟೆಯನ್ನು ತೀವ್ರವಾಗಿ ವಿರೋಧಿಸುವ ಇವರು, ಬೇಟೆಗಾರರ ವಿರುದ್ಧ ನ್ಯಾಯಾಲಯಗಳಲ್ಲಿ ಹೋರಾಟ ನಡೆಸುತ್ತಿದ್ದಾರೆ. ತನ್ನ ಸಂಗಡಿಗರೊಂದಿಗೆ ಕೃಷ್ಣಮೃಗ ಬೇಟೆಯಾಡಿದ್ದ ಬಾಲಿವುಡ್ ನಟ ಸಲ್ಮಾನ್ ಖಾನ್ ಪ್ರಕರಣದಲ್ಲಿಯೂ ನ್ಯಾಯಾಲಯದಲ್ಲಿ ಪಟ್ಟು ಬಿಡದೇ ಹೋರಾಡಿದ್ದು ಇದೇ ಸಮುದಾಯ.

'ಬಿಳಿಚುಕ್ಕಿ ಹಳ್ಳಿಹಕ್ಕಿ' ಕಾಯಿಲೆಯ ಕಥೆ

ಮಹೇಶ್ ಗೌಡ

ಈ ಹಿಂದೆ ರಾಜ್ ಬಿ. ಶೆಟ್ಟಿ ಅಭಿನಯದ 'ಮಹಿರ' ಸಿನಿಮಾವನ್ನು ನಿರ್ದೇಶಿಸಿದ್ದ ಮಹೇಶ್ ಗೌಡ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರದೊಂದಿಗೆ ಮತ್ತೆ ಸಕ್ರಿಯರಾಗಿದ್ದಾರೆ. ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಚಿತ್ರದಲ್ಲಿ ನಿರ್ದೇಶನ, ನಿರ್ಮಾಣದ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಚಿತ್ರದ ಶೀರ್ಷಿಕೆ ಕೇಳಿದರೆ ಕಲಾತ್ಮಕ ಚಿತ್ರ ಅನ್ನಿಸಬಹುದು. ಆದರೆ ಇದು ಸಂಪೂರ್ಣ ಕಮರ್ಷಿಯಲ್ ಸಿನಿಮಾ. ವಿಟಿಲಿಗೋ ಅಂದರೆ, ತೊನ್ನಿನ ಸಮಸ್ಯೆ ಕುರಿತಾದ ಕಥೆ ಹೊಂದಿರುವ ಚಿತ್ರವಿದು. ಸಾಮಾನ್ಯವಾಗಿ ಇಂಥ ಕಥಾ ಹಂದರದ ಯಾವುದೇ ಸಿನಿಮಾದಲ್ಲಿ ಪಾತ್ರಧಾರಿಗಳು ಮೇಕಪ್ ಮೂಲಕ ಅದಕ್ಕೆ ಜೀವ ತುಂಬುತ್ತಾರೆ. ಆದರೆ ನಾನೇ ಸ್ವತಃ ಆ ಸಮಸ್ಯೆ ಹೊಂದಿರುವುದರಿಂದ ಪಾತ್ರ ನಿರ್ವಹಿಸಿದ್ದೇನೆ' ಎಂದರು ಮಹೇಶ್ ಗೌಡ.

ರೊಮ್ಯಾಂಟಿಕ್ ಶೈಲಿಯಲ್ಲಿ ಸಾಗುವ ಈ ಚಿತ್ರದಲ್ಲಿ ಹಾಸ್ಯಕ್ಕೂ ಕೊರತೆಯಿಲ್ಲ. ನಗಿಸುತ್ತಲೇ ಅಳಿಸುವ, ಬಹುಕಾಲ ಕಾಡುವ, ಎಲ್ಲ ವಯೋಮಾನದ, ಅಭಿರುಚಿಗಳ ಪ್ರೇಕ್ಷಕರಿಗೂ ಇಷ್ಟವಾಗುವ ಚಿತ್ರವಿದು ಎಂದಿದೆ ಚಿತ್ರತಂಡ.

ಮದನ್ ಪಟೇಲ್, ಡಿ.ಕೆ. ಶಿವಕುಮಾರ್, ಮಯೂರ್ ಪಟೇಲ್

'ತಮಟೆ'ಗೆ ಸಾಥ್ ನೀಡಿದ ಡಿ.ಕೆ.ಶಿವಕುಮಾರ್

ಮಯೂರ್ ಪಟೇಲ್ ಚೊಚ್ಚಲ ನಿರ್ದೇಶನದಲ್ಲಿ ಮದನ್ ಪಟೇಲ್ ಮುಖ್ಯಭೂಮಿಕೆಯಲ್ಲಿರುವ 'ತಮಟೆ' ಚಿತ್ರದ ಶೋ ರೀಲ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿತ್ರದ ಶೋ ರೀಲ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

'ನಾನು ಟೂರಿಂಗ್ ಟಾಕೀಸ್ ನಡೆಸುತ್ತಿದೆ. ಸಿನಿಮಾ ನೋಡಿ ಇಪ್ಪತ್ತೈದು ವರ್ಷಗಳಾಗಿವೆ. ನಮ್ಮದೇ ಚಿತ್ರಮಂದಿರಗಳಿದ್ದರೂ ನಾನು ಸಿನಿಮಾ ನೋಡಿಲ್ಲ. ಎಷ್ಟೋ ದಿನಗಳ ನಂತರ 'ತಮಟೆ' ಚಿತ್ರದ ಶೋ ರೀಲ್ ವೀಕ್ಷಿಸಿದೆ. ಸಮಯ ಸಿಕ್ಕಾಗ ಪೂರ್ತಿ ಸಿನಿಮಾ ನೋಡುತ್ತೇನೆ. ಗ್ರಾಮೀಣ ಸೊಗಡಿನ ಹಾಗೂ 'ತಮಟೆ' ವಾದ್ಯಗಾರನೊಬ್ಬನ ಜೀವನದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮದನ್ ಪಟೇಲ್ ಅವರು ಚೆನ್ನಾಗಿ ಅಭಿನಯಿಸಿದ್ದಾರೆ. ಚಿತ್ರ ಭರ್ಜರಿ ಯಶಸ್ಸು ಕಾಣಲಿ' ಎಂದು ಹಾರೈಸಿದರು ಡಿ.ಕೆ.ಶಿವಕುಮಾರ್.

'ನಾನು ಕೆಲವು ವರ್ಷಗಳ ಹಿಂದೆ ಈ ಕಾದಂಬರಿ ಬರೆದಿದ್ದೆ. ಈಗ ಅದನ್ನು ನನ್ನ ಮಗ ಮಯೂರ್ ಪಟೇಲ್ ನಿರ್ದೇಶನ ಮಾಡಿದ್ದಾನೆ. ನಾನೇ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನಾನು ಈವರೆಗೂ ಮಾಡಿರದ ಪಾತ್ರವಿದು. ಈ ಚಿತ್ರಕ್ಕೆ ಚಿತ್ರಕಥೆ ಬರೆಯುವುದರೊಂದಿಗೆ ಸಂಗೀತವನ್ನು ನೀಡಿ, ನಿರ್ಮಾಣವನ್ನು ಮಾಡಿದ್ದೇನೆ. ಈಗಾಗಲೇ ಅನೇಕ ಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗಿರುವ ಈ ಚಿತ್ರವನ್ನು ಸದ್ಯದಲ್ಲೇ ಬಿಡುಗಡೆ ಮಾಡುತ್ತಿದ್ದೇವೆ' ಎಂದರು ಮದನ್ ಪಟೇಲ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ನ್ಯೂಯಾರ್ಕ್‌ಗೆ ಭೇಟಿ ನೀಡಿದ ನಂತರ ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು, 'ಭಾರತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಪಡೆದಿದ್ದು, ವೀಟೊ ಅಧಿಕಾರವೂ ಸಿಕ್ಕಿದೆ' ಎಂದು ಹೇಳಿಕೊಳ್ಳುತ್ತಾ, ಪ್ರಧಾನಿ ಮೋದಿ ಅವರ ಎರಡು ವಿಡಿಯೊಗಳನ್ನು ತಮ್ಮ ಖಾತೆಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಭಾರತಕ್ಕೆ ಕಾಯಂ ಸದಸ್ಯತ್ವ ಸಿಕ್ಕಿದೆ ಎನ್ನುವುದು ಸುಳ್ಳು.

ವಿಡಿಯೊ ತುಣುಕನ್ನು ಇನ್‌ವಿಡ್ ಟೂಲ್ ಮೂಲಕ ಹುಡುಕಾಡಿದಾಗ ಹಲವು ಕೀ ಫ್ರೇಮ್‌ಗಳು ಕಂಡು ಬಂದವು. ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಶೋಧ ನಡೆಸಿದಾಗ ಈ ಪೋಸ್ಟನ್ನು ಹಲವರು 'ಎಕ್ಸ್' ಮತ್ತು 'ಫೇಸ್‌ಬುಕ್'ನಲ್ಲಿ ಹಂಚಿಕೊಂಡಿರುವುದು ಗೊತ್ತಾಯಿತು. ವಿಶ್ವ ಸಂಸ್ಥೆಯ ಅಧಿಕೃತ ವೆಬ್‌ಸೈಟ್ ಪರಿಶೀಲಿಸಿದಾಗ ಈ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಭದ್ರತಾ ಮಂಡಳಿಯಲ್ಲಿ ಚೀನಾ, ಫ್ರಾನ್ಸ್, ರಷ್ಯಾ ಒಕ್ಕೂಟ, ಬ್ರಿಟನ್ ಮತ್ತು ಅಮೆರಿಕ ಮಾತ್ರ ವೀಟೊ ಅಧಿಕಾರ ಸಹಿತ ಕಾಯಂ ಸದಸ್ಯತ್ವ ಹೊಂದಿವೆ. ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಇನ್ನೂ ಸಿಕ್ಕಿಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮನುಷ್ಯನನ್ನು ಮನುಷ್ಯನಂತೆ ನೋಡುವುದೇ ಅಧ್ಯಾತ್ಮ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 46

ಗ್ರೀಕ್ ದೇಶದೊಳಗ ಡಯೋಜನಿಸ್ ಅಂತ ಒಬ್ಬ ಸಂತ ಇದ್ದ. ನಮ್ಮಲ್ಲಿ ಸರ್ವಜ್ಞ ಇದ್ದ ಹಾಂಗ. ಆತ ಒಂದಿನ ಎರಡು ತಲೆಬುರಡೆ ಇಟಕೊಂಡು ಸ್ಮಶಾನದಲ್ಲಿ ಕುಳಿತಿದ್ದ. ಅದನ್ನು ನೋಡಿದ ಅವನ ಸ್ನೇಹಿತ 'ಸ್ಮಶಾನದಲ್ಲಿ ಯಾಕೆ ಕುಳಿತಿದ್ದಿ' ಎಂದು ಕೇಳಿದ. 'ಸ್ಮಶಾನದಲ್ಲಿ ಮಸ್ತ್ ಅರಾಂ ಐತಪ. ಅದಕ್ಕೆ ಇಲ್ಲೇ ಕುಳಿತೆ' ಅಂದ ಡಯೋಜನಿಸ್. 'ತಲೆ ಬುರಡೆ ಯಾಕೆ ಇಟಕೊಂಡಿದ್ದಿ' ಎಂದು ಕೇಳಿದ ಸ್ನೇಹಿತ. 'ಇದರಲ್ಲಿ ಒಂದು ಅತ್ಯಂತ ಶ್ರೀಮಂತನ ತಲೆಬುರಡೆ, ಇನ್ನೊಂದು ಕಡು ಬಡವನ ತಲೆ ಬುರಡೆ. ಇವ ಉಚ್ಚ ಜಾತಿ ಅಂತಿದ್ದ. ಇನ್ನೊಬ್ಬ ಕೀಳು ಜಾತಿ ಅಂತಿದ್ದ. ಈಗ ನೋಡು ಎರಡೂ ಒಂದೇ ಕಡೆ ಜೋಡಿಯಾಗಿ ಕುಳಿತಿವೆ. ನಿಮ್ಮ ಸಮಾಜದಲ್ಲಿ ಇಲ್ಲದ ಸಮಾನತೆ ಸ್ಮಶಾನದೊಳಗೆ ಐತಿ ನೋಡು' ಅಂದ. ಇಲ್ಲಿ ಬಡವ ಅದಾನ ಆದರ ಬಡತನ ಇಲ್ಲ. ಶ್ರೀಮಂತ ಅದಾನ ಆದರ ಶ್ರೀಮಂತಿಕೆ ಇಲ್ಲ. ಮನುಷ್ಯ ಇದನ್ನು ಅರ್ಥ ಮಾಡಿಕೊಳ್ಳಬೇಕು.

ಎಲ್ಲೋ ಒಂದು ಕಡೆ ಅಪಘಾತ ಆಗಿತ್ತು. ಸಾಯುವ ಸಂದರ್ಭದಲ್ಲಿ ಒಂದು ಗುಟುಕು ನೀರು ಹಾಕಲು ಒಬ್ಬ ಬಂದಾಗ ಯಾವ ಜಾತಿಯವ ಅಂತಾ ಕೇಳ್ತೀರೇನು? ನಿಮ್ಮ ತಾಯಿ ಹೆರಿಗೆ ನೋವಿನಿಂದ ಒದ್ದಾಡುವಾಗ ಹೆರಿಗೆ ಮಾಡಿಸಲು ಬಂದ ನರ್ಸ್ ಯಾವ ಜಾತಿ ಅಂತಾ ಕೇಳ್ತಾರೇನು? ಹುಟ್ಟುವ ಸಂದರ್ಭದಲ್ಲಿ ಇಲ್ಲದ, ಸಾಯುವ ಸಂದರ್ಭದಲ್ಲಿಯೂ ಇಲ್ಲದ, ಜೀವನದ ತುಂಬಾ ತುಂಬಿಕೊಂಡ ಜಾತಿ ನನ್ನದು ಹೇಗಾಗುತ್ತದೆ? ಮನುಷ್ಯ ತಪ್ಪು ಕಲ್ಪನೆಗಳಿಂದ ಬಳಲುತ್ತಿದ್ದಾನ.

ಮಾವಿನ ಗಿಡಕ್ಕೆ ನಾವು ಬೇವಿನ ಗಿಡ ಅನ್ನೋದಿಲ್ಲ. ಬೇವಿನ ಗಿಡಕ್ಕೆ ಜಾಲಿ ಗಿಡ ಅಂದಿಲ್ಲ. ಜಾಲಿ ಗಿಡಕ್ಕೆ ಹುಣಸೆ ಗಿಡ ಅಂದಿಲ್ಲ. ಬೇವಿನ ಗಿಡವನ್ನು ಬೇವಿನ ಗಿಡವಾಗಿಯೇ ನೋಡ್ತೀವಿ. ಮಾವಿನ ಗಿಡವನ್ನು ಹಾಗೆಯೇ ನೋಡ್ತೀವಿ. ಹುಣಸೆ ಗಿಡವನ್ನೂ ಹುಣಸೆ ಗಿಡವನ್ನಾಗಿಯೇ ನೋಡ್ತೀವಿ. ಆದರೆ ಮನುಷ್ಯನನ್ನು ಮನುಷ್ಯನನ್ನಾಗಿ ಮಾತ್ರ ನೋಡಲ್ಲ. ಇದು ಸುಧಾರಣೆಯಾಗುವುದು ಯಾವಾಗ? ಮನುಷ್ಯನನ್ನು ಮನುಷ್ಯನನ್ನಾಗಿಯೇ ನೋಡುವ ದಿನ ಯಾವಾಗ ಬರತೈತಿ ಎನ್ನುವುದೇ ಗೊತ್ತಾಗವಲ್ದು. ಮನುಷ್ಯನನ್ನು ಮನುಷ್ಯನನ್ನಾಗಿ ನೋಡುವುದೇ ಅಧ್ಯಾತ್ಮ. ಮನುಷ್ಯನನ್ನು ಮನುಷ್ಯ ಪ್ರೀತಿಸುವುದೇ ನಿಜವಾದ ಧರ್ಮ. ನಮ್ಮನ್ನು ನೋಡಿದರೆ ನಿಮಗೆ ಸಂತೋಷ ಆಗಬೇಕು, ನಿಮ್ಮನ್ನು ನೋಡಿದರೆ ನಮಗೆ ಸಂತೋಷ ಆಗಬೇಕು. ಅದೇ ಧರ್ಮ.

ಬೊಂತಾದೇವಿ ಅಂತ ಒಬ್ಬಾಕಿ ಶರಣೆ ಇದ್ದಳು. ಕಾಶ್ಮೀರದ ರಾಜಕುಮಾರಿಯಾಗಿದ್ದ ಅವಳು ಕಲ್ಯಾಣಕ್ಕೆ ಬಂದು ಶರಣಳಾದವಳು. ಆಕೆ, 'ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ? ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಬಯಲೆಂದುಂಟೆ? ಎಲ್ಲಿ ನೋಡಿದೊಡೆ ಬಯಲೊಂದೆ; ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ. ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ' ಎನ್ನುತ್ತಾಳೆ. ಬಿಡಾಡಿ ಅಂದರೆ ಕಟ್ಟಿಹಾಕಲು ಸಾಧ್ಯವಿಲ್ಲದ್ದು. ಆಕೆ ತನ್ನ ದೇವನಿಗೆ ಬಿಡಾಡಿ ಎಂದು ಕರೆದಳು. ನಮ್ಮ ಬದುಕು ಬಯಲಾಗಬೇಕು. ಯಾವ ಸಂಪತ್ತೂ ನಮ್ಮ ಜೊತೆಗೆ ಬರಲ್ಲ. ಮಾರುತಿ ಕಾರು ಖರೀದಿ ಮಾಡಿದ್ದರೂ ನೀವು ಮೇಲಕ್ಕೆ ಹೋಗುವಾಗ ಅದು ನಿಮ್ಮ ಜೊತೆ ಮೂರು ಮಾರೂ ಬರಲ್ಲ. ಇನ್ನೊವಾ ಕಾರಿದ್ದರೂ ನಿಮ್ಮ ಕೊನೆಗಾಲದಲ್ಲಿ ಇವ ನಮ್ಮವ ಎನ್ನಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಪೂರ್ಣಿಮಾ ಗಂ. 16-56 ನಕ್ಷತ್ರ: ರೇವತಿ ಗಂ. 16-20 ಯೋಗ: ಹರ್ಷಣ ಗಂ. 25-42 ಕರಣ: ವಿಷ್ಟಿ ಗಂ. 06-49, ಕನ್ಯಾ ಮಾಸದ 30 ನೇ ದಿನ, ಮಳೆನಕ್ಷತ್ರ: ಚಿತ್ರ 3.
ರಾಹುಕಾಲ: ಮಧ್ಯಾಹ್ನ 01-30 – 03-00, ಸೂರ್ಯೋದಯ : 06-25 ಸೂರ್ಯಾಸ್ತ : 06-07, ಮುಸ್ಲಿಂ ದಿನಾಂಕ : 13 ರಬಿಯುಸ್ಸಾನಿ, ದಿನ ವಿಶೇಷ : ಮಹರ್ಷಿ ವಾಲ್ಮೀಕಿ ಜನ್ಮದಿನ, ಓಳಿ ಮುಕ್ತಾಯ (ಜೈನ್), ಕಾವೇರಿ ಸಂಕ್ರಮಣ ಸ್ನಾನ.
ಅದೃಷ್ಟ ಸಂಖ್ಯೆ : 2, 7

ಮೇಷ: ದಕ್ಷರಾಗಿಯೂ ದಾಕ್ಷಿಣ್ಯ ಸ್ವಭಾವದವರಾದ ನಿಮಗೆ ಅಗೌರವ, ನಷ್ಟದಂತಹ ಪರಿಸ್ಥಿತಿ ಎದುರಾಗಬಹುದು. ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಸ್ಥಾನಮಾನ ಲಭ್ಯ. ಹೊಸ ಬಟ್ಟೆ ಖರೀದಿಸುವ ಯೋಗವಿರುವುದು.

ವೃಷಭ: ಹಳೆಯ ಕಹಿ ಘಟನೆಗಳಿಂದ , ಬಡತನದಿಂದ ಕಲಿತ ಪಾಠಗಳು ಉಪಯೋಗಕ್ಕೆ ಬರಲಿವೆ. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಪ್ರಶಸ್ತಿ ಮತ್ತು ಬಹುಮಾನ ದೊರೆಯಲಿದೆ.

ಮಿಥುನ: ನೂತನ ಸ್ವತ್ತು ಖರೀದಿಯ ವ್ಯವಹಾರಗಳಲ್ಲಿ ಸಮರ್ಥನೀಯ ತೀರ್ಮಾನವನ್ನು ಕೈಗೊಳ್ಳುವುದು ಮುಖ್ಯವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು.

ಕರ್ಕಾಟಕ: ಕುಟುಂಬದ ಸತ್ಕಾರ್ಯಗಳಲ್ಲಿ ಬಂಧುಗಳ ಜವಾಬ್ದಾರಿ ಕಡಿಮೆ ಆಗಲಿದೆ. ಕುಟುಂಬದ ಹಿಂದಿನ ವಿಚಾರ ತಿಳಿಯಲು ದಾಯಾದಿಗಳಿಂದ ಅನುಕೂಲವಿದೆ. ಧಾರ್ಮಿಕ ಕೆಲಸದಲ್ಲಿ ಆಸಕ್ತಿ ಮೂಡುವುದು.

ಸಿಂಹ: ಸಮಸ್ಯೆಯಿಂದ ಹೊರಬರಲು ಯಾವುದೇ ರೀತಿಯ ಮುಚ್ಚುಮರೆ ಇಲ್ಲದೇ ಇರುವುದು ಒಂದೇ ದಾರಿ. ಎಲ್ಲರೊಂದಿಗೆ ಸಹಕಾರ ಭಾವನೆಯಿಂದ ಮುಂದುವರಿಯಿರಿ. ಸಂಕಷ್ಟದ ಪರಿಸ್ಥಿತಿಗೆ ತಂದೆಯವರಿಂದ ನೆರವು ಸಿಗಲಿದೆ.

ಕನ್ಯಾ: ಬಂಧು ಜನರಿಗೆ ಅಥವಾ ಸಹಾಯ ಅಪೇಕ್ಷಿಗಳಿಗೆ ಸಹಾಯ ಹಸ್ತ ತೋರುವುದು ದೇವರು ಮೆಚ್ಚುವ ಕೆಲಸವೆಂದು ತಿಳಿದುಬರಲಿದೆ. ದಾಂಪತ್ಯದಲ್ಲಿ ಸಂಶಯದ ವಾತಾವರಣ ಇದ್ದು ಅಸಮಾಧಾನ ಮೂಡುವುದು.

ತುಲಾ: ವ್ಯವಹಾರದಲ್ಲೂ, ಸಂಬಂಧದಲ್ಲೂ ಧನಾತ್ಮಕ ಮನೋಭಾವವೇ ಸೋಲುಗಳಿಗೆ ಕಾರಣವೆಂಬುವುದನ್ನು ಮರೆಯದಿರಿ. ಸಂಸಾರದ ಹೊಣೆಗಾರಿಕೆ ಕಾರಣದಿಂದ ಆದಾಯ ವೆಚ್ಚಗಳು ಸರಿ ಸಮವಾಗಿರುವುದು.

ವೃಶ್ಚಿಕ: ಹೂವಿನ ವ್ಯಾಪಾರಿಗಳಿಗೆ ಲಾಭವಿರುವುದರಿಂದ ಜೀವನ ನಡೆಸುವುದು ಕಷ್ಟವೆನಿಸದು. ಅಬಕಾರಿ ಗುತ್ತಿಗೆದಾರರಿಗೆ ಸ್ವಲ್ಪ ಮಟ್ಟದಲ್ಲಿ ಆದಾಯ ಹೆಚ್ಚುವುದು. ಸಿಹಿ ತಿನಿಸುಗಳ ತಯಾರಕರಿಗೆ ಲಾಭದ ದಿನ.

ಧನು: ಬಹಳ ದಿನಗಳ ನಂತರ ಮನೆಗೆ ಹಿರಿಯ ಸಹೋದರರ ಆಗಮನ ಸಂತೋಷ ಉಂಟುಮಾಡುವುದು. ಅರ್ಹತೆಗೆ ತಕ್ಕಂಥ ಸ್ಥಾನಮಾನ ಲಭಿಸುವವರೆಗೆ ತಾಳ್ಮೆಯಿಂದ ಇರುವುದು ಉತ್ತಮ.

ಮಕರ: ತಲುಪಬೇಕಾದ ಗುರಿಯನ್ನು ತಲುಪಬೇಕಾಗಿದ್ದಲ್ಲಿ ತುಸು ಹೆಚ್ಚೇ ಪರಿಶ್ರಮ ಪಡಬೇಕಾದೀತು. ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು.

ಕುಂಭ: ವೃಥಾ ತಿರುಗಾಟದಿಂದ ಧನಹಾನಿಯಾದರೂ, ಬಂಧುಗಳ ಜತೆಯಲ್ಲಿನ ಸಂಭ್ರಮ ಸಿಗಲಿದೆ. ಕೈಮಗ್ಗದ ವಸ್ತುಗಳ ವ್ಯಾಪಾರಿಗಳಿಗೆ ವಿದೇಶದಿಂದ ಪ್ರಾಮುಖ್ಯತೆ ಸಿಗುತ್ತದೆ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಮೀನ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ಪ್ರಚಾರ ಸಿಗುವುದು. ಮೇಲಧಿಕಾರಿಗಳಿಂದ ಅಚ್ಚರಿಯ ಸಂಗತಿಯೊಂದು ಕೇಳಿ ಬರಲಿದೆ. ಮಾನಸಿಕವಾಗಿ ಹೆಚ್ಚು ಧೃಢರಾಗಿರುವಿರಿ.

ಪದಬಂಧ 5834

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಸರಾಗವನ್ನು ಹೀಗೂ ಹೇಳಬಹುದು (3)
4.ಬೇಸಾಯಕ್ಕೊಂದು ಪರ್ಯಾಯ ಪದ (3)
6.ತಿಳಿಬಣ್ಣದ ಪಾರದರ್ಶಕ ಕಲ್ಲಿನ ಚೂರು (3)
7.ಕಡಗ ಧರಿಸಿದವನು ಕೇಳಿದ ಸಾಲ (2)
8.ನಿರಾಶೆ ಹೊಂದಿದವನು ಇಲ್ಲಿದ್ದಾನೆ (6)
10.ರಸಿಕ ಜನರಿಗೆ ಸಿಕ್ಕಿರುವ ಸೂಟಿ! (2)
12.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
14.ತಿಳಿಯಲು ಕಠಿಣವಾದ ಕಾವ್ಯಶೈಲಿಯು ನಾಕದಲ್ಲಿದೆ! (6)
16.ಗಾವಿಲನ ನೋಡಿದಾಗ ಸಂಗೀತ ನೆನಪಾಯಿತಲ್ಲ! (2)
17.ಕಲಿಯಿಂದ ಬಂದಿರುವ ದೋಷ! (3)
19.ದರದಲ್ಲಿರುವ ಸಿಡುಬುರೋಗ (3)
20.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)

ಮೇಲಿಂದ ಕೆಳಕ್ಕೆ
1.ಗಾಳಿಯ ಚಲನೆ (5)
2.ಆರಂಭದಲ್ಲಿ ಕೊನೆಗೊಂಡಿರುವ ಹಬ್ಬ (4)
3.ಕರುವಿನ ತಾಯಿಯಿಲ್ಲಿ ತಿರುಗಿನಿಂತಿದೆ! (2)
4.ಆಕಳು ಹಿಡಿದಿರುವ ಚಾರ ಇಲ್ಲಿದ್ದಾನೆ (2)
5.ಬಗ್ಗದೇ ನೋಡಿದಾಗ ಕಾಣಿಸಿದ ಕೊಚ್ಚೆ (3)
7.ನಿರೂಪಣೆಯನ್ನು ಹೀಗೆನ್ನಿ (3)
9.ಮರುಕ ತೋರುತ್ತಿರುವವನು ಹುಚ್ಚ (3)
11.ಜನರು ನೋಡಿದ್ದು ಅಂತಃಪುರ (3)
13.ಗುರಿಯಲ್ಲಿ ಪರಾಧೀನತೆ (5)
15.ಉಗ್ರವಾದ ಆಜ್ಞೆ (4)
16.ಸುಮಾರು ಎರಡು ಮೈಲಿ (3)
17.ಕಮ್ಮಾರನ ಕೈ (2)
18.ಸಾವಿರ ಸಲ ಕೇಳಿದಾಗ ಸಿಕ್ಕಿರುವ ಉದ್ಧರಿ ಉಲ್ಟಾ (2)



5833ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ತವರು 5.ಮಧುಕರಿ 6.ದ್ರವ 7.ದಸ್ತಗಿರಿ 9.ಮಿಥ್ಯ 10.ವ್ಯಾಸ 12.ಕಟುನುಡಿ 15.ಚ್ಯವಾ 16.ಉದಾಸೀನ 17.ಸಚಿತ್ರ

ಮೇಲಿಂದ ಕೆಳಕ್ಕೆ: 1.ಸಾಮರಸ್ಯ 2.ಮಕರಂದ 3.ತರಾತುರಿ 4.ರುದ್ರಭೂಮಿ 8.ಗಿಲೀಟು 11.ಸಹವಾಸ 12.ಕಟಿಸೂತ್ರ 13.ಡಿಕ್ರಿದಾರ 14.ಅಭಿನಯ

ಸುಡೊಕು 6219

4						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6218 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಅಥಣಿ ತಾಲ್ಲೂಕಿನ ಯಲ್ಲಮ್ಮ ದೇವಿ ದೇವಸ್ಥಾನ ಜಲಾವೃತ • ಹಲವೆಡೆ ದಿನವಿಡೀ ಮೋಡ ಕವಿದ ವಾತಾವರಣ

ರಾಜ್ಯದ ವಿವಿಧೆಡೆ ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಮಂಗಳೂರು: ರಾಜ್ಯದ ವಿವಿಧೆಡೆ ಬುಧವಾರವೂ ಮಳೆ ಮುಂದುವರಿದಿದೆ. ಕೊಡಗು ಜಿಲ್ಲೆಯ ಅಲ್ಲಲ್ಲಿ ಜೋರು ಮಳೆಯಾಗಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ದಿನಿವಿಡೀ ಮೋಡ ಮುಸುಕಿದ ವಾತಾವರಣ ಇತ್ತು.

ದಕ್ಷಿಣಕನ್ನಡದಲ್ಲಿ ಆಗಾಗ ಸಾಮಾನ್ಯ, ಉಡುಪಿ ಜಿಲ್ಲೆಯಲ್ಲಿ ತುಂತುರು ಮಳೆ ಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಬಿರುಸಿನ ಮಳೆ ಸುರಿದಿದೆ.

ಅರಣ್ಯ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗುತ್ತಿರುವ ಕಾರಣ, ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವು 1,938 ಕ್ಯುಸೆಕ್‌ಗೆ ಏರಿಕೆಯಾಗಿದೆ. ಸಿದ್ದಾಪುರ ಹಾಗೂ ಸುಂಟಿಕೊಪ್ಪದಲ್ಲಿ ಧಾರಾಕಾರ ಮಳೆ ಬಿದ್ದಿತು. ವಿರಾಜಪೇಟೆ ಹಾಗೂ ಮಡಿಕೇರಿಯಲ್ಲಿ ಸಾಧಾರಣ ಮಳೆಯಾಯಿತು.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೋನೆ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ನಗರ, ಬಾಳೆಹೊನ್ನೂರು, ಆಲ್ದೂರು, ತರೀಕೆರೆ, ಅಜ್ಜಂಪುರ ಸುತ್ತಮುತ್ತ ಮಧ್ಯಾಹ್ನದ ವರೆಗೆ ಸತತ ಮಳೆಯಾಗಿದೆ.

ಮೀನುಗಾರರಿಗೆ ಮುನ್ಸೂಚನೆ: ವಾಯುಭಾರ ಕುಸಿತದಿಂದಾಗಿ ಇದೇ 19ರ ವರೆಗೆ ಭಾರಿ ಮಳೆ ಮತ್ತು ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ತೆರಳದಂತೆ ಹಾಗೂ ಈಗಾಗಲೇ ತೆರಳಿರುವವರು ತಕ್ಷಣ ವಾಪಸ್ ಬರಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಸೂಚಿಸಿದ್ದಾರೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕ ಭಾಗದ ವಿವಿಧೆಡೆ ಬುಧವಾರವೂ ವರುಣನ ಅಬ್ಬರ ಮುಂದುವರಿದಿತ್ತು.

ಕಲಬುರಗಿ ಸೇರಿದಂತೆ ಅಫಜಲಪುರ, ಕಾಳಗಿ, ಚಿಂಚೋಳಿಯ ಹಲವೆಡೆ ಬಿರುಸಿನ ಮಳೆಯಾಗಿದೆ. ಕೊಪ್ಪಳ ಜಿಲ್ಲೆಯಾದ್ಯಂತ ಬೆಳಿಗಿನ ಜಾವದಿಂದಲೇ ಮೋಡಕವಿದ ವಾತಾವರಣ, ಜಿಟಿಜಿಟಿ ಮಳೆಯಾಗಿದೆ.

ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಒಂದು ಗಂಟೆಗೂ ಅಧಿಕ ಸಮಯ ಮಳೆಯಾಗಿದೆ. ಬೀದರ್, ಭಾಲ್ಕಿ, ಚಿಟ-ಗುಪ್ಪದಲ್ಲಿ ಸಾಧಾರಣ ಮಳೆಯಾಗಿದೆ. ಯಾದಗಿರಿಯಲ್ಲಿ ಅರ್ಧ ತಾಸು ಸಾಧಾರಣ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಕೆಲವೆಡೆ ಗುಡುಗು ಸಹಿತ ಮಳೆ ಸುರಿದಿದೆ. ರಾಯಚೂರು ಜಿಲ್ಲೆಯ ಸಿರವಾರದಲ್ಲಿ ಜಿಟಿ ಜಿಟಿ ಮಳೆಯಾಗಿದೆ.

ಕೊಕಟನೂರ (ಬೆಳಗಾವಿ ಜಿಲ್ಲೆ): ಅಥಣಿ ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳ ಕೊಕಟನೂರ ಯಲ್ಲಮ್ಮ ದೇವಿ ದೇವಸ್ಥಾನಕ್ಕೆ ಬುಧವಾರ ಹಳ್ಳದ ನೀರು ನುಗ್ಗಿದೆ. ದೇವಸ್ಥಾನದ ಆವರಣ ತುಂಬಿಕೊಂಡು, ಗರ್ಭಗುಡಿಗೂ ನೀರು ನುಗ್ಗಿದೆ. ಕೊಕಟನೂರ ಸುತ್ತಮುತ್ತ ನಸುಕಿನಿಂದ ನಿರಂತರ ಮಳೆ ಸುರಿಯಿತು. ದೇವಸ್ಥಾನದ ಬಳಿಯ ಕೆರೆ ತುಂಬಿ ಅಲ್ಲಿನ ನೀರು ಹಳ್ಳವಾಗಿ ಹರಿದು ದೇವಸ್ಥಾನದ ಆವರಣ ಪ್ರವೇಶಿಸಿತು. ದೇವಿಯ ಮೂರ್ತಿ ಕೂಡ ಅರ್ಧದಷ್ಟು ಮುಳುಗಿತು.

ಬೆಳಗಾವಿ ವರದಿ: ನಗರ ಹಾಗೂ ತಾಲ್ಲೂಕಿನ ವಿವಿಧೆಡೆ ಮಂಗಳವಾರ ರಾತ್ರಿ ಹಾಗೂ ಬುಧವಾರ ಸಂಜೆಗೆ ಧಾರಾಕಾರ ಮಳೆ ಸುರಿಯಿತು. ನಗರ ಹೊರವಲಯದ ಯಳ್ಳೂರು ಮಾರ್ಗದಲ್ಲಿ ಸುಮಾರು 300 ಹೆಕ್ಟೇರ್ ಭತ್ತದ ಗದ್ದೆಗಳಲ್ಲಿ ನೀರು ಸಂಗ್ರಹಗೊಂಡಿತ್ತು.

ಮುಂದುವರಿದ ಜಡಿ ಮಳೆ: ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಗಳಲ್ಲಿ ಸತತ ಎರಡನೇ ದಿನವಾದ ಬುಧವಾರವೂ ಜಡಿ ಮಳೆ ಮುಂದುವರೆದಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಕಟನೂರ ಯಲ್ಲಮ್ಮ ದೇವಿ ದೇವಸ್ಥಾನ ಬುಧವಾರ ಜಲಾವೃತಗೊಂಡಿತ್ತು

ಹನ್ನೊಂದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರವೂ ಭಾರಿ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಹನ್ನೊಂದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ ಪ್ರತಿ ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದ್ದು, ಚಂಡಮಾರುತದ ವಾತಾವರಣ ಇರಲಿದೆ. ಆದ್ದರಿಂದ, ಮೀನುಗಾರರು ಎಚ್ಚರವಹಿಸಬೇಕು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಾಧಾರಣದಿಂದ ಭಾರಿ ಮಳೆಯಾಗುವ ಸಂಭವವಿದೆ. ಗರಿಷ್ಠ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 19 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಶುಕ್ರವಾರದಿಂದ ರಾಜ್ಯದಾದ್ಯಂತ ಮಳೆಯ ತೀವ್ರತೆ ತಗ್ಗುವ ಸಾಧ್ಯತೆಯಿದ್ದು, ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಇದೇ 22 ರವರೆಗೂ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಸುದ್ದಿ 2 ನಿಮಿಷ

ಕೆಐಒಸಿಎಲ್ ಬಾಕಿ ₹1,400 ಕೋಟಿ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿರುವಂತೆ ದೇವದಾರಿ ಗಣಿಗಾರಿಕೆಗಾಗಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಅರಣ್ಯ ಇಲಾಖೆಗೆ ₹500 ಕೋಟಿ ಪಾವತಿಸಿಲ್ಲ. ಅರಣ್ಯ ಇಲಾಖೆಗೆ ಕಟ್ಟಬೇಕಾದ ಬಾಕಿಯೇ ₹1,400 ಕೋಟಿ ಇದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಈ ಹಿಂದೆ ಕುದುರೆಮುಖದಲ್ಲಿ ಗಣಿಗಾರಿಕೆ ನಡೆಸಿದ್ದ ಕೆಐಒಸಿಎಲ್ ಪರಿಸರಕ್ಕೆ ಮಾಡಿರುವ ಹಾನಿಯ ಮೊತ್ತ ಪಾವತಿಸಿಲ್ಲ. ಅಕ್ರಮವಾಗಿ ಲಕ್ಯಾ ಜಲಾಶಯದ ಎತ್ತರ ಹೆಚ್ಚಿಸಿ, ಅರಣ್ಯ ಮುಳುಗಡೆ ಮಾಡಿದ್ದಕ್ಕಾಗಿ ₹119.12 ಕೋಟಿ, ಗಣಿಗಾರಿಕೆಗಾಗಿ ಹೊಸ ಭೂಮಿ ಅಗೆದಿದ್ದಕ್ಕಾಗಿ ₹19.88 ಕೋಟಿ ಸೇರಿದಂತೆ ಮಹಾ ಲೆಕ್ಕಪರಿಶೋಧಕರು ಉಲ್ಲೇಖಿಸಿರುವ ಮೊತ್ತ ಹಾಗೂ ಬಡ್ಡಿ ₹1,349.52 ಕೋಟಿ ಬಾಕಿ ಇದೆ ಎಂದರು.

ಕೆಐಒಸಿಎಲ್ ತನ್ನ ಸ್ವಂತ ಭೂಮಿ 114.30 ಹೆಕ್ಟೇರ್, ಸರ್ಕಾರದ ಕಂದಾಯ ಭೂಮಿ 1,220.03 ಹೆಕ್ಟೇರ್ ಸೇರಿ ಒಟ್ಟು 1334.33 ಹೆಕ್ಟೇರ್ ಅರಣ್ಯ ಇಲಾಖೆಗೆ ಹಿಂತಿರುಗಿಸಬೇಕು. 670 ಹೆಕ್ಟೇರ್ ಪ್ರದೇಶವನ್ನು ಅಂಕೋಲ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ಗುರುತಿಸಲಾಗಿದೆ. ಕಂಪನಿ ಗಣಿ ಉತ್ಪನನ ಆರಂಭಿಸಿದ ವೇಳೆ ಶೇ 27ರಷ್ಟು ಮಣ್ಣನ್ನು ಲಕ್ಯಾ ಡ್ಯಾಂಗೆ ಸುರಿದಿತ್ತು. ಪ್ರಸ್ತುತ ಅಲ್ಲಿ 1,500 ಟನ್ ಮಣ್ಣು ಸಂಗ್ರಹವಾಗಿದೆ. ಅಣೆಕಟ್ಟೆಯಲ್ಲಿ ಇನ್ನೂ ಹೆಚ್ಚಿನ ಮಣ್ಣು ಹಾಕಲು ಅನಧಿಕೃತವಾಗಿ ಕಂಪನಿ ಲಕ್ಯಾ ಡ್ಯಾಂ ಎತ್ತರವನ್ನು ಹೆಚ್ಚಿಸಿದ್ದರಿಂದ 340 ಹೆಕ್ಟೇರ್ ಅರಣ್ಯಕ್ಕೆ ಹಾನಿಯಾಗಿದೆ. ಪರಿಷ್ಕರಿಸಿದ ಅದಿರನ್ನು ಮಂಗಳೂರು ಬಂದರಿಗೆ ಸಾಗಿಸಲು ಅನುಮತಿ ಪಡೆಯದೇ ಪೈಪ್‌ಲೈನ್ ಅಳವಡಿಸಲಾಗಿದೆ ಎಂದರು.

ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಎನ್ಎಂಡಿಸಿ ಹಾಗೂ ಖಾಸಗಿ ಕಂಪನಿಗಳಿಂದ ಅದಿರು ಖರೀದಿಸಬಹುದು ಎಂದರು.

ಕಾವೇರಿ ತೀರ್ಥೋದ್ಭವ: ಕ್ಷಣಗಣನೆ

ಮಡಿಕೇರಿ: ಇಲ್ಲಿನ ತಲಕಾವೇರಿಯಲ್ಲಿ ಅ.17ರಂದು ಬೆಳಿಗ್ಗೆ 7.40ಕ್ಕೆ ಕಾವೇರಿ ಪವಿತ್ರ ತೀರ್ಥೋದ್ಭವ ನೆರವೇರಲಿದೆ.

ಇದಕ್ಕಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ವತಿಯಿಂದ ಸಿದ್ಧತೆಗಳು ಪೂರ್ಣಗೊಂಡಿವೆ. ಲಕ್ಷಾಂತರ ಮಂದಿ ಭಕ್ತರು ಭೇಟಿ ನೀಡಲಿದ್ದು, ಭಾಗಮಂಡಲದಿಂದ ತಲಕಾವೇರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದೆ. ಪಾದಯಾತ್ರೆಯಲ್ಲೂ ಸಾವಿರಾರು ಭಕ್ತರು ಬರುವುದರಿಂದ, ಭಾಗಮಂಡಲದಿಂದ ತಲಕಾವೇರಿಯವರೆಗೆ ವಿದ್ಯುತ್ ದೀಪಗಳನ್ನು ಹಾಕಲಾಗಿದೆ. ತೀರ್ಥವನ್ನು ಪ್ಲಾಸ್ಟಿಕ್ ಕೊಡ, ಕ್ಯಾನ್, ಬಾಟಲಿಗಳಲ್ಲಿ ಸಂಗ್ರಹಿಸುವುದನ್ನು ನಿಷೇಧಿಸಲಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಮಂತರ್ ಗೌಡ ಭಾಗವಹಿಸಲಿದ್ದಾರೆ.

ದರ್ಶನ್ ಜಾಮೀನು ಅರ್ಜಿ 22ಕ್ಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ನಿಯಮಿತ ಜಾಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ಹೈಕೋರ್ಟ್‌ನಲ್ಲಿ ಇದೇ 22ರಂದು ವಿಚಾರಣೆಗೆ ಬರುವ ನಿರೀಕ್ಷೆಯಿದೆ.

ಈ ಮೊದಲು ದರ್ಶನ್ ಅವರ ಜಾಮೀನು ಅರ್ಜಿಯನ್ನು ನಗರದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿತ್ತು. ಇದರ ಬೆನ್ನಲ್ಲೇ ಹೈಕೋರ್ಟ್ ಮೆಟ್ಟಿಲೇರಿರುವ ದರ್ಶನ್, 'ಪ್ರಕರಣದ ಯೋಗ್ಯತೆಯ ವಾದಾಂಶಗಳ ಆಧಾರದಡಿ ಮತ್ತು ಬೆನ್ನುಹುರಿ ನೋವಿನಿಂದ ಬಳಲುತ್ತಿರುವ ಕಾರಣ ತುರ್ತು ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದೆ' ಎಂಬ ಅಂಶಗಳನ್ನು ಮುಂದುಮಾಡಿ ಜಾಮೀನು ನೀಡುವಂತೆ ಕೋರಿದ್ದಾರೆ.

ಈ ಕುರಿತಾದ ಮೆಮೊ ಅನ್ನು ದರ್ಶನ್ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಬುಧವಾರ ಬೆಳಿಗ್ಗೆ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಸಲ್ಲಿಸಿ, 'ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು' ಎಂದರು.

ದರ್ಶನ್‌ಗೆ ಮಂಚ, ಹಾಸಿಗೆ, ದಿಂಬು: ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಬಂಧಿಯಾಗಿರುವ ನಟ ದರ್ಶನ್ ಅವರಿಗೆ ಜಿಲ್ಲಾ ಆಸ್ಪತ್ರೆಯಿಂದ ಬುಧವಾರ ಮಂಚ, ಹಾಸಿಗೆ ಮತ್ತು ದಿಂಬು ನೀಡಲಾಗಿದೆ.

ರೇಣುಕಸ್ವಾಮಿ ಪತ್ನಿಗೆ ಗಂಡು ಮಗು

ಚಿತ್ರದುರ್ಗ: ರೇಣುಕಸ್ವಾಮಿ ಅವರ ಪತ್ನಿ ಸಹನಾ ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಬೆಳಿಗ್ಗೆ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

ರೇಣುಕಸ್ವಾಮಿಯೇ ಹುಟ್ಟಿ ಬಂದ: ಮೊಮ್ಮಗು ಜನಿಸಿದ ಸುದ್ದಿ ಕೇಳಿ ರೇಣುಕಸ್ವಾಮಿ ಅವರ ತಂದೆ ಕಾಶಿನಾಥಯ್ಯ ಶಿವನಗೌಡರ್ ಭಾವುಕರಾದರು. 'ಮಗ ರೇಣುಕಸ್ವಾಮಿಯೇ ಹುಟ್ಟಿ ಬಂದಿದ್ದಾನೆ. ದೇವರ ಕೃಪೆಯಿಂದ ಸೊಸೆ ಹಾಗೂ ಮೊಮ್ಮಗ ಆರೋಗ್ಯವಾಗಿದ್ದಾರೆ' ಎಂದರು.

ವೇಗವಾಗಿ ಭರ್ತಿಯಾಗುತ್ತಿರುವ ತಮಿಳುನಾಡಿನ ಜಲಾಶಯಗಳು

ಆಂಧ್ರಪ್ರದೇಶ: ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್/ಚೆನ್ನೈ: ಆಂಧ್ರ ಪ್ರದೇಶದ ದಕ್ಷಿಣ ಕರಾವಳಿ ಹಾಗೂ ರಾಯಲಸೀಮಾ ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯುತ್ತಿದೆ. ಪ್ರಕಾಶಂ, ನೆಲ್ಲೂರು, ಕಡಪಾ ಜಿಲ್ಲೆಗಳಲ್ಲಿ ತೀವ್ರ ಮಳೆಯಾಗುತ್ತಿದ್ದು, ಜನ ಜೀವನ ಅಸ್ತವ್ಯಸ್ತವಾಗಿದೆ. ಗುಂಟೂರು, ಕೃಷ್ಣ ಜಿಲ್ಲೆಗಳಲ್ಲಿ ಹಾಗೂ ತೆಲಂಗಾಣ ರಾಜ್ಯದಲ್ಲಿ ಸಾಧಾರಣ ಮಳೆಯಾಗಿದೆ.

ನೆಲ್ಲೂರಿನ ಕಾವಾಲಿಯಲ್ಲಿ 15 ಸೆ.ಮೀ ಮಳೆ ಸುರಿದಿದೆ. ತಿರುಪತಿ ಜಿಲ್ಲೆಯಲ್ಲಿಯೂ ತೀವ್ರ ಮಳೆಯಾಗುತ್ತಿದೆ. ಇಲ್ಲಿನ ವಿಮಾನ ನಿಲ್ದಾಣದ ರನ್‌ವೇನಲ್ಲಿ ನೀರು ನಿಂತಿದೆ. ಮಳೆಯ ಕಾರಣ ವಿಮಾನದ ಲ್ಯಾಂಡಿಂಗ್‌ನಲ್ಲಿ ಸಮಸ್ಯೆ ಉಂಟಾಗಿ ತಿರುಪತಿಯಲ್ಲಿ ಲ್ಯಾಂಡ್ ಆಗಬೇಕಿದ್ದ ವಿಮಾನವನ್ನು ಚೆನ್ನೈಗೆ ಮಾರ್ಗ ಬದಲಾವಣೆ ಮಾಡಲಾಗಿದೆ. ಹೈದರಾಬಾದ್‌ನಿಂದ ತಿರುಪತಿಗೆ ವಿಮಾನ ಹಾರಾಟವನ್ನು ರದ್ದು ಮಾಡಲಾಗಿದೆ.

ಚೆನ್ನೈ ಸೇರಿ ತಮಿಳುನಾಡಿನ ಹಲವು ಜಿಲ್ಲೆಗಳಲ್ಲಿ ಸೋಮವಾರದಿಂದ ಸುರಿಯುತ್ತಿದ್ದ ಮಳೆಯು ಬುಧವಾರ ಬಿಡುವು ನೀಡಿದೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಒತ್ತಡವು ತಗ್ಗಿರುವುದರಿಂದ ರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ.

'ಮುಂದಿನ ಎರಡು ದಿನಗಳಲ್ಲಿ ಭಾರಿ ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆಯು ಮಂಗಳವಾರ ಮುನ್ಸೂಚನೆ ನೀಡಿತ್ತು. 'ಸರ್ಕಾರವು ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳ ಕಾರಣ ರಾಜ್ಯದಲ್ಲಿ ಮಳೆಹಾನಿ ಪ್ರಕರಣಗಳು ಕಡಿಮೆಯಾಗಿವೆ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದರು.

ಭಾರಿ ಮಳೆಯ ಕಾರಣ ರಾಜ್ಯದ ಹಲವು ಜಲಾಶಯಗಳು ವೇಗವಾಗಿ ಭರ್ತಿಯಾಗಿವೆ. ರಾಜ್ಯದ ಆರು ಜಲಾಶಯಗಳಲ್ಲಿನ ಒಟ್ಟು ಸಂಗ್ರಹ ಸಾಮರ್ಥ್ಯದ ಶೇ 41.61ರಷ್ಟು ಭಾಗವು ಮಳೆ ಆರಂಭವಾದ ಕೆಲವೇ ದಿನಗಳಲ್ಲಿ ತುಂಬಿಕೊಂಡಿದೆ. ಮಂಗಳವಾರದ ಹೊತ್ತಿಗೆ 4.84 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು. ಈ ಪ್ರಮಾಣವು ಬುಧವಾರದ ಹೊತ್ತಿಗೆ 5.5 ಟಿಎಂಸಿ ಅಡಿಯಷ್ಟಾಗಿದೆ.

ಚೆನ್ನೈನಲ್ಲಿ ಬುಧವಾರ ಸುರಿದ ಮಳೆಯಿಂದ ರಕ್ಷಣೆ ಪಡೆದುಕೊಳ್ಳಲು ಜನರು ಸುರಕ್ಷಿತ ಜಾಗಗಳಿಗೆ ಬೋಟ್ ಮೂಲಕ ತೆರಳಿದರು —ಪಿಟಿಐ ಚಿತ್ರ

ತಿರುಪತಿ ದೇಗುಲ ಮಾರ್ಗ: ಭೂಕುಸಿತ

ತಿರುಪತಿ ತಿರುಮಲ ದೇವಸ್ಥಾನಕ್ಕೆ ಹೋಗುವ ಘಾಟಿಯಲ್ಲಿ ಭೂಕುಸಿತ ಉಂಟಾಗಿದೆ. ರಸ್ತೆಗಳ ಮೇಲೆ ಕಲ್ಲು ಬಂಡೆಗಳು ಬಿದ್ದಿವೆ. ಆದ್ದರಿಂದ ಶ್ರೀವಾರಿ ಪಾದಾಲು, ಆಕಾಶ ಗಂಗ, ಜಾಪಾಲಿ ಹಾಗೂ ಪಾಪವಿನಾಶಿನಿ ಸ್ಥಳಗಳಿಗೆ ಭೇಟಿ ನೀಡಲು ಟಿಟಿಡಿ ಭಕ್ತರಿಗೆ ಅನುಮತಿ ನೀಡುತ್ತಿಲ್ಲ. ದೇವಸ್ಥಾನದ ವಿಐಪಿ ದರ್ಶನವನ್ನೂ ಟಿಟಿಡಿ ರದ್ದು ಮಾಡಿದೆ.

ಸ್ನೇಹಮಯಿ ಕೃಷ್ಣ ವಿರುದ್ಧ ದೂರು

ಮೈಸೂರು: 'ಲೋಕಾಯುಕ್ತ ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು, ಮುಡಾ ಪ್ರಕರಣದ ತನಿಖೆ ಪೂರ್ಣಗೊಳ್ಳುವವರೆಗೆ ಬಂಧಿಸಬೇಕು' ಎಂದು ಒತ್ತಾಯಿಸಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಇಲ್ಲಿನ ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ಅವರಿಗೆ ಬುಧವಾರ ದೂರು ಸಲ್ಲಿಸಿದರು.

'ಪ್ರತಿ ದಿನವೂ ಲೋಕಾಯುಕ್ತ ಅಧಿಕಾರಿಗಳು–ಸಿಬ್ಬಂದಿ ವಿರುದ್ಧ ಹೇಳಿಕೆ ನೀಡಿ ಕೃಷ್ಣ ಅವರು ದಾರಿ ತಪ್ಪಿಸುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ಜೈಲಿನಿಂದ ಶಾಸಕ ಬಿ.ನಾಗೇಂದ್ರ ಬಿಡುಗಡೆ

'ಸಿ.ಎಂ, ಡಿಸಿಎಂ ಹೆಸರೇಳಲು ಇ.ಡಿ ಒತ್ತಡ'

ಪ್ರಜಾವಾಣಿ ವಾರ್ತೆ

ಬಿ.ನಾಗೇಂದ್ರ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರು ಹೇಳುವಂತೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಒತ್ತಡ ಹೇರಿದ್ದರು' ಎಂದು ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಆರೋಪಿಸಿದರು.

ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹94.73 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಇ.ಡಿ. ಯಿಂದ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ನಾಗೇಂದ್ರ ಅವರು ಬುಧವಾರ ಬೆಳಿಗ್ಗೆ ಬಿಡುಗಡೆಯಾದರು.

ಕಾರಾಗೃಹದಿಂದ ಹೊರಬಂದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇ.ಡಿ. ಅಧಿಕಾರಿಗಳು ಯಾರದ್ದೋ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ವಿಚಾರಣೆ ವೇಳೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹೆಸರು ಹೇಳುವಂತೆ ಪದೇಪದೇ ನನಗೆ ಕಿರುಕುಳ ನೀಡುತ್ತಿದ್ದರು' ಎಂದು ಆರೋಪಿಸಿದರು.

'ವಾಲ್ಮೀಕಿ ನಿಗಮದ ಹಗರಣದಲ್ಲಿ ನನ್ನಿಂದ ಯಾವುದೇ ತಪ್ಪು ನಡೆದಿಲ್ಲ. ಆದರೂ, ನನ್ನನ್ನು ಬಂಧಿಸಿದ್ದರು' ಎಂದರು.

'ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇ.ಡಿ.ಯ ಅಸ್ತ್ರ ಬಳಸಿ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಅಭಿವೃದ್ಧಿ ಕೆಲಸ ಬಿಟ್ಟು ಬಿಜೆಪಿ ಕೀಳುಮಟ್ಟದ ರಾಜಕಾರಣ ನಡೆಸುತ್ತಿದೆ' ಎಂದು ಆಪಾದಿಸಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಇದೇ ರೀತಿ ಕೀಳುಮಟ್ಟದ ರಾಜಕಾರಣ ನಡೆಸಿದರೆ ರಾಜ್ಯದಲ್ಲಿ ಆ ಪಕ್ಷದ ಶಾಸಕರ ಸಂಖ್ಯೆ 40ಕ್ಕೆ ಇಳಿಯಲಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆ ಪ್ರಕರಣದಲ್ಲೂ ಮುಖ್ಯಮಂತ್ರಿ ಅವರನ್ನು ಸಿಲುಕಿಸಲು ಷಡ್ಯಂತ್ರ ನಡೆ-ಸಲಾಗುತ್ತಿದೆ. ಸಿದ್ದರಾಮಯ್ಯ ಅವರು ಯಾವುದೇ ತಪ್ಪು ಮಾಡಿಲ್ಲ. ಬಿಜೆಪಿ-ಜೆಡಿಎಸ್ ಮುಖಂಡರ ಹುನ್ನಾರ ಯಶಸ್ವಿಯಾಗುವುದಿಲ್ಲ' ಎಂದು ನಾಗೇಂದ್ರ ಹೇಳಿದರು.

ಬಿ.ನಾಗೇಂದ್ರ ಅವರನ್ನು ಇ.ಡಿ. ಅಧಿಕಾರಿಗಳು ಜುಲೈ 12ರಂದು ಬಂಧಿಸಿ ವಿಚಾರಣೆ ನಡೆಸಿದ್ದರು. ನಂತರ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಪರಪ್ಪನ ಅಗ್ರಹಾರ ಜೈಲು ಸಮೀಪ ಜಮಾಯಿಸಿದ್ದ ನಾಗೇಂದ್ರ ಅವರ ಬೆಂಬಲಿಗರು ಹೂಮಾಲೆ ಹಾಕಿ ಸ್ವಾಗತಿಸಿದರು. ಬಿಡುಗಡೆ ಬಳಿಕ ನಾಗೇಂದ್ರ ಅವರು ಸಚಿವ ಜಮೀರ್ ಅಹ್ಮದ್ ಖಾನ್ ಅವರ ಮನೆಗೆ ಭೇಟಿ ನೀಡಿದ್ದರು.

ಇ.ಡಿ.ಯಿಂದ ಹುನ್ನಾರ: ಜಮೀರ್

'ಇ.ಡಿ. ಅಧಿಕಾರಿಗಳು ಹುನ್ನಾರ ನಡೆಸಿ ಬಿ.ನಾಗೇಂದ್ರ ಅವರನ್ನು ಬಂಧಿಸಿದ್ದರು. ನ್ಯಾಯಾಲಯದ ಮೇಲೆ ವಿಶ್ವಾಸವಿದ್ದು, ನಾಗೇಂದ್ರ ಅವರು ಆರೋಪದಿಂದ ಮುಕ್ತ ಆಗಲಿದ್ದಾರೆ' ಎಂದು ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

'ಹುಲಿ ವಾಪಸ್ ಬಂದಿದೆ. ಈ ಹುಲಿಯ ನೇತೃತ್ವದಲ್ಲೇ ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯನ್ನು ಎದುರಿಸಲಿದ್ದೇವೆ' ಎಂದರು.

ಮುನಿರತ್ನ ಬಿಡುಗಡೆ

ಬೆಂಗಳೂರು: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಬುಧವಾರ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದರು.

ಮುನಿರತ್ನ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಂಗಳವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

ಜಾಮೀನಿನ ಆದೇಶದ ಪ್ರತಿ ಮಂಗಳವಾರ ರಾತ್ರಿ ಜೈಲಾಧಿಕಾರಿಗಳಿಗೆ ತಲುಪಿದ್ದರಿಂದ ಬಿಡುಗಡೆ ಸಾಧ್ಯವಾಗಿರಲಿಲ್ಲ. ಬುಧವಾರ ಬೆಳಿಗ್ಗೆ ಬಿಡುಗಡೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಮುನಿರತ್ನ ಅವರು ಜೈಲಿನಿಂದ ಹೊರಬಂದರು. ಅಲ್ಲಿಂದ ನೇರವಾಗಿ ವೈಯಾಲಿಕಾವಲ್ ನಿವಾಸಕ್ಕೆ ತೆರಳಿದರು. ಶಾಸಕರಿಗೆ ಹೂವಿನ ಮಾಲೆ ಹಾಕಿ ಬೆಂಬಲಿಗರು ಸ್ವಾಗತಿಸಿದರು.

ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಮುನಿರತ್ನ ಸೇರಿದಂತೆ ಆರು ಮಂದಿ ವಿರುದ್ಧ ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಮುನಿರತ್ನ ಅವರನ್ನು ಪೊಲೀಸರು ಬಂಧಿಸಿದ್ದರು. ಈ ಪ್ರಕರಣವೂ ಸೇರಿದಂತೆ ಮುನಿರತ್ನ ವಿರುದ್ಧ ಜಾತಿ ನಿಂದನೆ ಹಾಗೂ ಕೊಲೆ ಬೆದರಿಕೆ ಆರೋಪಗಳಡಿ ದಾಖಲಾಗಿದ್ದ ಪ್ರಕರಣಗಳ ತನಿಖೆಯನ್ನೂ ರಾಜ್ಯ ಸರ್ಕಾರವು ಎಸ್‌ಐಟಿಗೆ ವಹಿಸಿತ್ತು. ಬಾಡಿ ವಾರಂಟ್ ಮೇಲೆ ಕಸ್ಟಡಿಗೆ ಪಡೆದಿದ್ದ ಎಸ್‌ಐಟಿ ಅಧಿಕಾರಿಗಳು, ಮುನಿರತ್ನ ಅವರ ವಿಚಾರಣೆ ನಡೆಸಿದ್ದರು.

ಪ್ರತಿಭಟನೆ

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಕಲಬುರಗಿಯಲ್ಲಿ ಬುಧವಾರ ಜಿಲ್ಲಾ ಮಾದಿಗ ಸಮಾಜದ ಸಂಘಟನೆಗಳ ಒಕ್ಕೂಟದ ಮುಖಂಡರು, ಸಮುದಾಯದವರು ಅರೆಬೆತ್ತಲೆ ಪ್ರತಿಭಟನ ರ್‍ಯಾಲಿ ನಡೆಸಿದರು

ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೈಕೋರ್ಟ್ ಮಧ್ಯಂತರ ಆದೇಶ

ತೀರ್ಮಾನಕ್ಕೂ ಮುನ್ನ ಪೂರ್ವಾನುಮತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಾಲಯದ ನಿರ್ವಹಣೆಗಾಗಿ ರೂಪಿಸಲಾಗಿರುವ 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ' ಕಾಯ್ದೆಯ ಕಲಂ 16 ಅಥವಾ 17ರ ಅಡಿ ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ಹೈಕೋರ್ಟ್‌ನ ಪೂರ್ವಾನುಮತಿ ಪಡೆಯಬೇಕು' ಎಂದು ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ.

'ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–2024 ಅನ್ನು ರದ್ದು-ಗೊಳಿಸಬೇಕು' ಎಂದು ಕೋರಿ ರಾಜಮನೆತನದ ದಿವಂಗತ ಶ್ರೀಕಂಠದತ್ತ ಒಡೆಯರ್ ಪತ್ನಿ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು (ಡಬ್ಲ್ಯುಪಿ 19807/2024) ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ನು ವಿಧಾನಸಭೆ ನಿಯಮಗಳಿಗೆ ವಿರುದ್ಧ ವಾಗಿ ಜಾರಿಗೊ-ಳಿಸಲಾಗಿದೆಯೇ ಎಂಬುದನ್ನು ಪರಿಗಣಿಸ-ಬೇಕಿದೆ. ಹಾಗಾಗಿ, ಅರ್ಜಿ ಇತ್ಯರ್ಥವಾಗು-ವವರೆಗೆ ಚಾಮುಂಡೇಶ್ವರಿ ದೇವಾಲಯದ ಚರ ಮತ್ತು ಸ್ಥಿರಾಸ್ತಿಗಳನ್ನು ಪ್ರಾಧಿಕಾರವು ವಿಲೇವಾರಿ ಮಾಡುವಂತಿಲ್ಲ. ಆದ್ದರಿಂದ, ದೇವಾಲಯದಲ್ಲಿ ಸದ್ಯ ಜಾರಿಯಲ್ಲಿರುವ ಸಂಪ್ರದಾಯಗಳಲ್ಲಿ ಯಾವುದೇ ಬದಲಾವಣೆ ಅಥವಾ ಹಸ್ತಕ್ಷೇಪ ಮಾಡಬಾರದು. ಕಾಯ್ದೆಯ ಕಲಂ 16 ಅಥವಾ 17ರ ಅಡಿಯಲ್ಲಿ ಏನೇ ತೀರ್ಮಾನ ಕೈಗೊಳ್ಳುವ ಮೊದಲಿಗೆ ನ್ಯಾಯಾಲಯದ ಪೂರ್ವಾನುಮತಿ ಪಡೆಯಬೇಕು' ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

'ಅರ್ಜಿ ವಿಲೇವಾರಿಗೆ ಬಾಕಿ ಇರುವಾಗ ರಾಜ್ಯ ಸರ್ಕಾರ ನಿಯಮಗಳನ್ನು ರೂಪಿಸುವುದಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ. ಆದರೆ, ಸಭೆಯಲ್ಲಿ ಭಾಗವಹಿಸುವಂತೆ ಪ್ರಮೋದಾ ದೇವಿ ಅವರಿಗೆ ಪ್ರಾಧಿಕಾರವು ನೋಟಿಸ್ ನೀಡ ಬೇಕು. ಅವರು ಸಭೆಯಲ್ಲಿ ಭಾಗ ವಹಿಸದೇ ಇದ್ದರೆ ಸೂಕ್ತ ನಿರ್ಧಾರ ಕೈಗೊಳ್ಳಲು ಪ್ರಾಧಿಕಾರವು ಸ್ವತಂತ್ರವಾ-ಗಿರುತ್ತದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ. ವಿಚಾರಣೆಯನ್ನು ನವೆಂಬರ್ 22ಕ್ಕೆ ಮುಂದೂಡಲಾಗಿದೆ.

ಏನಿದು ಅರ್ಜಿ?: 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–2024, ಸಂವಿಧಾನದ 14, 19, 21, 25 ಮತ್ತು 26ನೇ ವಿಧಿಗಳ ಉಲ್ಲಂಘನೆಯಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ. ಅರ್ಜಿದಾರರ ಪರ ಸುಪ್ರೀಂ ಕೋರ್ಟ್ ವಕೀಲ ಜೆ.ಸಾಯಿ ದೀಪಕ್ ಹಾಗೂ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ದೇವದಾಸ್ ವಾದ ಮಂಡಿಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮೈಸೂರು ಜಿಲ್ಲಾಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಯತ್ನಾಳಗೆ ಜಾಮೀನುರಹಿತ ವಾರಂಟ್

ಬೆಂಗಳೂರು: 'ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ' ಎಂಬ ಹೇಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿದೆ.

ಈ ಕುರಿತಂತೆ ಸಚಿವ ದಿನೇಶ್ ಗುಂಡೂರಾವ್ ಪತ್ನಿ ತಬಸ್ಸುಮ್ ದಿನೇಶ್ ರಾವ್ ದಾಖಲಿಸಿರುವ ಮಾನಹಾನಿ ಪ್ರಕರಣ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಮುಂದೆ ಬುಧವಾರ ವಿಚಾರಣೆಗೆ ನಿಗದಿಯಾಗಿತ್ತು. ಆದರೆ, ಆರೋಪಿ ಯತ್ನಾಳ ಅವರು ಹಾಜರಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಆರೋಪಿಗೆ ಜಾಮೀನು ರಹಿತ ವಾರಂಟ್ ಹೊರಡಿಸಿ ಆದೇಶಿಸಿದರು. ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಲಾಗಿದೆ. ಅರ್ಜಿದಾರರ ಪರ ವಕೀಲ ಸೂರ್ಯ ಮುಕುಂದರಾಜ್ ಅವರು ಹಾಜರಾಗಿದ್ದರು.

ಪುತ್ರಿಯಿಂದಲೇ ತಾಯಿ ವಿರುದ್ಧ ದೂರು ದಾಖಲು

ಪತ್ನಿಯಿಂದ ಉದ್ಯಮಿ ಕೊಲೆ?

ಪ್ರಜಾವಾಣಿ ವಾರ್ತೆ

ಸಂತೋಷ

ಉಮಾ

ಬೆಳಗಾವಿ: ಇಲ್ಲಿನ ರಿಯಲ್ ಎಸ್ಟೇಟ್ ಉದ್ಯಮಿ ಸಂತೋಷ ದುಂಡಪ್ಪ ಪದ್ಮಣ್ಣವರ (47) ಅವರ ಸಾವಿನ ಪ್ರಕರಣ ಹೊಸ ತಿರುವು ಪಡೆದಿದೆ. 'ಇದು ಸಂಚು ರೂಪಿಸಿ ಮಾಡಿದ ಕೊಲೆ' ಎಂದು ಪೊಲೀಸರು ಸಂದೇಹಪಟ್ಟಿದ್ದಾರೆ. ಬುಧವಾರ ಶವ ಹೊರ ತೆಗೆದು ತನಿಖೆ ಆರಂಭಿಸಲಾಗಿದೆ. ಸಂತೋಷ ಪತ್ನಿ ಹಾಗೂ ಇತರ ನಾಲ್ವರ ವಿರುದ್ಧ ಅವರ ಪುತ್ರಿ ಸಂಜನಾ ದೂರು ದಾಖಲಿಸಿದ್ದಾರೆ.

'ಸಂಜನಾ ಅವರ ತಾಯಿ ಉಮಾ (41), ಇವರ ಫೇಸ್‌ಬುಕ್ ಸ್ನೇಹಿತ, ಮಂಗಳೂರು ಮೂಲದ ಶೋಭಿತ್ ಗೌಡ (30), ಮನೆಗೆಲಸದವರಾದ ನಂದಾ ಕುರಿಯಾ, ಪ್ರಕಾಶ ಕುರಿಯಾ ಹಾಗೂ ಇನ್ನೊಬ್ಬ ಅಪರಿಚಿತ ಸೇರಿ ಕೊಲೆ ಮಾಡಿದ್ದಾರೆ' ಎಂದು ಎಫ್‌ಐಆರ್ ದಾಖಲಾಗಿದೆ.

ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ?: ಇಲ್ಲಿನ ಆಂಜನೇಯ ನಗರದ ಮೂರು ಅಂತಸ್ತಿನ ಕಟ್ಟಡದಲ್ಲಿ ಸಂತೋಷ ಅವರು ಪತ್ನಿ, ಪುತ್ರಿ ಮತ್ತು ಇಬ್ಬರು ಪುತ್ರರ ಜೊತೆ ವಾಸವಿದ್ದರು. ಅಕ್ಟೋಬರ್ 9ರಂದು ರಾತ್ರಿ ಏಕಾಏಕಿ ಮೃತಪಟ್ಟಿದ್ದರು. ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂದು ಪತ್ನಿ ಉಮಾ ತಿಳಿಸಿದ್ದರು. ಇದನ್ನು ನಂಬಿದ ಕುಟುಂಬದವರು ಅಕ್ಟೋಬರ್ 10ರಂದು ಅಂತ್ಯಕ್ರಿಯೆ ಮುಗಿಸಿದ್ದರು.

ಬೆಂಗಳೂರಿನಲ್ಲಿ ಶಿಕ್ಷಣ ಪಡೆಯುತ್ತಿದ್ದ ಅವರ ಪುತ್ರಿ ಸಂಜನಾ (19) ಅದೇ ದಿನ ಬೆಳಗಾವಿಗೆ ಬಂದರು. ತಮ್ಮ ತಂದೆಯ ಕೊನೆಯ ಕ್ಷಣಗಳನ್ನು ನೋಡಬೇಕೆಂದು ಬಯಸಿ, ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸತೊಡಗಿದರು. ಅವರನ್ನು ಗದರಿಸಿದ ತಾಯಿ ಉಮಾ, ಸ್ನಾನ ಮಾಡಿಕೊಂಡು ಬಾ ನಂತರ ತೋರಿಸುತ್ತೇನೆ ಎಂದು ಕಳಿಸಿದ್ದರು.

ಸಂಜನಾ ಅತ್ತ ಹೋಗುತ್ತಿದ್ದಂತೆಯೇ ತಮ್ಮ ಇಬ್ಬರು ಪುತ್ರರನ್ನು ಕರೆದ ಉಮಾ; ಕೊಲೆ ನಡೆದ ಸಮಯದ ಸಿಸಿಟಿವಿ ದೃಶ್ಯಾವಳಿಗಳನ್ನು ಡಿಲೀಟ್ ಮಾಡಿಸಿದ್ದರು. ಈ ವಿಷಯವನ್ನು ಇಬ್ಬರೂ ಬಾಲಕರು ತಮ್ಮ ಅಕ್ಕ ಸಂಜನಾಗೆ ತಿಳಿಸಿದರು. ಆ ಕ್ಷಣದಿಂದಲೇ ಸಂಜನಾಗೆ ಅನುಮಾನ ಶುರುವಾಯಿತು. ತನ್ನ ತಂದೆ ಆರೋಗ್ಯವಾಗಿದ್ದರು. ಅವರದು ಸಹಜ ಸಾವಲ್ಲ; ಕೊಲೆ ಎಂದು ಅನುಮಾನಿಸಿ ಅ.15ರಂದು ಇಲ್ಲಿನ ಮಾಳಮಾರುತಿ ಠಾಣೆಗೆ ದೂರು ನೀಡಿದರು.

ಪೊಲೀಸ್ ಮಾಹಿತಿ ಏನು?: 'ಉಮಾ ತನ್ನ ಫೇಸ್‌ಬುಕ್ ಸ್ನೇಹಿತ ಶೋಬಿತ್ ಗೌಡ ಜತೆ ಸಲುಗೆ ಬೆಳೆಸಿಕೊಂಡಿದ್ದರು. ಈ ಸಂದೇಹದಿಂದ ಸಂತೋಷ ಜಗಳ ಶುರು ಮಾಡಿದ್ದರು. ಅವರ ಉಪಟಳ ತಾಳದೇ ಉಮಾ ಕೊಲೆ ಸಂಚು ರೂಪಿಸಿದ್ದರು. ಅಕ್ಟೋಬರ್ 9ರಂದು ಕುಡಿಯುವ ನೀರಿನಲ್ಲಿ ನಿದ್ರೆ ಮಾತ್ರೆ ಹಾಕಿದ್ದರು. ಸಂತೋಷ ನಿದ್ರೆಗೆ ಜಾರಿದ ಮೇಲೆ ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ ಅನುಮಾನ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮೂರು ಅಂತಸ್ತಿನ ಸಂತೋಷ ಮನೆಯಲ್ಲಿ ಬೆಡ್‌ರೂಮೂ ಸೇರಿ 15 ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದರು. ಆದರೆ, ಸಾವಿನ ದಿನದ ಬಹುತೇಕ ಫುಟೇಜ್‌ಗಳನ್ನು ಡಿಲೀಟ್ ಮಾಡಿದ್ದು ಅನುಮಾನ ಹುಟ್ಟಿಸಿದೆ. ಎದುರು ಮನೆಯ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ, ಇಬ್ಬರು ಗಂಡಸರು ತಡರಾತ್ರಿ ಮನೆಯಿಂದ ಹೊರ ಹೋಗಿದ್ದು ಕಂಡುಬಂದಿದೆ. ಅವರ ವಿಚಾರಣೆ ಮೂಲಕ ಪ್ರಕರಣ ಬಯಲಿಗೆ ಬಂತು' ಎಂದೂ ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಸದಾಶಿವನಗರದಲ್ಲಿ ಹೂತಿದ್ದ ಸಂತೋಷ ಅವರ ಶವವನ್ನು ಹೊರತೆಗೆದ ಪೊಲೀಸರು, ಜಿಲ್ಲಾಸ್ಪ-ತ್ರೆಯ ಶವಾಗಾರಕ್ಕೆ ಸಾಗಿಸಿದರು. ಎಸಿ ಶ್ರವಣ್‌ಕುಮಾರ್ ಸಮ್ಮುಖದಲ್ಲಿ ಬಿಮ್ಸ್ ವೈದ್ಯರು, ಎಫ್‌ಎಸ್‌ಎಲ್, ವಿಧಿ ವಿಜ್ಞಾನ ಪ್ರಯೋಗಾಲಯದ ತಂಡ, ಪಾಲಿಕೆ ಸಿಬ್ಬಂದಿ, ಕಂದಾಯ ಅಧಿಕಾರಿಗಳ ತಂಡ ತನಿಖೆ ಆರಂಭಿಸಿದೆ.

ತಂದೆ ಕೊಲೆಯಾದ ಬಗ್ಗೆ ಯುವತಿ ದೂರು ನೀಡಿದ್ದಾರೆ. ಆರೋಪಿಗಳನ್ನು ವಿಚಾರಣೆ ಮಾಡಲಾಗಿದೆ. ಶವ ಹೊರತೆಗೆದು ತನಿಖೆ ಶುರು ಮಾಡಲಾಗಿದೆ.

ಯಡಾ ಮಾರ್ಟಿನ್ ಮಾರ್ಬನ್ಯಾಂಗ್
ನಗರ ಪೊಲೀಸ್ ಕಮಿಷನರ್, ಬೆಳಗಾವಿ

ನಯಾಬ್ ಸೈನಿ ಇಂದು ಪ್ರಮಾಣ

ಚಂಡೀಗಢ/ಪಂಚಕುಲ (ಪಿಟಿಐ): ಹರಿಯಾಣದ ನೂತನ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ನಯಾಬ್ ಸಿಂಗ್ ಸೈನಿ ಬುಧವಾರ ಅವಿರೋಧವಾಗಿ ಆಯ್ಕೆಯಾದರು. ಅದರ ಬೆನ್ನಲ್ಲೇ ಅವರು ಹೊಸ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಸೈನಿ ಅವರು ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಮೂಲಕ ಅವರು ಸತತ ಎರಡನೇ ಬಾರಿ ಮುಖ್ಯಮಂತ್ರಿ ಆಗಲಿದ್ದಾರೆ.

ಹರಿಯಾಣ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದರೆ ಸೈನಿ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಬಿಜೆಪಿ ಘೋಷಿಸಿತ್ತು.

ಶಾಸಕಾಂಗ ಪಕ್ಷದ ಸಭೆ: ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಸಂಬಂಧ ಬುಧವಾರ ಪಂಚಕುಲದಲ್ಲಿ ಸಭೆ ನಡೆಯಿತು. ಪಕ್ಷದ ಚುನಾಯಿತ ಶಾಸಕರೆಲ್ಲರೂ ಹಾಜರಾಗಿದ್ದರು. ಇಲ್ಲಿ ಸೈನಿ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನಾಯಕನ ಸ್ಥಾನಕ್ಕೆ ಸೈನಿ ಹೆಸರನ್ನು ಶಾಸಕ ಕೃಷ್ಣಕುಮಾರ್ ಬೇಡಿ ಪ್ರಸ್ತಾಪಿಸಿದರು. ಅನಿಲ್ ವಿಜ್ ಅವರು ಅನುಮೋದಿಸಿದರು. ಗೃಹ ಸಚಿವ ಅಮಿತ್ ಶಾ ಅವರು ಸೈನಿ ಅವರ ಆಯ್ಕೆಯನ್ನು ಘೋಷಿಸಿದರು. ಅಮಿತ್ ಶಾ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಕೇಂದ್ರ ವೀಕ್ಷಕರಾಗಿ ಸಭೆಯಲ್ಲಿ ಹಾಜರಿದ್ದರು.

ರಾಜ್ಯಪಾಲರ ಭೇಟಿ

ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಬೆನ್ನಲ್ಲೇ ಸೈನಿ ಅವರು ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಮಂಡಿಸಿದರು.

ಹರಿಯಾಣದಲ್ಲಿ ಹೊಸ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ನಯಾಬ್ ಸಿಂಗ್ ಸೈನಿ ಅವರಿಗೆ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಸಿಹಿ ತಿನಿಸಿದರು — ಪಿಟಿಐ ಚಿತ್ರ

ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ

ಒಮರ್ ಅಬ್ದುಲ್ಲಾ ಪ್ರಮಾಣವಚನ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು ಜಮ್ಮು-ಕಾಶ್ಮೀರದ ನೂತನ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಒಮರ್ ಅಬ್ದುಲ್ಲಾ ಅವರಿಗೆ ಪ್ರಮಾಣ ವಿಧಿ ಬೋಧಿಸಿದರು.

ಪಕ್ಷದ ಹಿರಿಯ ನಾಯಕ ಸುರಿಂದರ್ ಚೌಧರಿ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪಕ್ಷದ ನಾಯಕರಾದ ಸಕೀನಾ ಇಟ್ಟೂ, ಜಾವೇದ್ ದರ್, ಜಾವೇದ್ ರಾಣಾ ಹಾಗೂ ಸತೀಶ್ ಶರ್ಮಾ ಅವರು ಸಚಿವರಾಗಿ ಪ್ರಮಾಣ ಸ್ವೀಕರಿಸಿದರು.

ಸಂವಿಧಾನದ 370ನೇ ವಿಧಿ ಅನ್ವಯ ನೀಡಲಾಗಿದ್ದ ವಿಶೇಷ ಸ್ಥಾನಮಾನ ಹಿಂಪಡೆದ ನಂತರ ಅಸ್ತಿತ್ವಕ್ಕೆ ಬಂದಿರುವ ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಒಮರ್ ಅಬ್ದುಲ್ಲಾ ಪಾತ್ರರಾಗಿದ್ದಾರೆ. ಅಲ್ಲದೇ, ಒಮರ್, ಎರಡನೇ ಬಾರಿಗೆ ಮುಖ್ಯಮಂತ್ರಿಯಾದಂತಾಗಿದೆ.

ಇಲ್ಲಿನ ಎಸ್.ಕೆ.ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, 'ಇಂಡಿಯಾ' ಮೈತ್ರಿಕೂಟದ ನಾಯಕರಾದ ಕಾಂಗ್ರೆಸ್‌ನ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಡಿಎಂಕೆಯ ಕನಿಮೊಳಿ, ಎನ್‌ಸಿಪಿ (ಶರದ್ ಪವಾರ್ ಬಣ)ಯ ಸುಪ್ರಿಯಾ ಸುಳೆ, ಸಿಪಿಐನ ಡಿ.ರಾಜಾ, ಎಎಪಿಯ ಸಂಜಯ್ ಸಿಂಗ್ ಪಾಲ್ಗೊಂಡಿದ್ದರು. ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಕೂಡ ಇದ್ದರು.

ಜಮ್ಮು-ಕಾಶ್ಮೀರದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಯಾಗಿದೆ. ಇಲ್ಲಿನ ರಾಜ್ಯ ಸ್ಥಾನಮಾನ ಮರುಸ್ಥಾಪನೆ ಮಾಡುವುದಕ್ಕಾಗಿ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಪಕ್ಷಗಳು ಒಟ್ಟಾಗಿ ಹೋರಾಡಲಿವೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಸಿ.ಎಂ ಆಗುವುದು ಎಂದರೆ 'ಮುಳ್ಳಿನ ಕಿರೀಟ' ಧರಿಸಿದಂತೆ. ಮಗನ ಮುಂದೆ ಸವಾಲುಗಳಿವೆ. ಈ ಸವಾಲುಗಳನ್ನು ಎದುರಿಸಲು ಆತನಿಗೆ ಅಲ್ಲಾಹ ಆಶೀರ್ವದಿಸುತ್ತಾನೆ ಎಂಬ ನಂಬಿಕೆ ಇದೆ
ಫಾರೂಕ್ ಅಬ್ದುಲ್ಲಾ, ಎನ್‌ಸಿ ಅಧ್ಯಕ್ಷ

'ರಾಜ್ಯ ಸ್ಥಾನಮಾನ ಮರುಸ್ಥಾಪನೆ ಶೀಘ್ರ'

'ಜಮ್ಮು-ಕಾಶ್ಮೀರ ಬಹು ದಿನಗಳ ಕಾಲ ಕೇಂದ್ರಾಡಳಿತ ಪ್ರದೇಶವಾಗಿ ಉಳಿಯುವುದಿಲ್ಲ ಹಾಗೂ ಶೀಘ್ರವೇ ರಾಜ್ಯ ಸ್ಥಾನಮಾನ ಮರುಸ್ಥಾಪನೆಯಾಗುವ ಆಶಾಭಾವ ಹೊಂದಿದ್ದೇನೆ' ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದರು.

ಪಿಟಿಐ ವಿಡಿಯೊ ಜೊತೆ ಮಾತನಾಡಿ ಅವರು ಈ ಆಶಯ ವ್ಯಕ್ತಪಡಿಸಿದ್ದಾರೆ.

'ನನ್ನ ವಾಹನ ಸಂಚರಿಸುವ ಸಂದರ್ಭದಲ್ಲಿ 'ಗ್ರೀನ್ ಕಾರಿಡಾರ್' ಇರಕೂಡದು. ಈ ಬಗ್ಗೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದೇನೆ' ಎಂದರು. 'ನನ್ನದು ಎಲ್ಲರನ್ನೂ ಒಳಗೊಳ್ಳುವ ಸರ್ಕಾರ. ಇದೇ ಕಾರಣಕ್ಕೆ, ನೌಶೇರಾ ಕ್ಷೇತ್ರದ ಶಾಸಕ ಸುರೇಂದ್ರ ಚೌಧರಿ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗಿದೆ. ಜಮ್ಮು ಭಾಗದ ಜನರಿಗೂ ಸರ್ಕಾರದಲ್ಲಿ ಅವಕಾಶ ನೀಡಬೇಕು. ಸರ್ಕಾರದಲ್ಲಿ ತಮಗೆ ಪ್ರಾತಿನಿಧ್ಯ ಇಲ್ಲ ಎಂಬ ಭಾವನೆ ಅವರಲ್ಲಿ ಮೂಡಲು ಅವಕಾಶ ನೀಡುವುದಿಲ್ಲ ಎಂದು ನಾನು ಈ ಹಿಂದೆಯೇ ಹೇಳಿದ್ದೆ' ಎಂದು ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು.

ಆಗ ಸೋಲಿನ ರುಚಿ..ಈಗ ಸಿ.ಎಂ ಕುರ್ಚಿ

ಒಮರ್ ಅಬ್ದುಲ್ಲಾ ಪ್ರಮಾಣ ವಚನ ಸ್ವೀಕರಿಸಿದರು —ಪಿಟಿಐ ಚಿತ್ರ

ನಾಲ್ಕು ತಿಂಗಳ ಅವಧಿಯಲ್ಲಿ ಒಮರ್ ಅಬ್ದುಲ್ಲಾ ಅವರು ತಮ್ಮ ರಾಜಕೀಯ ಜೀವನದಲ್ಲಿ ಸೋಲಿನ ರುಚಿ ಉಂಡಿದ್ದಾರೆ. ಈಗ ಮತ್ತೆ ಮುಖ್ಯಮಂತ್ರಿಯಾಗುವ ಮೂಲಕ ಗೆಲುವಿನ ನಗೆಯನ್ನೂ ಬೀರಿದ್ದಾರೆ.

ಜೂನ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಒಮರ್ ಅಬ್ದುಲ್ಲಾ ಗೆಲುವು ಸಾಧಿಸಲಿಲ್ಲ. ಪಕ್ಷದ ಸಾಧನೆಯೂ ಅಷ್ಟಕಷ್ಟೆ. ಆದರೆ, ಇತ್ತೀಚೆಗೆ ಜಮ್ಮು-ಕಾಶ್ಮೀರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷಕ್ಕೆ ಭರ್ಜರಿ ಗೆಲುವು ತಂದುಕೊಟ್ಟ ಅವರಿಗೆ ಮತ್ತೊಮ್ಮೆ ಸಿ.ಎಂ ಪಟ್ಟ ದಕ್ಕಿದೆ.

ಜಮ್ಮು-ಕಾಶ್ಮೀರ ರಾಜಕಾರಣದಲ್ಲಿ ಪ್ರಭಾವ ಹೊಂದಿರುವ ಅಬ್ದುಲ್ಲಾ ವಂಶದ ಕುಡಿ, 54 ವರ್ಷದ ಒಮರ್, ಬುಧವಾರ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ತಾತ ಶೇಖ್ ಅಬ್ದುಲ್ಲಾ, ತಂದೆ ಫಾರೂಕ್ ಅಬ್ದುಲ್ಲಾ ಕೂಡ ಮುಖ್ಯಮಂತ್ರಿಯಾಗಿದ್ದರು. ಒಮರ್ ಅವರು 2009-2014ರವರೆಗೆ ಆಗಿನ ಜಮ್ಮು-ಕಾಶ್ಮೀರ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ಒಮರ್ ಸಂಪುಟಕ್ಕೆ ಸೇರದ ಕಾಂಗ್ರೆಸ್

ಎನ್‌ಸಿ ಮಿತ್ರಪಕ್ಷವಾದ ಕಾಂಗ್ರೆಸ್ ನೂತನ ಸಚಿವ ಸಂಪುಟದಿಂದ ಹೊರಗುಳಿಯಲು ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ. 'ಒಂದು ಸಚಿವ ಸ್ಥಾನವನ್ನು ಕಾಂಗ್ರೆಸ್ ನೀಡಲಾಗಿತ್ತು. ಪಕ್ಷ ಅದನ್ನು ನಿರಾಕರಿಸಿತಲ್ಲದೇ, ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಲು ನಿರ್ಧರಿಸಿತು' ಎಂದು ಮೂಲಗಳು ಹೇಳಿವೆ.

'ಸದ್ಯಕ್ಕೆ ಜಮ್ಮು-ಕಾಶ್ಮೀರ ಸರ್ಕಾರವನ್ನು ಪಕ್ಷ ಸೇರುತ್ತಿಲ್ಲ. ಜಮ್ಮು-ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ಮರುಸ್ಥಾಪನೆ ಮಾಡಬೇಕು ಎಂಬುದು ಕಾಂಗ್ರೆಸ್‌ನ ಬಲವಾದ ಬೇಡಿಕೆ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಹಲವಾರು ಸಾರ್ವಜನಿಕ ಸಭೆಗಳಲ್ಲಿ ಇದೇ ಭರವಸೆ ನೀಡಿದ್ದಾರೆ. ಈ ಬೇಡಿಕೆ ಈಡೇರಬೇಕು' ಎಂದು ಕಾಂಗ್ರೆಸ್ ಪಕ್ಷದ ಜಮ್ಮು-ಕಾಶ್ಮೀರ ಘಟಕದ ಅಧ್ಯಕ್ಷ ತಾರಿಕ್ ಹಮೀದ್ ಕರ್ರಾ ಹೇಳಿದರು.

ಇದೇ ವಿಚಾರವಾಗಿ, ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೂ ಮುನ್ನ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, 'ಕಾಂಗ್ರೆಸ್ ಪಕ್ಷ ಸದ್ಯಕ್ಕೆ ಸಂಪುಟ ಸೇರುತ್ತಿಲ್ಲ. ಆದರೆ, ಆ ಪಕ್ಷದೊಂದಿಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ' ಎಂದರು.

'ಜಮ್ಮು-ಕಾಶ್ಮೀರದಲ್ಲಿ ವಿಧಾನಸಭೆ ಮಾತ್ರ ಇದೆ. ಹೀಗಾಗಿ ಸಂಪುಟದ ಗಾತ್ರ ವಿಚಾರವಾಗಿ ನಿರ್ಬಂಧ ಇದೆ' ಎಂದರು. '40 ಅಥವಾ 45 ಸಚಿವರನ್ನು ಒಳಗೊಂಡ ಸಂಪುಟವಿದ್ದ ಕಾಲ ಮುಗಿಯಿತು' ಎಂದ ಅವರು, 'ಮುಫ್ತಿ ಸಯೀದ್ ನೇತೃತ್ವದ ಸರ್ಕಾರದಲ್ಲಿ ಎಲ್ಲ ಶಾಸಕರಿಗೆ ಸಚಿವ ದರ್ಜೆ ಒದಗಿಸಲಾಗಿತ್ತು' ಎಂದು ಮೆಲುಕು ಹಾಕಿದರು.

'ಮಹಾಯುತಿ' ಮತ್ತು 'ಮಹಾವಿಕಾಸ ಆಘಾಡಿ'ಗೆ ಸವಾಲು

ಜಟಿಲವಾಗಿರುವ ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮಹಾರಾಷ್ಟ್ರ ರಾಜಕೀಯವು 2019ರ ಬಳಿಕ ಗಮನಾರ್ಹ ಬದಲಾವಣೆಗಳನ್ನು ಕಂಡಿದ್ದು, ನಾಲ್ಕು ಪಕ್ಷಗಳ ಎರಡು ಸರಳ ಮೈತ್ರಿಯು, ಆರು ಪಕ್ಷಗಳ ಸಂಕೀರ್ಣ ಮೈತ್ರಿಯಾಗಿ ಪರಿವರ್ತನೆಯಾಗಿದೆ.

ಇದರ ಪರಿಣಾಮ, ಬಿಜೆಪಿ ನೇತೃತ್ವದ 'ಮಹಾಯುತಿ' (ಎನ್‌ಡಿಎ) ಮತ್ತು ಕಾಂಗ್ರೆಸ್ ನೇತೃತ್ವದ 'ಮಹಾ ವಿಕಾಸ್ ಅಘಾಡಿ' (ಇಂಡಿಯಾ) ಮೈತ್ರಿಯಲ್ಲಿ ಸೀಟು ಹಂಚಿಕೆ ದೀರ್ಘಾವಧಿಯ ಸಮಸ್ಯೆಯಾಗಿ ಬೆಳೆದಿದೆ.

ಚುನಾವಣಾ ಆಯೋಗವು ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ ಮಂಗಳವಾರ ಚುನಾವಣಾ ವೇಳಾಪಟ್ಟಿ ಬಿಡುಗಡೆ ಮಾಡಿದೆ. ಇದರ ಬೆನ್ನಲ್ಲೇ ಎರಡೂ ಮೈತ್ರಿ ಕೂಟಗಳಲ್ಲಿ ಸೀಟು ಹಂಚಿಕೆ ಕುರಿತು ಅಂತಿಮ ಹಂತದ ಮಾತುಕತೆಗಳು ನಡೆಯುತ್ತಿವೆ.

1990ರಲ್ಲಿ ದಿವಂಗತ ಬಾಳಾಸಾಹೇಬ್ ಠಾಕ್ರೆ ನೇತೃತ್ವದಲ್ಲಿ ಅವಿಭಜಿತ ಶಿವಸೇನಾ ಮತ್ತು ಪ್ರಮೋದ್ ಮಹಾಜನ್, ಗೋಪಿನಾಥ್ ಮುಂಡೆ ನೇತೃತ್ವದ ಬಿಜೆಪಿ ಒಗ್ಗೂಡಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. 1999ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಮತ್ತು ಶರದ್ ಪವಾರ್ ಅವರ ಎನ್‌ಸಿಪಿ ಪಕ್ಷಗಳು ಒಗ್ಗೂಡಿದ್ದವು.

ಆದರೆ, 2014ರಲ್ಲಿ ಶಿವಸೇನಾ-ಬಿಜೆಪಿ ಹಾಗೂ ಕಾಂಗ್ರೆಸ್- ಎನ್‌ಸಿಪಿ ಮೈತ್ರಿಗಳು ಮುರಿದುಬಿದ್ದವು. ಅವು ಪ್ರತ್ಯೇಕವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದವು.

2022ರ ಜೂನ್-ಜುಲೈನಲ್ಲಿ ಶಿವಸೇನಾ ಅಧ್ಯಕ್ಷ ಮತ್ತು ಆಗಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ಏಕನಾಥ ಶಿಂದೆ ಬಂಡಾಯವೆದ್ದರು. ಇದರ ಪರಿಣಾಮ ಎಂವಿಎ ಸರ್ಕಾರ ಪತನವಾಯಿತು. ಬಳಿಕ ಶಿಂದೆ ಅವರು ಬಿಜೆಪಿ ಬೆಂಬಲದೊಂದಿಗೆ ಮುಖ್ಯಮಂತ್ರಿಯಾದರು. ಇದೀಗ ಶಿಂದೆ ನೇತೃತ್ವದ ಶಿವಸೇನಾ ಪಕ್ಷ 'ಬಿಲ್ಲು ಮತ್ತು ಬಾಣ'ದ ಚಿಹ್ನೆಯನ್ನು ಹೊಂದಿದೆ. ಉದ್ಧವ್ ಠಾಕ್ರೆ ಅವರು ಶಿವಸೇನಾ (ಯುಬಿಟಿ) ಬಣದ ಮುಖ್ಯಸ್ಥರಾಗಿದ್ದು 'ಪಂಜು' ಚಿಹ್ನೆ ಹೊಂದಿದ್ದಾರೆ.

2023ರ ಜೂನ್-ಜುಲೈನಲ್ಲಿ ಅಜಿತ್ ಪವಾರ್ ಅವರು ತಮ್ಮ ಚಿಕ್ಕಪ್ಪ ಶರದ್ ಪವಾರ್ ವಿರುದ್ಧ ಬಂಡಾಯವೆದ್ದು 'ಮಹಾಯುತಿ' ಸರ್ಕಾರದ ಜತೆ ಸೇರಿ ಉಪ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದರು. ಇದೀಗ ಅಜಿತ್ ಪವಾರ್ ಅವರ ನೇತೃತ್ವದ ಎನ್‌ಸಿಪಿ ಬಣವು 'ಗಡಿಯಾರ' ಚಿಹ್ನೆಯನ್ನು ಹೊಂದಿದ್ದರೆ, ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) 'ಕಹಳೆ ಊದುತ್ತಿರುವ ಮನುಷ್ಯ'ನ ಚಿಹ್ನೆಯನ್ನು ಹೊಂದಿದೆ.

'ಶಿಂದೆ 'ತ್ಯಾಗ'ಕ್ಕೆ ಸಿದ್ಧರಿರಬೇಕು'

ಏಕನಾಥ ಶಿಂದೆ

ಮೈತ್ರಿಯನ್ನು ಅಖಂಡವಾಗಿಡಲು ಬಿಜೆಪಿ ಮಾಡಿದಂತೆ, ವಿಧಾನಸಭಾ ಚುನಾವಣಾ ಸೀಟು ಹಂಚಿಕೆ ವಿಷಯದಲ್ಲಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು 'ತ್ಯಾಗ' ಮಾಡಲು ಸಿದ್ಧರಿರಬೇಕು ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಶೇಖರ ಬವಾಂಕುಲೆ ಹೇಳಿದ್ದಾರೆ.

'ಶಿಂದೆ ಅವರು ಮುಕ್ತ ಮನಸ್ಸಿನಿಂದ ಇರಬೇಕು ಮತ್ತು ತ್ಯಾಗ ಮಾಡಲು ಸಿದ್ಧರಾಗಿರಬೇಕು. ನಾವು ಸಹ ಮೈತ್ರಿಯನ್ನು ಎತ್ತಿಹಿಡಿಯಲು ತ್ಯಾಗ ಮಾಡಿದ್ದೇವೆ' ಎಂದ ಅವರು, 'ಬಿಜೆಪಿಯು ಹಿಂದೆ ಹೊಂದಿದ್ದ ಸ್ಥಾನಗಳಲ್ಲಿ ಸ್ಪರ್ಧಿಸುವ ಗುರಿಯನ್ನು ಹೊಂದಿದೆ' ಎಂದು ನಾಗಪುರದಲ್ಲಿ ಸುದ್ದಿವಾಹಿನಿಯೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ

ಮಹಾರಾಷ್ಟ್ರ: ಸೀಟು ಹಂಚಿಕೆ ಹಿನ್ನೋಟ

ಬಿಜೆಪಿ- ಶಿವಸೇನಾ

1990: ಮೊದಲ ಬಾರಿಗೆ ಬಿಜೆಪಿ ಮತ್ತು ಶಿವಸೇನಾ ಒಗ್ಗೂಡಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. 183 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸೇನಾ 52 ಕ್ಷೇತ್ರಗಳಲ್ಲಿ ಗೆದ್ದಿತ್ತು. 105 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ 42ರಲ್ಲಿ ಗೆದ್ದಿತ್ತು.

1995: ಹಿಂದಿನ ಸೀಟು ಹಂಚಿಕೆಯೇ ಮುಂದುವರಿಯಿತು. ಈ ಬಾರಿ ಶಿವಸೇನಾ 73ರಲ್ಲಿ ಮತ್ತು ಬಿಜೆಪಿ 65ರಲ್ಲಿ ಗೆಲುವಿನ ನಗೆ ಬೀರಿತು. ಸೇನಾ ಮತ್ತು ಬಿಜೆಪಿ ಮೈತ್ರಿಯು 1995-99ರವರೆಗೆ ಸರ್ಕಾರ ನಡೆಸಿತು.

1999: ಶಿವಸೇನಾ 171ರಲ್ಲಿ ಸ್ಪರ್ಧಿಸಿ 69ರಲ್ಲಿ ಗೆಲುವು ಪಡೆಯಿತು. 117 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ 56ರಲ್ಲಿ ಜಯ ಪಡೆಯಿತು.

2004: ಹಿಂದಿನ ಸೀಟು ಹಂಚಿಕೆ ಸೂತ್ರವೇ ಮುಂದುವರಿಯಿತು. ಶಿವಸೇನಾ 62ರಲ್ಲಿ ಬಿಜೆಪಿ 54ರಲ್ಲಿ ಗೆದ್ದಿತ್ತು.

2009: ಸೀಟು ಹಂಚಿಕೆ ಸೂತ್ರದಲ್ಲಿ ಬದಲಾವಣೆಯಾಯಿತು. 169 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸೇನಾ 44ರಲ್ಲಿ ಗೆದ್ದರೆ, 119 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ 46ರಲ್ಲಿ ಗೆಲುವು ಪಡೆಯಿತು. ಇದೇ ಮೊದಲ ಬಾರಿಗೆ ಬಿಜೆಪಿಯು ಶಿವಸೇನಾಗಿಂತ ಹೆಚ್ಚು ಸೀಟುಗಳನ್ನು ಪಡೆಯಿತು.

2014: ಮೈತ್ರಿ ಮುರಿದು ಬಿದ್ದಿತು. ಬಿಜೆಪಿ 122 ಮತ್ತು ಸೇನಾ 63ರಲ್ಲಿ ಗೆಲುವು ಪಡೆಯಿತು.

2019: ಬಿಜೆಪಿ ಸ್ಪರ್ಧಿಸಿದ್ದ 164 ಕ್ಷೇತ್ರಗಳಲ್ಲಿ 105ರಲ್ಲಿ ಗೆಲುವು ಪಡೆದರೆ, 124 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಶಿವಸೇನಾ 56ರಲ್ಲಿ ಜಯ ಸಾಧಿಸಿತು.

ಕಾಂಗ್ರೆಸ್- ಎನ್‌ಸಿಪಿ

1999: ಒಂದಾಗಿ ಚುನಾವಣೆ ಎದುರಿಸಿದ ಕಾಂಗ್ರೆಸ್ ಮತ್ತು ಎನ್‌ಸಿಪಿ ಪಕ್ಷಗಳು ಕ್ರಮವಾಗಿ 75 ಮತ್ತು 58 ಕ್ಷೇತ್ರಗಳಲ್ಲಿ ಗೆದ್ದು ಸರ್ಕಾರ ರಚಿಸಿದವು.

2004: 172 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 69ರಲ್ಲಿ ಹಾಗೂ 114 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎನ್‌ಸಿಪಿ 71ರಲ್ಲಿ ಗೆಲುವಿನ ನಗೆ ಬೀರಿತ್ತು.

2009: ಹಿಂದಿನ ಸೀಟು ಹಂಚಿಕೆ ಸೂತ್ರವೇ ಮುಂದುವರಿಯಿತು. ಕಾಂಗ್ರೆಸ್ 82 ಮತ್ತು ಎನ್‌ಸಿಪಿ 62 ಕ್ಷೇತ್ರಗಳಲ್ಲಿ ಜಯ ಪಡೆಯಿತು.

2014: ಮೈತ್ರಿ ಮುರಿದು ಕಾಂಗ್ರೆಸ್ ಮತ್ತು ಎನ್‌ಸಿಪಿ ಪ್ರತ್ಯೇಕವಾಗಿ ಸ್ಪರ್ಧಿಸಿದವು. ಅವು ಕ್ರಮವಾಗಿ 42 ಮತ್ತು 41 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದವು.

2019: ಎನ್‌ಸಿಪಿ ಮತ್ತು ಕಾಂಗ್ರೆಸ್ ತಲಾ 125 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಕ್ರಮವಾಗಿ 54 ಮತ್ತು 44 ಕ್ಷೇತ್ರಗಳಲ್ಲಿ ಗೆದ್ದಿದ್ದವು.

ಜಾರಂಗೆ ಬೆಂಬಲ ಪಡೆಯಲು ನಾಯಕರ ಕಾತುರ

ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಘೋಷಣೆ ಬೆನ್ನಲ್ಲೇ, ಮರಾಠ ಮೀಸಲು ಹೋರಾಟಗಾರ ಮನೋಜ್ ಜಾರಂಗೆ ಅವರನ್ನು ಭೇಟಿ ಮಾಡಲು ವಿವಿಧ ಪಕ್ಷಗಳ ನಾಯಕರು ಮುಗಿಬೀಳುತ್ತಿದ್ದಾರೆ.

ಕಳೆದ ವರ್ಷದವರೆಗೆ ಅಷ್ಟಾಗಿ ತಿಳಿದಿಲ್ಲದ ಜಾರಂಗೆ, ಮೀಸಲು ಕೋಟಾಕ್ಕಾಗಿ ಆಗ್ರಹಿಸಿ ಕಳೆದ ವರ್ಷದ ಸೆಪ್ಟೆಂಬರ್‌ನಿಂದ ಆಂದೋಲನ ಆರಂಭಿಸಿದರು. ಅವರು ಮರಾಠವಾಡ ಪ್ರದೇಶದ ಜಲ್ನಾ ಜಿಲ್ಲೆಯ ಅಂತರವಾಲಿ ಸಾರತಿ ಗ್ರಾಮದಲ್ಲಿ ಕನಿಷ್ಠ ಅರ್ಧ ಡಜನ್‌ಗೂ ಹೆಚ್ಚು ಉಪವಾಸ ನಿರಶನ ನಡೆಸುವ ಮೂಲಕ ಜನಪ್ರಿಯ ವ್ಯಕ್ತಿಯಾಗಿ ರೂಪುಗೊಂಡಿದ್ದಾರೆ.

ಮರಾಠ ಮೀಸಲು ಹೋರಾಟವು ಲೋಕಸಭಾ ಚುನಾವಣೆಯಲ್ಲಿ 'ಮಹಾಯುತಿ' ಮೈತ್ರಿಗೆ ಭಾರಿ ಪೆಟ್ಟು ನೀಡಿತ್ತು. ಸರ್ಕಾರವು ಮರಾಠ ಸಮುದಾಯದ ಬೇಡಿಕೆಗಳನ್ನು ಈಡೇರಿಸಬೇಕು ಅಥವಾ ವಿಧಾನಸಭಾ ಚುನಾವಣೆಯಲ್ಲಿ ಅದರ ಪರಿಣಾಮಗಳನ್ನು ಎದುರಿಸಬೇಕು ಎಂದು ಜಾರಂಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ವಿರುದ್ಧ ಜಾರಂಗೆ ತೀವ್ರ ವಾಗ್ದಾಳಿ ನಡೆಸಿದ ಬಳಿಕವೂ, ವಿವಿಧ ರಾಜಕೀಯ ಪಕ್ಷಗಳ ಹಲವು ನಾಯಕರು, ಚುನಾವಣಾ ಆಕಾಂಕ್ಷಿಗಳು ಕೆಲ ದಿನಗಳಿಂದ ಅವರನ್ನು ಭೇಟಿ ಮಾಡಿ, ಬೆಂಬಲ ಪಡೆಯಲು ಯತ್ನಿಸುತ್ತಿದ್ದಾರೆ.

ಯುಟ್ಯೂಬ್ ವೀಕ್ಷಿಸಿ ಬಂದೂಕು ಬಳಕೆ ಕಲಿತಿದ್ದ ಶೂಟರ್‌ಗಳು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣದ ಆರೋಪಿಗಳು, ಮುಂಬೈನ ಕುರ್ಲಾ ಪ್ರದೇಶದ ಬಾಡಿಗೆ ಮನೆಯಲ್ಲಿ ಯುಟ್ಯೂಬ್ ವಿಡಿಯೊಗಳನ್ನು ನೋಡಿ ಬಂದೂಕು ಬಳಸುವುದನ್ನು ಕಲಿತಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ಇಲ್ಲಿಯವರೆಗೆ ನಾಲ್ವರನ್ನು ಬಂಧಿಸಿದ್ದಾರೆ. ಮತ್ತೊಬ್ಬ ಶಂಕಿತ ಶೂಟರ್ ಶಿವಕುಮಾರ್ ಗೌತಮ್ ಮತ್ತು ಆರೋಪಿ ಮೊಹಮ್ಮದ್ ಜಿಶನ್ ಅಖ್ತರ್‌ಗಾಗಿ ಶೋಧ ಮುಂದುವರಿದಿದೆ.

'ಉತ್ತರ ಪ್ರದೇಶದ ವಿವಾಹ ಸಮಾರಂಭಗಳಲ್ಲಿ ಗುಂಡು ಹಾರಿಸುವಾಗ ಬಂದೂಕು ಬಳಸುವುದನ್ನು ಗೌತಮ್ ಕಲಿತಿದ್ದಾನೆ ಮತ್ತು ಮುಖ್ಯ ಶೂಟರ್ ಅನ್ನೂ ಆತನೇ ನೇಮಕ ಮಾಡಿದ್ದ ಎಂಬ ಮಾಹಿತಿ ಇತರ ಆರೋಪಿಗಳ ವಿಚಾರಣೆ ವೇಳೆ ತಿಳಿದು ಬಂದಿದೆ' ಎಂದು ಅವರು ಹೇಳಿದ್ದಾರೆ.

ಸುಮಾರು 4 ವಾರಗಳ ಕಾಲ ವಿಡಿಯೊಗಳನ್ನು ವೀಕ್ಷಿಸಿ, ಬಂದೂಕು ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡುವುದನ್ನು ಕಲಿತಿದ್ದಾಗಿ ಅವರು ಬಾಯಿಬಿಟ್ಟಿದ್ದಾರೆ.

ಸಿದ್ದೀಕಿ ಹತ್ಯೆಗೆ ಸಂಬಂಧಿಸಿ-ಸಂವಹನ ನಡೆಸಲು ಆ್ಯಪ್‌ಗಳಾದ ಸ್ನ್ಯಾಪ್‌ಚಾಟ್ ಮತ್ತು ಇನ್‌ಸ್ಟಾಗ್ರಾಮ್‌ಗಳನ್ನು ಬಳಸಿದ್ದಾಗಿ ಆರೋಪಿಗಳು ಮಾಹಿತಿ ನೀಡಿದ್ದಾರೆ ಎಂದು ಹೇಳಿದ್ದಾರೆ.

ಬಾಂಬ್ ಬೆದರಿಕೆ: ವಿಮಾನ ಸಂಚಾರ ವ್ಯತ್ಯಯ

ಬೆಂಗಳೂರಿಗೆ ಹೊರಟಿದ್ದ ವಿಮಾನ ದೆಹಲಿಗೆ ವಾಪಸ್ • ಅಹಮದಾಬಾದ್‌ನಲ್ಲಿ ಇಳಿದ ಇಂಡಿಗೊ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬಾಂಬ್ ಬೆದರಿಕೆ ಕರೆಗಳಿಂದಾಗಿ ದೇಶದ ಹಲವು ನಗರಗಳಿಗೆ ಸಂಚರಿಸುತ್ತಿದ್ದ ವಿಮಾನಗಳ ಹಾರಾಟಕ್ಕೆ ಬುಧವಾರವೂ ಅಡ್ಡಿ ಉಂಟಾಗಿ, ಆತಂಕ ಮನೆ ಮಾಡಿತ್ತು.

ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ, ದೆಹಲಿಯಿಂದ ಬೆಂಗಳೂರಿಗೆ ಹೊರಟಿದ್ದ ಆಕಾಸಾ ಏರ್‌ನ ವಿಮಾನ ದೆಹಲಿಗೆ ಮರಳಿತು.

ಈ ವಿಮಾನದಲ್ಲಿ 177 ಪ್ರಯಾಣಿಕರು ಹಾಗೂ 7 ಜನ ಸಿಬ್ಬಂದಿ ಇದ್ದರು. ನಿಲ್ದಾಣದಲ್ಲಿ 'ಎಮರ್ಜೆನ್ಸಿ' ಘೋಷಿಸಲಾಗಿತ್ತು.

ಮುಂಬೈನಿಂದ ದೆಹಲಿಗೆ ಹೊರಟಿದ್ದ ಇಂಡಿಗೊ ಸಂಸ್ಥೆಯ ವಿಮಾನವನ್ನು ಅಹಮದಾಬಾದ್‌ನಲ್ಲಿ ಇಳಿಸಲಾಯಿತು.

'ತನ್ನ ಎರಡು ವಿಮಾನಗಳಲ್ಲಿ ಬಾಂಬ್ ಇಡಲಾಗಿದೆ ಎಂಬ ಕರೆಗಳು ಬಂದಿದ್ದವು. ಪರಿಶೀಲನೆ ನಂತರ ಅವು ಹಾರಾಟ ನಡೆಸಿದವು' ಎಂದು ಸ್ಪೈಸ್‌ಜೆಟ್ ತಿಳಿಸಿದೆ. ಮಂಗಳವಾರವಷ್ಟೆ, 8 ವಿಮಾನಗಳಿಗೆ ಬಾಂಬ್ ಬೆದರಿಕೆ ಕರೆ ಬಂದಿದ್ದವು.

ಸಂಸದೀಯ ಸಮಿತಿಗೆ ಮಾಹಿತಿ: ಬಾಂಬ್ ಬೆದರಿಕೆ ಕರೆಗಳ ಕುರಿತು ನಾಗರಿಕ ವಿಮಾನಯಾನ ಕಾರ್ಯದರ್ಶಿ ವುಮ್ಲುನ್‌ಮಾಂಗ್ ವುವಾಲ್ನಮ್ ಅವರು ಸಾರಿಗೆ, ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ವಿಷಯಗಳ ಕುರಿತ ಸಂಸದೀಯ ಸಮಿತಿಗೆ ವಿವರಣೆ ನೀಡಿದ್ದಾರೆ.

'ಬೆದರಿಕೆ ಕರೆಗಳನ್ನು ಮಾಡಿರುವ ಆರೋಪಿಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ವಿಷಯವು ಸೂಕ್ಷ್ಮವಾಗಿದ್ದು, ತನಿಖೆಯೂ ನಡೆಯುತ್ತಿರುವ ಕಾರಣ ಆರೋಪಿ ಕುರಿತ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳಲುವುದಿಲ್ಲ' ಎಂಬುದಾಗಿ ಸಮಿತಿಗೆ ತಿಳಿಸಿದ್ದಾರೆ.

'ಬಾಂಬ್ ಬೆದರಿಕೆ ಕರೆಗಳನ್ನು ಮಾಡುವ ವ್ಯಕ್ತಿಗಳ ಹೆಸರುಗಳನ್ನು 'ನೋ ಫ್ಲೈ' ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಛತ್ತೀಸಗಢದ ಬಾಲಕ ವಶಕ್ಕೆ

ಮುಂಬೈ/ರಾಜನಂದಗಾಂವ್: ಮೂರು ವಿಮಾನಗಳನ್ನು ಗುರಿಯಾಗಿಸಿ ಬಾಂಬ್ ಬೆದರಿಕೆ ಕುರಿತು ಅಕ್ಟೋಬರ್ 14ರಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಕ್ಕೆ ಸಂಬಂಧಿಸಿ, ಛತ್ತೀಸಗಢದ 17 ವರ್ಷದ ಬಾಲಕನನ್ನು ಮುಂಬೈ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಹಿರಿಯ ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

'ಅಂಗಡಿಯೊಂದರ ಮಾಲೀಕನ ಜೊತೆ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ವಿವಾದದ ಕಾರಣದಿಂದ ಬಾಲಕ 'ಎಕ್ಸ್'ನಲ್ಲಿ ಖಾತೆ ತೆರೆದು, ಈ ಪೋಸ್ಟ್‌ಗಳನ್ನು ಮಾಡಿದ್ದಾನೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಅವರು ಹೇಳಿದ್ದಾರೆ.

'ಬಾಲಕನನ್ನು ಮುಂಬೈನ ಬಾಲನ್ಯಾಯ ಮಂಡಳಿ ಮುಂದೆ ಮಂಗಳವಾರ ಹಾಜರಪಡಿಸಲಾಗಿತ್ತು. ಆತನನ್ನು ನಾಲ್ಕು ದಿನ ಬಾಲಮಂದಿರಕ್ಕೆ ಕಳುಹಿಸಲಾಗಿದೆ' ಎಂಧು ಡಿಸಿಪಿ (ವಲಯ 8) ಮನೀಷ್ ಕಲ್ವಾನಿಯಾ ಹೇಳಿದ್ದಾರೆ.

ತನಿಖೆ ಆರಂಭಿಸಿದ ದೆಹಲಿ ಪೊಲೀಸ್

ದೇಸೀಯ ಮತ್ತು ಅಂತರರಾಷ್ಟ್ರೀಯ ವಿಮಾನಗಳಲ್ಲಿ ಬಾಂಬ್ ಇಟ್ಟಿರುವುದಾಗಿ ಕಳೆದ ಎರಡು ದಿನಗಳಲ್ಲಿ ಏಳು ಹುಸಿ ಬೆದರಿಕೆ ಕರೆಗಳು ಬಂದಿದ್ದಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ತನಿಖೆ ಆರಂಭಿಸಿದ್ದಾರೆ ಎಂದು ಮೂಲಗಳು ಬುಧವಾರ ಹೇಳಿವೆ.

ಸಂಕ್ಷಿಪ್ತ ಸುದ್ದಿ

'ಮಸೀದಿ ಮಹಡಿ ಉರುಳಿಸುವ ಆದೇಶ ಸಿಕ್ಕಿದೆ'

ಶಿಮ್ಲಾ (ಪಿಟಿಐ): ವಿವಾದಿತ ಮಸೀದಿಯ ಮೂರು ಮಹಡಿಗಳನ್ನು ಉರುಳಿಸಬೇಕು ಎಂದು ಮುನಿಸಿಪಲ್ ಆಯುಕ್ತರ ನ್ಯಾಯಾಲಯ ನೀಡಿರುವ ಆದೇಶದ ಪ್ರತಿಯು ಸಿಕ್ಕಿದೆ, ಇದನ್ನು ವಕ್ಫ್ ಮಂಡಳಿಗೆ ತಿಳಿಸಲಾಗಿದೆ ಎಂದು ಸಂಜೌಲಿ ಮಸೀದಿ ಸಮಿತಿಯ ಅಧ್ಯಕ್ಷ ಮೊಹಮ್ಮದ್ ಲತೀಫ್ ಅವರು ಬುಧವಾರ ತಿಳಿಸಿದ್ದಾರೆ.

ಆದೇಶವನ್ನು ಕಾರ್ಯರೂಪಕ್ಕೆ ತರಲು ವಕ್ಫ್ ಮಂಡಳಿ ಮತ್ತು ಮಸೀದಿ ಸಮಿತಿಯ ಅಧ್ಯಕ್ಷರಿಗೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ.

'ವಕ್ಫ್ ಮಂಡಳಿಯಿಂದ ಅನುಮತಿ ದೊರೆತ ತಕ್ಷಣ ಕೆಲಸ ಆರಂಭಿಸಲಾಗುತ್ತದೆ. ಅನುಮತಿ ಇಲ್ಲದ ಎರಡು ಮಹಡಿಗಳನ್ನು ಉರುಳಿಸಲಾಗುತ್ತದೆ ಎಂದು ನಾವೇ ಹೇಳಿದ್ದೆವು. ವಕ್ಫ್ ಮಂಡಳಿಯಿಂದ ಅನುಮತಿ ಪಡೆದು ಈ ವಿಚಾರವಾಗಿ ನ್ಯಾಯಾಲಯಕ್ಕೆ ವಿವರ ಸಲ್ಲಿಸಿದ್ದೆವು' ಎಂದು ಲತೀಫ್ ಹೇಳಿದ್ದಾರೆ.

ಬಾಲಕನಿಗೆ ಶೂ ನೆಕ್ಕಿಸಿದ ದುರುಳರು

ಛತ್ತರ್‌ಪುರ (ಪಿಟಿಐ): ಮಧ್ಯಪ್ರದೇಶದ ಛತ್ತರ್‌ಪುರ ಜಿಲ್ಲೆಯಲ್ಲಿ 17 ವರ್ಷದ ಬಾಲಕನಿಂದ ಬಲವಂತವಾಗಿ ಶೂ ನೆಕ್ಕಿಸಿರುವುದು ಮತ್ತು ಆತನ ಮುಖಕ್ಕೆ ಒದ್ದಿರುವ ಆರೋಪದ ಮೇಲೆ ನಾಲ್ವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಈ ಘಟನೆಯು ಮಂಗಳವಾರ ನಡೆದಿದೆ. ಈ ಪ್ರಕರಣದ ಸಂತ್ರಸ್ತ 11ನೇ ತರಗತಿಯ ವಿದ್ಯಾರ್ಥಿಯಾಗಿದ್ದಾನೆ. ಸಂತ್ರಸ್ತ ಮತ್ತು ಆತನ ಕುಟುಂಬದವರು ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 296 (ಅಸಭ್ಯತೆಗೆ ಸಂಬಂಧಿಸಿದ ಕಾಯ್ದೆ) ಮತ್ತು 115 (2) (ಯಾವುದೇ ವ್ಯಕ್ತಿಗೆ ನೋವುಂಟುಮಾಡುವುದು) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ದಸರಾ ಮೆರವಣಿಗೆಯಲ್ಲಿ ಬಾಲಕ ಮತ್ತು ಆರೋಪಿಗಳ ನಡುವೆ ನಡೆದ ವಾಗ್ವಾದದ ನಂತರ ಈ ಕೃತ್ಯ ನಡೆದಿದೆ.

ಕೃತ್ಯದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಆರೋಪಿಗಳಲ್ಲಿ ಒಬ್ಬಾತನ ಬೂಟುಗಳನ್ನು ಬಾಲಕನಿಂದ ನೆಕ್ಕಿಸಿರುವುದು, ಬಾಲಕನ ಮುಖಕ್ಕೆ ಬೂಟು ಕಾಲಿನಿಂದ ಒದ್ದಿರುವ ದೃಶ್ಯಗಳು ವಿಡಿಯೊದಲ್ಲಿವೆ.

ಶೌರ್ಯಚಕ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕನ ಹತ್ಯೆ: ಕೆನಡಾ ಮೂಲದ ವ್ಯಕ್ತಿ ಪಿತೂರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದ ಆರೋಪಿ ಹರಭಿಂದರ್ ಸಿಂಗ್
- ಜಾಮೀನಿಗೆ ಎನ್‌ಐಎ ಆಕ್ಷೇಪ, ಪ್ರಮಾಣಪತ್ರ ಸಲ್ಲಿಕೆ
- ಜಾಮೀನು ಅರ್ಜಿ ತಿರಸ್ಕರಿಸಿದ 'ಸುಪ್ರೀಂ'

ನವದೆಹಲಿ: 2020ರಲ್ಲಿ ಪಂಜಾಬ್‌ನಲ್ಲಿ ನಡೆದಿದ್ದ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಬಲ್ವಿಂದರ್ ಸಿಂಗ್ ಸಂಧು ಕೊಲೆಗೆ ಖಾಲಿಸ್ತಾನ ಲಿಬರೇಷನ್ ಫೋರ್ಸ್ ಸಂಘಟನೆ ಜೊತೆ ನಂಟು ಹೊಂದಿದ್ದ ಕೆನಡಾ ಮೂಲದ ವ್ಯಕ್ತಿ ಸಂಚು ರೂಪಿಸಿದ್ದ ಎಂದು ಸುಪ್ರೀಂ ಕೋರ್ಟ್‌ಗೆ ಎನ್‌ಐಎ ತಿಳಿಸಿದೆ.

ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ಈ ಮಾಹಿತಿ ಉಲ್ಲೇಖಿಸಿದೆ. ಖಾಲಿಸ್ತಾನ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ವಿಚಾರವಾಗಿ ಭಾರತ ಮತ್ತು ಕೆನಡಾ ನಡುವಿನ ಜಟಾಪಟಿ ನಡೆಯುತ್ತಿರುವ ಈ ಸಂದರ್ಭದಲ್ಲಿ, ಎನ್‌ಐಎ ಈ ಮಾಹಿತಿ ಬಹಿರಂಗಪಡಿಸಿರುವುದು ಗಮನಾರ್ಹ.

ಪಂಜಾಬ್‌ನ ತರನ್ ತಾರನ್ ಜಿಲ್ಲೆಯ ಭಿಖೀವಿಂಡ್‌ನಲ್ಲಿ 2020ರ ಅಕ್ಟೋಬರ್ 16ರಂದು ಕಾಮ್ರೇಡ್ ಬಲ್ವಿಂದರ್ ಸಿಂಗ್ ಸಂಧು ಅವರನ್ನು ಅವರ ನಿವಾಸ ಹಾಗೂ ಶಾಲೆಯಲ್ಲಿ ಇಬ್ಬರು ಅಪರಿಚಿತ ವ್ಯಕ್ತಿಗಳೂ ಗುಂಡಿಕ್ಕಿ ಹತ್ಯೆ ಮಾಡಿದ್ದರು.

'ಸುಖ್‌ಮೀತ್ ಪಾಲ್ ಸಿಂಗ್ ಅಲಿಯಾಸ್ ಸುಖ ಭಿಕರಿವಾಲ, ಕೆನಡಾ ಮೂಲದ ಖಾಲಿಸ್ತಾನ ಲಿಬರೇಷನ್ ಫೋರ್ಸ್‌ನ ಸದಸ್ಯ ಸನ್ನಿ ಟೊರಂಟೊ, ಲಖ್ವೀರ್ ಸಿಂಗ್ ಅಲಿಯಾಸ್ ರೋಡೆ ಎಂಬುವವರು ಶಿಕ್ಷಕ ಸಂಧು ಹತ್ಯೆ ಮಾಡುವಂತೆ ಸೂಚಿಸಿದ್ದರು ಎಂಬುದಾಗಿ ಬಂಧಿತ ಆರೋಪಿಗಳು ವಿಚಾರಣೆ ವೇಳೆ ತಿಳಿಸಿದ್ದಾರೆ' ಎಂದು ಎನ್‌ಐಎ ತನ್ನ ಪ್ರಮಾಣಪತ್ರದಲ್ಲಿ ವಿವರಿಸಿದೆ.

ಲಖ್ವೀರ್ ಸಿಂಗ್, ಉಗ್ರ ಸಂಘಟನೆ ಇಂಟರ್‌ನ್ಯಾಷನಲ್ ಸಿಖ್ ಯೂಥ್ ಫೆಡರೇಷನ್ ಹಾಗೂ ಖಾಲಿಸ್ತಾನ ಲಿಬರೇಷನ್ ಫೋರ್ಸ್‌ನ (ಕೆಎಲ್‌ಎಫ್) ಮುಖ್ಯಸ್ಥ ಜರ್ನೈಲ್ ಸಿಂಗ್ ಭಿಂದ್ರನವಾಲಾ ಸೋದರ ಸಂಬಂಧಿ ಎಂದೂ ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

2021ರ ಜನವರಿ 26ರಂದು ಈ ಪ್ರಕರಣ ಕುರಿತು ಎನ್‌ಐಎ ಮತ್ತೊಮ್ಮೆ ಎಫ್‌ಐಆರ್ ದಾಖಲಿಸಿತ್ತು.

'ಭಾರತದಲ್ಲಿರುವ ಖಾಲಿಸ್ತಾನಿ ವಿರೋಧಿ ವ್ಯಕ್ತಿಗಳನ್ನು ಹತ್ಯೆ ಮಾಡುವ ಸಂಚಿನ ಭಾಗವಾಗಿ ಸನ್ನಿ ಟೊರಂಟೊ ಹಾಗೂ ಲಖ್ವೀರ್ ಸಿಂಗ್ ರೋಡೆ ಕಾಮ್ರೇಡ್ ಸಂಧು ಅವರ ಹತ್ಯೆ ಮಾಡಿದ್ದಾರೆ. ಖಾಲಿಸ್ತಾನಿ ವಿರೋಧಿ ವ್ಯಕ್ತಿಗಳನ್ನು ಕೊಂದು ಹಾಕುವ ಮೂಲಕ ಅದಾಗಲೇ ನಿಷ್ಕ್ರಿಯವಾಗಿರುವ ಖಾಲಿಸ್ತಾನ ಚಳವಳಿಗೆ ಮತ್ತೆ ಮರುಜೀವ ನೀಡಬಹುದು ಎಂಬುದಾಗಿ ಕೆಎಲ್‌ಎಫ್ ನಂಬಿತ್ತು' ಎಂದೂ ಎನ್‌ಐಎ ಹೇಳಿದೆ.

'ಪಂಜಾಬ್‌ನಲ್ಲಿ ಭಯೋತ್ಪಾದನೆ ವಿಪರೀತವಾಗಿದ್ದ ವೇಳೆ, ಅದರ ವಿರುದ್ಧ ಸಂಧು ಭಾರಿ ಹೋರಾಟ ನಡೆಸಿದ್ದರು. ಇದಕ್ಕಾಗಿ 1993ರ ಏಪ್ರಿಲ್ 14ರಂದು ಶೌರ್ಯ ಚಕ್ರ ಪುರಸ್ಕಾರ ನೀಡಲಾಗಿತ್ತು. ಇದೇ ಕಾರಣಕ್ಕೆ ಅವರ ಹತ್ಯೆಗೆ ಸಂಚು ರೂಪಿಸಲಾಗಿತ್ತು' ಎಂದೂ ಹೇಳಿದೆ.

ವಾಹನ ಅಪಘಾತಕ್ಕೆ ತುತ್ತಾದವರಿಗೆ ಪರಿಹಾರ ಘೋಷಣೆ

'ಅಂದಾಜು ಲೆಕ್ಕವೇ ಅಂತಿಮವಲ್ಲ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವಾಹನ ಅಪಘಾತ ಪ್ರಕರಣದಲ್ಲಿ ಪರಿಹಾರ ಕೇಳುತ್ತಿರುವ ವ್ಯಕ್ತಿಯು ಸಿದ್ಧಪಡಿಸಿದ ಅಂದಾಜು ಲೆಕ್ಕವೊಂದು, ಆತನಿಗೆ ಪರಿಹಾರ ನೀಡಲು ಇರುವ ಗರಿಷ್ಠ ಮಿತಿಯಾಗಿ ಪರಿಗಣಿತವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಅಲ್ಲದೆ, ರಸ್ತೆ ಅಪಘಾತದಲ್ಲಿ ಗಾಯಗೊಂಡು, ಅಂಗವೈಕಲ್ಯಕ್ಕೆ ತುತ್ತಾದ ಒಡಿಶಾದ ವ್ಯಕ್ತಿಯೊಬ್ಬನಿಗೆ ಘೋಷಿಸಿದ್ದ ಪರಿಹಾರದ ಮೊತ್ತ ₹30.99 ಲಕ್ಷ ಇದ್ದಿದ್ದನ್ನು ₹52.31 ಲಕ್ಷಕ್ಕೆ ಹೆಚ್ಚಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ರಾಜೇಶ್ ಬಿಂದಲ್ ಅವರು ಇದ್ದ ವಿಭಾಗೀಯ ಪೀಠವು, 'ತೊಂದರೆಗೆ ಒಳಗಾದ ವ್ಯಕ್ತಿಯು ಕೇಳಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಆತನಿಗೆ ವಾಹನ ಅಪಘಾತ ಪರಿಹಾರ ನ್ಯಾಯಮಂಡಳಿ ಮತ್ತು ಹೈಕೋರ್ಟ್ ಪರಿಹಾರ ರೂಪದಲ್ಲಿ ಘೋಷಿಸಬಾರದು ಎಂದೇನೂ ಇಲ್ಲ. ಆದರೆ ಹಾಗೆ ಹೆಚ್ಚಿನ ಮೊತ್ತ ಘೋಷಿಸುವುದು ನ್ಯಾಯಸಮ್ಮತವಾಗಿ, ಸಕಾರಣದಿಂದ ಕೂಡಿರಬೇಕು' ಎಂದು ಅಕ್ಟೋಬರ್ 15ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ.

ಮೇಲ್ಮನವಿದಾರರಾದ ಚಂದ್ರಮಣಿ ನಂದಾ ಅವರು ಆರಂಭದಲ್ಲಿ ₹30 ಲಕ್ಷ ಪರಿಹಾರ ಕೋರಿದ್ದರು. ಆ ಮೊತ್ತ ಪಾವತಿಸುವಂತೆ ಹೈಕೋರ್ಟ್ ಈಗಾಗಲೇ ಆದೇಶಿಸಿದೆ. ಪರಿಹಾರ ಮೊತ್ತವನ್ನು ಹೆಚ್ಚು ಮಾಡಲು ಅವಕಾಶವಿಲ್ಲ ಎಂದು ವಿಮಾ ಕಂಪನಿ ಮಂಡಿಸಿದ್ದ ವಾದವನ್ನು ಸುಪ್ರೀಂ ಕೋರ್ಟ್ ಒಪ್ಪಿಲ್ಲ.

'ಈ ವಾದವನ್ನು ನಾವು ಒಪ್ಪುವುದಿಲ್ಲ... ನ್ಯಾಯಸಮ್ಮತವಾದ ಪರಿಹಾರ ಮೊತ್ತವನ್ನು ತೀರ್ಮಾನಿಸುವುದು ಕೋರ್ಟ್‌ನ ಕರ್ತವ್ಯ. ಪರಿಹಾರ ಕೋರುತ್ತಿರುವ ವ್ಯಕ್ತಿಯು ಸಿದ್ಧಪಡಿಸಿದ ಕಚ್ಚಾ ಅಂದಾಜು ಲೆಕ್ಕಾಚಾರವೇ ಪರಿಹಾರ ನೀಡುವುದಕ್ಕೆ ಗರಿಷ್ಠ ಮಿತಿ ಆಗುವುದಿಲ್ಲ' ಎಂದು ಪೀಠವು ಸ್ಪಷ್ಟಪಡಿಸಿದೆ.

2014ರ ಜನವರಿಯಲ್ಲಿ ಒಡಿಶಾದ ನಾಲ್ಕು ಮಂದಿ ಸಂಬಲ್ಪುರದಿಂದ ಕಟಕ್‌ಗೆ ಕಾರಿನಲ್ಲಿ ತೆರಳುತ್ತಿದ್ದಾಗ, ಕಾರು ಮತ್ತು ಬಸ್ ನಡುವೆ ಅಪಘಾತ ಸಂಭವಿಸಿತ್ತು. ಕಾರಿನಲ್ಲಿದ್ದ ನಾಲ್ಕು ಮಂದಿಯ ಪೈಕಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದರು. ಇನ್ನುಳಿದ ಮೂವರು ಪ್ರತ್ಯೇಕವಾಗಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದರು.

ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿರುವ 32 ವರ್ಷ ವಯಸ್ಸಿನ ವ್ಯಕ್ತಿಯು ಅಪಘಾತದ ಕಾರಣದಿಂದಾಗಿ ಮೆದುಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಅವರಿಗೆ ನ್ಯಾಯಮಂಡಳಿಯು ₹20.60 ಲಕ್ಷ ಪರಿಹಾರ ಘೋಷಿಸಿತ್ತು. ಇದನ್ನು ಹೈಕೋರ್ಟ್ ₹30.99 ಲಕ್ಷಕ್ಕೆ ಹೆಚ್ಚಿಸಿತ್ತು.

ನ್ಯಾ.ಸಿದ್ದಯ್ಯ ರಾಚಯ್ಯ ಕಾಯಂಗೆ ಶಿಫಾರಸು



ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಸಿದ್ದಯ್ಯ ರಾಚಯ್ಯ ಅವರನ್ನು ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾಗಿ ನೇಮಕ ಮಾಡುವಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಮೂವರು ಸದಸ್ಯರು ಇರುವ ಕೊಲಿಜಿಯಂ, ಆಂಧ್ರಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಮೂವರು ವಕೀಲರ ಹೆಸರುಗಳನ್ನು ಸಹ ಶಿಫಾರಸು ಮಾಡಿದೆ. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಬಿ.ಆರ್.ಗವಾಯಿ ಸದಸ್ಯರಾಗಿರುವ ಕೊಲಿಜಿಯಂ ಸಭೆ ಮಂಗಳವಾರ ನಡೆದಿದೆ.

'ಹೆಚ್ಚುವರಿ ನ್ಯಾಯಮೂರ್ತಿಯಾಗಿ ಸಿದ್ದಯ್ಯ ರಾಚಯ್ಯ ಅವರ ಅವಧಿ ನವೆಂಬರ್ 7ಕ್ಕೆ ಮುಕ್ತಾಯವಾಗಲಿದೆ. ಈ ಕಾರಣಕ್ಕೆ, ಅವರನ್ನು ಕರ್ನಾಟಕ ಹೈಕೋರ್ಟ್ ಕಾಯಂ ನ್ಯಾಯಮೂರ್ತಿಯಾಗಿ ನೇಮಕ ಮಾಡುವ ಕುರಿತ ಶಿಫಾರಸು ಸಂಬಂಧಿಸಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದು ಕೊಲಿಜಿಯಂ ತನ್ನ ನಿರ್ಣಯದಲ್ಲಿ ಹೇಳಿದೆ.

ಕೇರಳ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡುವಂತೆ ನಾಲ್ವರು ನ್ಯಾಯಿಕ ಅಧಿಕಾರಿಗಳ ಹೆಸರುಗಳನ್ನು ಸಹ ಕೊಲಿಜಿಯಂ ಶಿಫಾರಸು ಮಾಡಿದೆ.

ಷೇರುಪೇಟೆ ವಹಿವಾಟು 318



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,057
ಇಂದಿನ ಅಂತ್ಯ	24,971
▼	86
ದಿನದ ಕನಿಷ್ಠ	24,908

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹249-480
ದ್ವಿತಳಿ (ಬಿ.ವಿ)	₹136-632

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹185

(ಪ್ರತಿ ಕೆ.ಜಿಗೆ)

ಮೂಡಿಗೆರೆ ಕಾಫಿ (50 ಕೆಜಿಗೆ)

ಎಪಿ	₹18000
ಎಸಿ	₹11370
ಆರ್‌ಪಿ	₹20000
ಆರ್‌ಸಿ	₹10375

ಷೇರುಪೇಟೆ ಇಳಿಕೆ

ಮುಂಬೈ (ಪಿಟಿಐ): ಐ.ಟಿ ಮತ್ತು ಆಟೊ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಬುಧವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟು ಕೂಡ ದೇಶದ ಷೇರುಪೇಟೆ ಮೇಲೆ ಪರಿಣಾಮ ಬೀರಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 318 ಅಂಶ ಇಳಿಕೆಯಾಗಿ, 81,501ಕ್ಕೆ ವಹಿವಾಟು ಅಂತ್ಯ ಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 86 ಅಂಶ ಕಡಿಮೆಯಾಗಿ 24,971ಕ್ಕೆ ಕೊನೆಗೊಂಡಿತು.

ಮಹೀಂದ್ರ ಆ್ಯಂಡ್ ಮಹೀಂದ್ರ, ಇನ್ಫೊಸಿಸ್, ಕೋಟಕ್ ಮಹೀಂದ್ರ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಅದಾನಿ ಪೋರ್ಟ್ಸ್, ಟಾಟಾ ಮೋಟರ್ಸ್, ಐಟಿಸಿ ಮತ್ತು ಟೈಟನ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್, ಭಾರ್ತಿ ಏರ್‌ಟೆಲ್, ರಿಲಯನ್ಸ್ ಇಂಡಸ್ಟ್ರೀಸ್, ಏಷ್ಯನ್ ಪೇಂಟ್ಸ್ ಮತ್ತು ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ರಾಜ್ಯದ ಹಿತ ಕಾಪಾಡುವಂತೆ ಕೇಂದ್ರ ಸರ್ಕಾರಕ್ಕೆ ಸಚಿವ ಕೃಷ್ಣ ಬೈರೇಗೌಡ ಒತ್ತಾಯ

‘ಜಿಎಸ್‌ಟಿ: ₹24 ಸಾವಿರ ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ


ಕೃಷ್ಣ ಬೈರೇಗೌಡ

ನವದೆಹಲಿ: ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಜಾರಿಯಿಂದ ಕರ್ನಾಟಕಕ್ಕೆ ಪ್ರತಿವರ್ಷ ₹24 ಸಾವಿರ ಕೋಟಿ ನಷ್ಟ ಆಗುತ್ತಿದೆ. ಜಿಎಸ್‌ಟಿಯಿಂದ ನಷ್ಟ ಆಗಿರುವ ರಾಜ್ಯಗಳ ಹಿತ ಕಾಪಾಡುವಂತೆ ಕೇಂದ್ರಕ್ಕೆ ಮತ್ತೊಮ್ಮೆ ಮನವಿ ಮಾಡಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಬುಧವಾರ ಇಲ್ಲಿ ತಿಳಿಸಿದರು.

ಜಿಎಸ್‌ಟಿ ಪರಿಹಾರ ಸೆಸ್ ಕುರಿತು ಪರಿಶೀಲಿಸಲು ರಚನೆಯಾಗಿರುವ ಸಚಿವರ ಸಮಿತಿ ಸಭೆಯಲ್ಲಿ ಪಾಲ್ಗೊಂಡ ಬಳಿಕ ಅವರು, ಸುದ್ದಿಗಾರರ ಜತೆಗೆ ಮಾತನಾಡಿದರು.

ಜಿಎಸ್‌ಟಿಯಿಂದ ಕರ್ನಾಟಕದಂತಹ ರಾಜ್ಯಗಳಿಗೆ ಸಮಸ್ಯೆಯಾಗಿದೆ. ಪರಿಹಾರ ಮುಂದುವರಿಸಲು ಕೇಂದ್ರಕ್ಕೆ ಒತ್ತಡ ಹೇರಲಾಗಿತ್ತು. ಆದರೆ, ಕೇಂದ್ರ ಒಪ್ಪಿಕೊಂಡಿರಲಿಲ್ಲ. ನಾವು ಸಂಗ್ರಹಿಸುವ ತೆರಿಗೆಯು ಬೇರೆ ರಾಜ್ಯಕ್ಕೆ ಹೋಗುತ್ತಿದೆ. ನಮಗೆ ಭಾರಿ ಅನ್ಯಾಯವಾಗುತ್ತಿದೆ. ಸಂಗ್ರಹ ಮಾಡುವ ಸೆಸ್ ಅನ್ನು ಪೂರ್ಣ ಪ್ರಮಾಣದಲ್ಲಿ ರಾಜ್ಯಕ್ಕೆ ನೀಡಬೇಕು’ ಎಂದು ಆಗ್ರಹಿಸಿದರು.

‘ತೆರಿಗೆ ಪಾಲು ನೀಡುವ ಸಂದರ್ಭದಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ಮಳೆ ಬಂದ ಕೂಡಲೇ ಗುಜರಾತ್‌ಗೆ ಕೂಡಲೇ ಹಣ ಬಿಡುಗಡೆಯಾಗುತ್ತದೆ. ಬರ ಪರಿಹಾರ ಪಡೆಯಲು ನಾವು ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟ ಮಾಡಬೇಕಾಯಿತು. ಇಲ್ಲದಿದ್ದರೆ ಹಣವೇ ಬರುತ್ತಿರಲಿಲ್ಲ. ರಾಜ್ಯದ ನಾಯಕರ ಪರವಾಗಿ ಬಿಜೆಪಿ ನಾಯಕರು ಏಕೆ ಧ್ವನಿ ಎತ್ತುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಯುಪಿಎ ಸರ್ಕಾರದ ಅವಧಿಯಲ್ಲಿ ಕೇಂದ್ರದ ಬಜೆಟ್ ಗಾತ್ರ ₹4 ಲಕ್ಷ ಕೋಟಿ ಇತ್ತು. ಈಗ ಬಜೆಟ್ ಗಾತ್ರ ₹45 ಲಕ್ಷ ಕೋಟಿ ಆಗಿದೆ. ಯುಪಿಎ ಅವಧಿಯಲ್ಲಿ ಅನುದಾನ ಕಡಿಮೆ ಬಿಡುಗಡೆಯಾಗಿದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಬಿಜೆಪಿಯವರು ಜನರನ್ನು ಯಾಮಾರಿಸುವ ಕೆಲಸ ಮಾಡುತ್ತಿದ್ದಾರೆ. ನಾವು ಕಟ್ಟುವ ತೆರಿಗೆ ಎಷ್ಟು, ಮರಳಿ ಬರುತ್ತಿರುವುದು ಎಷ್ಟು ಎಂಬುದರ ಬಗ್ಗೆ ಬಿಜೆಪಿ ನಾಯಕರು ಹೇಳಲಿ’ ಎಂದು ಸವಾಲು ಹಾಕಿದರು.

ಕೃಷ್ಣ ಬೈರೇಗೌಡ ಮುಖ್ಯಮಂತ್ರಿಯಾಗಲಿ ಎಂಬ ವಿಪಕ್ಷ ನಾಯಕ ಆರ್. ಅಶೋಕ ಹೇಳಿಕೆಗೆ ತಿರುಗೇಟು ನೀಡಿದ ಸಚಿವರು, ‘ನಾನು ವೈಯಕ್ತಿಕವಾಗಿ, ಸಾರ್ವಜನಿಕವಾಗಿ ಗೌರವ ಉಳಿಸಿಕೊಂಡಿದ್ದೇನೆ. ನಾನು ಯಾರ ಬಗ್ಗೆಯೂ ಕೇವಲವಾಗಿ ಮಾತನಾಡುವುದಿಲ್ಲ. ಅಶೋಕ ಅವರು ವೈಯಕ್ತಿಕ ವಿಷಯಗಳನ್ನು ಮಾತನಾಡುವುದನ್ನು ಬಿಟ್ಟು ಜನರ ಸಮಸ್ಯೆಗಳ ಬಗ್ಗೆ ಮಾತನಾಡಲಿ’ ಎಂದರು.

ಮೂಲ ಸೌಕರ್ಯ ಅಭಿವೃದ್ಧಿಯಾಗಿಲ್ಲ: ಬೆಂಗಳೂರಿನ ಮಳೆ ಹಾನಿ ಕುರಿತು ಪ್ರತಿಕ್ರಿಯಿಸಿದ ಅವರು, ‘ಬೆಂಗಳೂರಿನ ಬೆಳವಣಿಗೆಗೆ ತಕ್ಕಂತೆ ಮೂಲ ಸೌಕರ್ಯ ಅಭಿವೃದ್ಧಿ ಆಗಿಲ್ಲ. ಇದನ್ನು ಯಾವ ಸರ್ಕಾರವೂ ಮಾಡಿಲ್ಲ. ಇದನ್ನು ನಾವು ಒಪ್ಪಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ಕೊಡಬೇಕು’ ಎಂದರು.

ಪರಿಹಾರ ಸೆಸ್ ವಿಲೀನಕ್ಕೆ ಸಚಿವರ ಸಮಿತಿ ಚರ್ಚೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯಲ್ಲಿಯೇ ಪರಿಹಾರ ಸೆಸ್ ಅನ್ನು ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ 10 ಸಚಿವರ ಸಮಿತಿಯ ಮೊದಲ ಸಭೆಯಲ್ಲಿ ಚರ್ಚಿಸಲಾಗಿದೆ.

‘ಎಲ್ಲಾ ರಾಜ್ಯಗಳು ಜಿಎಸ್‌ಟಿ ಅಡಿ ಈ ಸೆಸ್ ಅನ್ನು ವಿಲೀನಗೊಳಿಸುವಂತೆ ಶಿಫಾರಸು ಮಾಡಿವೆ’ ಎಂದು ಮೂಲಗಳು ತಿಳಿಸಿವೆ.

ಪರಿಹಾರ ಸೆಸ್‌ಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಈ ಸಮಿತಿ ರಚಿಸಲಾಗಿದೆ. ಜಿಎಸ್‌ಟಿ ಅಡಿ ಸೆಸ್ ವಿಲೀನಗೊಂಡರೆ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ವಿಧಿಸುವ ತೆರಿಗೆ ಪಟ್ಟಿಗೆ ಹೊಸ ಸರಕುಗಳನ್ನು ಸೇರ್ಪಡೆಗೊಳಿಸಲು ಅವಕಾಶ ಇರುವುದಿಲ್ಲ.

ಪರಿಹಾರ ಸೆಸ್ ಅವಧಿಯು 2026ರ ಮಾರ್ಚ್‌ಗೆ ಅಂತ್ಯಗೊಳ್ಳಲಿದೆ. ಸಮಿತಿಯು ಈ ಬಗ್ಗೆ ಪರಿಶೀಲನೆ ನಡೆಸಿ ಡಿಸೆಂಬರ್ 31ರೊಳಗೆ ವರದಿ ಸಲ್ಲಿಸಲಿದೆ.

‘ಪರಿಹಾರ ಸೆಸ್ ಅನ್ನು ಭವಿಷ್ಯದಲ್ಲಿ ಯಾವ ರೂಪದಲ್ಲಿ ಸಂಗ್ರಹಿಸಬೇಕು ಎಂಬ ಬಗ್ಗೆ ಸಮಿತಿಯು ಚರ್ಚಿಸಲಿದೆ. ಪ್ರತಿ ರಾಜ್ಯವೂ ತನ್ನದೆ ಆದ ಅಭಿಪ್ರಾಯ ಮಂಡಿಸಿದೆ’ ಎಂದು ಸಭೆಯ ಬಳಿಕ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

‘ಇದನ್ನು ಮುಂದುವರಿಸಬೇಕೇ, ಜಿಎಸ್‌ಟಿ ಅಡಿ ವಿಲೀನಗೊಳಿಸಬೇಕೇ, ಸೆಸ್ ವಿಧಿಸುವ ಪಟ್ಟಿಯಲ್ಲಿರುವ ಸರಕುಗಳನ್ನು ಪರಿಷ್ಕರಿಸಬೇಕೇ ಎಂಬ ಬಗ್ಗೆ ಚರ್ಚೆ ಮುಂದುವರಿಯಲಿದೆ’ ಎಂದು ಹೇಳಿದ್ದಾರೆ.

ಮುಂದಿನ ಸಭೆಯು ನವೆಂಬರ್ ಎರಡನೇ ವಾರದಲ್ಲಿ ನಡೆಯಲಿದೆ.

ಸಚಿವರ ಸಮಿತಿಯಲ್ಲಿ ಅಸ್ಸಾಂ, ಛತ್ತೀಸಗಢ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಪಂಜಾಬ್, ತಮಿಳುನಾಡು, ಉತ್ತರಪ್ರದೇಶ, ಪಶ್ಚಿಮ ಬಂಗಾಳ ಇವೆ.

2017ರಲ್ಲಿ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆ ಜಾರಿಗೊಂಡಿತು. ಈ ವೇಳೆ ರಾಜ್ಯಗಳಿಗೆ ಆಗುವ ವರಮಾನದ ನಷ್ಟವನ್ನು ಮುಂದಿನ ಐದು ವರ್ಷದವರೆಗೆ ಭರಿಸುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಹಾಗಾಗಿ, 2022ರ ಜೂನ್‌ವರೆಗೆ ಜಿಎಸ್‌ಟಿ ಪರಿಹಾರ ವ್ಯವಸ್ಥೆ ಜಾರಿಯಲ್ಲಿತ್ತು. ನಂತರ ಇದನ್ನು 2026ರ ವರೆಗೆ ವಿಸ್ತರಿಸಲಾಗಿದೆ. ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ಶೇ 28ರಷ್ಟು ಹಾಗೂ ಅದಕ್ಕೂ ಹೆಚ್ಚು ಜಿಎಸ್‌ಟಿ ವಿಧಿಸಲಾಗುತ್ತದೆ.

ಸುದ್ದಿ 2 ನಿಮಿಷ

ವ್ಯಾಪಾರ ಕೊರತೆ ಅಂತರ ಇಳಿಕೆ

ನವದೆಹಲಿ (ಪಿಟಿಐ): ಸೆಪ್ಟೆಂಬರ್‌ನಲ್ಲಿ ದೇಶದ ವ್ಯಾಪಾರ ಕೊರತೆ ಅಂತರವು ₹1.74 ಲಕ್ಷ ಕೋಟಿ ಆಗಿದ್ದು, ಐದು ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಿನ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಸರಕುಗಳ ರಫ್ತು ಪ್ರಮಾಣದಲ್ಲಿ ಶೇ 0.5ರಷ್ಟು ಹೆಚ್ಚಳವಾಗಿದ್ದು, ₹2.90 ಲಕ್ಷ ಕೋಟಿ ಆಗಿದೆ. ಆಮದು ಪ್ರಮಾಣದಲ್ಲಿ ಶೇ 1.6ರಷ್ಟು ಏರಿಕೆಯಾಗಿದ್ದು, ₹4.65 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಆಗಸ್ಟ್‌ನಲ್ಲಿ ವ್ಯಾಪಾರ ಕೊರತೆ ಅಂತರವು 10 ತಿಂಗಳ ಗರಿಷ್ಠ ಮಟ್ಟವಾದ ₹2.49 ಲಕ್ಷ ಕೋಟಿಗೆ ಮುಟ್ಟಿತ್ತು.

ಕಳೆದ ವರ್ಷಕ್ಕೆ ಹೋಲಿಸಿದರೆ ರಫ್ತು ಪ್ರಮಾಣವು ಆಗಸ್ಟ್ ಮತ್ತು ಜುಲೈನಲ್ಲಿ ಕ್ರಮವಾಗಿ ಶೇ 9.3 ಮತ್ತು ಶೇ 1.2ರಷ್ಟು ಕಡಿಮೆಯಾಗಿದೆ.

ಪ್ರಸಕ್ತ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ರಫ್ತು ಪ್ರಮಾಣದಲ್ಲಿ ಶೇ 1ರಷ್ಟು ಏರಿಕೆಯಾಗಿದ್ದು, ₹17.91 ಲಕ್ಷ ಕೋಟಿಯಾಗಿದೆ. ಆಮದು ಪ್ರಮಾಣವು ಶೇ 6ರಷ್ಟು ಹೆಚ್ಚಳವಾಗಿದ್ದು, ₹29.46 ಲಕ್ಷ ಕೋಟಿ ಆಗಿದೆ. ವ್ಯಾಪಾರ ಕೊರತೆಯು ₹11.54 ಲಕ್ಷ ಕೋಟಿಯಾಗಿದೆ.

ಗೋಧಿಗೆ ₹150 ಎಂಎಸ್‌ಪಿ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬುಧವಾರ 2025–26ನೇ ಮಾರುಕಟ್ಟೆ ವರ್ಷಕ್ಕೆ ಗೋಧಿಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ₹150 ಹೆಚ್ಚಿಸಿದೆ.

ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆಗೆ ಚುನಾವಣೆ ಘೋಷಣೆಯಾದ ಬೆನ್ನಲ್ಲೇ ಈ ಕ್ರಮಕೈಗೊಂಡಿದೆ. ಪ್ರತಿ ಕ್ವಿಂಟಲ್ ಗೋಧಿಯ ಎಂಎಸ್‌ಪಿ ದರ ₹2,425 ಆಗಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಹಿಂಗಾರು ಅವಧಿಯಲ್ಲಿ ವಿವಿಧ ಕೃಷಿ ಹುಟ್ಟುವಳಿಗಳ ಎಂಎಸ್‌ಪಿಯನ್ನು ₹130ರಿಂದ ₹300ಕ್ಕೆ ಹೆಚ್ಚಿಸಿದೆ.

ದೇಶೀಯವಾಗಿ ಎಣ್ಣೆಕಾಳುಗಳ ಉತ್ಪಾದನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಾಸಿವೆಗೆ ₹300 ಹೆಚ್ಚಿಸಿದ್ದು, ಪ್ರತಿ ಕ್ವಿಂಟಲ್‌ಗೆ ₹5,950 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

ಕುಸುಬೆಗೆ ₹140 ಹೆಚ್ಚಿಸಲಾಗಿದ್ದು, ಪ್ರತಿ ಕ್ವಿಂಟಲ್ ದರ ₹5,940 ಆಗಿದೆ. ಚನ್ನಂಗಿ ಬೇಳೆಗೆ (ಮಸೂರ್ ದಾಲ್) ₹275 ಹೆಚ್ಚಿಸಲಾಗಿದ್ದು, ಕ್ವಿಂಟಲ್‌ಗೆ ಎಂಎಸ್‌ಪಿ ₹6,700 ಆಗಿದೆ. ಕಡಲೆಗೆ ₹210 ಹೆಚ್ಚಿಸಲಾಗಿದ್ದು, ಕ್ವಿಂಟಲ್‌ಗೆ ₹5,650 ಆಗಿದೆ. ಬಾರ್ಲಿಗೆ ₹130 ಹೆಚ್ಚಿಸಿದ್ದು, ಕ್ವಿಂಟಲ್‌ಗೆ ₹1,980 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

110 ಹಳ್ಳಿಗಳಿಗೆ ಹರಿದಳು ‘ಕಾವೇರಿ’

ಒಂದನೇ ಪುಟದಿಂದ... ಕಳೆದ ಬೇಸಿಗೆಯಲ್ಲಿ ಈ ಎಲ್ಲ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕೊರತೆ ತೀವ್ರವಾಗಿ ಬಾಧಿಸಿತ್ತು. ಕಾವೇರಿ ಐದನೇ ಹಂತದ ನೀರು ಪೂರೈಕೆಯಿಂದ ಬಹಳ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ದೂರವಾಗುತ್ತದೆ. ಈ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರಕಿದಂತಾಗಿದೆ.

ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರಿದ ಹಳ್ಳಿಗಳಿಗೆ ಕಾವೇರಿ ನೀರು ಪೂರೈಸುವ ಉದ್ದೇಶದೊಂದಿಗೆ ಐದನೇ ಹಂತದ ಯೋಜನೆಗೆ 2014ರಲ್ಲಿ ಅನುಮೋದನೆ ನೀಡಲಾಗಿತ್ತು. ₹ 4,333 ಕೋಟಿ ವೆಚ್ಚದ ಯೋಜನೆಗೆ ಶೇಕಡ 16ರಷ್ಟು ರಾಜ್ಯ ಸರ್ಕಾರ ಅನುದಾನ ನೀಡಲಾಗಿದೆ. ಶೇ 84ರಷ್ಟು ಮೊತ್ತವನ್ನು ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ (ಜೈಕಾ) ಸಾಲ ಪಡೆಯಲಾಗಿದೆ.

‘ಮೇಕೆದಾಟು ಯೋಜನೆ ಅನುಷ್ಠಾನ ಖಚಿತ’

‘ನಮಗೆ ವಿಶ್ವಾಸವಿದೆ, ನಮ್ಮ ಸರ್ಕಾರದ ಅವಧಿಯಲ್ಲೇ, ಸಿದ್ದರಾಮಯ್ಯನವರ ನೇತೃತ್ವದಲ್ಲೇ ಮೇಕೆದಾಟು ಯೋಜನೆ ಅನುಷ್ಠಾನ ಗೊಳಿಸುತ್ತೇವೆ. ಅವರ ನೇತೃತ್ವದಲ್ಲೇ ಯೋಜನೆಗೆ ಭೂಮಿಪೂಜೆ ನಡೆಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ನಮಗೆ ನೀಡಲಿ ಎಂಬುದಾಗಿ ಪ್ರಾರ್ಥಿಸುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಸುಪ್ರೀಂ ಕೋರ್ಟ್ ಆದೇಶದಂತೆ ಈ ವರ್ಷ ಟಿಎಂಸಿ ಅಡಿಯಷ್ಟು ನೀರನ್ನು ತಮಿಳುನಾಡಿಗೆ 132 ಟಿಎಂಸಿ ಅಡಿ ನೀರು ಹರಿಸಬೇಕಾಗಿತ್ತು, ಆದರೆ ಈವರೆಗೂ 213 ಟಿಎಂಸಿ ಅಡಿ ನೀರನ್ನು ಹರಿಸಲಾಗಿದೆ’ ಎಂದರು.

‘ಕೇಂದ್ರ ಅನುಮೋದನೆ ನೀಡುತ್ತಿಲ್ಲ’

‘ಮೇಕೆದಾಟು, ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ಇದಕ್ಕೆ ಅನುಮೋದನೆ ನೀಡದೆ ಅನ್ಯಾಯ ಮಾಡುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು.

‘ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಉಪಯೋಗವಾಗುತ್ತದೆ. ಆದರೆ ಅವರು ವಿನಾ ಕಾರಣ ಕ್ಯಾತೆ ತೆಗೆಯುತ್ತಿದ್ದಾರೆ. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ, ಸಮಸ್ಯೆ ಬಗೆಹರಿಸಿ, ಅನುಮೋದನೆ ಕೊಡಿಸಬಹುದು. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ, ಜೆಡಿಎಸ್ ಪಕ್ಷದ ಸಂಸದರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ. ಕೇಂದ್ರದಲ್ಲಿ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರು ಯಾಕೆ ಅನುಮತಿ ಕೊಡಿಸುತ್ತಿಲ್ಲ’ ಎಂದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ



ಎಲ್‌ಟಿ. ಕರ್ನಲ್ ಎನ್. ಜಯರಾಮ ರಾವ್, ನಿವೃತ್ತ (ಎನ್ ಜೆ ರಾಮರಾವ್)
02-04-1944 - 15-10-2024

ಸುಶೀಲಾ, ದೀಪಿಕಾ, ರಾಧಿಕಾ, ಸುರೇಶ್, ಸಂಬಂಧಿಕರು ಮತ್ತು ಸ್ನೇಹಿತರು
ಮೊ : +91 74838 69691

16ನೇ ವರ್ಷದ ಚಿರಸ್ಮರಣೆ



ಹನುಮಂತಯ್ಯ, ಉರುಫ್ ಕೆಂಪಣ್ಣ
(ನಿಧನ: 17.10.2008)

ದಿವಂಗತರ ಆತ್ಮಕ್ಕೆ ಶಾಂತಿ ಕೋರುವ: ಹೆಂಡತಿ, ಮಗ ಮತ್ತು ಮೊಮ್ಮಕ್ಕಳು ಅವರಗೆರೆ, ಬಿಡದಿ, ರಾಮನಗರ.

ಬೆಂಗಳೂರು: ₹80 ಸಾವಿರ ದಾಟಿದ ಚಿನ್ನದ ಧಾರಣೆ

ನವದೆಹಲಿ/ಬೆಂಗಳೂರು (ಪಿಟಿಐ): ದೇಶೀಯ ಆಭರಣ ತಯಾರಕರಿಂದ ಖರೀದಿ ಹೆಚ್ಚಾಗಿದ್ದರಿಂದ ಚಿನ್ನ ಮತ್ತು ಬೆಳ್ಳಿ ಧಾರಣೆಯು ಬುಧವಾರದ ವಹಿವಾಟಿನಲ್ಲಿ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹250 ಹೆಚ್ಚಳವಾಗಿ ₹78,900ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಏರಿಕೆಯಾಗಿ ₹93,500ಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹80,230 ಮತ್ತು ಬೆಳ್ಳಿ ಧಾರಣೆ ಕೆ.ಜಿಗೆ ₹96,600ರಂತೆ ಮಾರಾಟವಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-27000
ಹಳತು	40500-48500
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	23019-26029
ಕೋಕ	5099-22089
ಫ್ಯಾಕ್ಟರಿ	4009-16611
ಹಸಚಾಲಿ	36809-39629
ಹೊಸಚಾಲಿ	30009-34019
ಶಿವಮೊಗ್ಗ	
ಬೆಟ್ಟೆ	46199-55239
ಗೊರಬಲು	16995-33469
ಹೊಸತು	44539-47451
ರಾಶಿ	38899-49699
ಸರಕು	56109-80996
ಸಿದ್ದಾಪುರ	
ಬಿಳಿಗೋಟು	24099-26899
ಚಾಲಿ	30689-34219
ಕೋಕ	20109-26999
ಕೆಂಪುಗೋಟು	21109-22699
ರಾಶಿ	41099-46109
ತಟ್ಟಿಬೆಟ್ಟೆ	26809-34019
ಶಿರಸಿ	
ಬೆಟ್ಟೆ	26699-36099
ಬಿಳಿಗೋಟು	20000-30021
ಚಾಲಿ	32599-35599
ರಾಶಿ	40899-42999

ಮುಂಬೈ ಧಾರಣೆ

ಶೇಂಗಾ
16-10-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ಬಾರಿ ಫಿಲ್ಟರ್	1535 (1535)
ಮಹಾ ವಾರದ ಡಬ್ಬ	1268 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1215)

ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	₹76,350 (75,600)
ಬೆಳ್ಳಿ ಕೆ.ಜಿ	₹91,600 (89,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1265 (1270)
ಸೂರ್ಯಕಾಂತಿ (ರಿಫೈನ್ಡ್)	₹1290 (1290)
ಪಾಮೋಲಿನ್	₹1270 (1260)

ಕೇಂದ್ರ ಸಚಿವ ನಡ್ಡಾಗೆ ದಿನೇಶ್ ಗುಂಡೂರಾವ್ ಮನವಿ

‘ವೈದ್ಯರ ವೇತನ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಜೆ.ಪಿ.ನಡ್ಡಾ ಅವರಿಗೆ ದಿನೇಶ್ ಗುಂಡೂರಾವ್ ಮನವಿ ಸಲ್ಲಿಸಿದರು

ನವದೆಹಲಿ: ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ನರ್ಸ್‌ಗಳ ವೇತನ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಮನವಿ ಮಾಡಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಅವರನ್ನು ಬುಧವಾರ ಇಲ್ಲಿ ಭೇಟಿ ಮಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮನವಿ ಸಲ್ಲಿಸಿದರು. ‘ಪ್ರಸ್ತುತ ವೈದ್ಯರ ವೇತನ ಅಸಮರ್ಪಕವಾಗಿದ್ದು, ಹೀಗಾಗಿ, ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರು ಹಿಂದೇಟು ಹಾಕುತ್ತಿದ್ದಾರೆ. ವೇತನ ಹೆಚ್ಚಳ ಮಾಡುವಂತೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದೆ. ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು’ ಎಂದು ವಿನಂತಿಸಿದರು.

‘ಕೋವಿಡ್–19 ಸಾಂಕ್ರಾಮಿಕ ಹರಡಿದ ಸಂದರ್ಭದಲ್ಲಿ ಪಿಎಂ–ಕೇರ್ಸ್ ಮೂಲಕ ವೆಂಟಿಲೇಟರ್‌ಗಳು ಹಾಗೂ ಆಮ್ಲಜನಕ ಘಟಕಗಳನ್ನು ರಾಜ್ಯಕ್ಕೆ ಹಂಚಿಕೆ ಮಾಡಲಾಗಿತ್ತು. ಪಿಎಂ–ಕೇರ್ಸ್ ಮೂಲಕವೇ ಇವುಗಳ ನಿರ್ವಹಣೆಗೆ ಅನುದಾನ ಒದಗಿಸಬೇಕು’ ಎಂದು ಕೋರಿದರು. ‘ರಾಜ್ಯದಲ್ಲಿ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ (ಸಿಡಿಎಸ್‌ಸಿಒ) ಪ್ರಯೋಗಾಲಯ ಸ್ಥಾಪನೆ ಮಾಡಬೇಕು’ ಎಂದು ಅವರು ಮನವಿ ಮಾಡಿದರು.

15ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ 2024–26ರ ಅವಧಿಗೆ ರಾಜ್ಯಕ್ಕೆ ₹559 ಕೋಟಿ ಮಂಜೂರು ಮಾಡಬೇಕು. ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ₹277 ಕೋಟಿ ನೀಡಬೇಕು’ ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ರಾಜೀನಾಮೆಗೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಡಾ ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ, ‘14 ನಿವೇಶನಗಳನ್ನು ಸಿದ್ದರಾಮಯ್ಯ ಅವರ ಪತ್ನಿ ಹಿಂತಿರುಗಿಸಿದ್ದಾರೆ. ಮುಡಾ ಅಧ್ಯಕ್ಷ ಸ್ಥಾನಕ್ಕೆ ಕೆ.ಮರೀಗೌಡ ರಾಜೀನಾಮೆ ನೀಡಿದ್ದಾರೆ. ಮುಡಾದಲ್ಲಿ ವ್ಯಾಪಕ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಿರುವುದಕ್ಕೆ ಇದು ಸಾಕ್ಷಿ. ಈ ಹಗರಣದಲ್ಲಿ ಸಿದ್ದರಾಮಯ್ಯ ನೇರವಾಗಿ ಭಾಗಿಯಾಗಿದ್ದಾರೆ’ ಎಂದು ಆರೋಪಿಸಿದರು.

ವಿನಿಮಯ ದರ

$	ಡಾಲರ್	84.02
£	ಪೌಂಡ್	109.36
€	ಯೂರೊ	91.53
¥	ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14000-15000
ತಿಪಟೂರು	₹14600-16000

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

★ಶ್ರೇಯಸ್ ಟೂರ್ಸ್★
20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಾಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪು ಪಾರೋ,ಪುನಕಾ,ಫುಂಟ್‌ಶೋಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಹರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ವಿಶಾಖಪಟ್ಟಣ ಅರಕು,ಶ್ರೀಶೈಲಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್. 01.12.2024 10ದಿನಗಳು ಅಖಂಡ ರಾಜಸ್ತಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ) 9743351212/ 9206979202

ನವೆಂಬರ್ ತಿಂಗಳಲ್ಲಿ 14 ದಿನಗಳ ಶಿರಡಿ ಮತ್ತು ಅಷ್ಟಜ್ಯೋತಿರ್ಲಿಂಗ ಪ್ರವಾಸ. 5 ದಿನಗಳ ಕಾಶಿ,ಅಯೋಧ್ಯ ಪ್ರವಾಸ. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477

04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉತ್ತರಭಾರತ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ, ಪ್ರೈಮ್ ಟ್ರಾವೆಲ್ಸ್, ಬೆಂಗಳೂರು03. 9448402248 7022547922

ಉದ್ಯೋಗಾವಕಾಶ
Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ,‘ಕೊರಿಯರ್ ಸೌಲಭ್ಯವಿದೆ. 8884777502, 8884777503.

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

Teachers/ Professors

ಡಾ|| ಅಂಬೇಡ್ಕರ್ ವಿದ್ಯಾನಿಕೇತನ (ರಿ) ವಿಜಯನಗರ, ಬೆಂಗಳೂರು–40
Sri Ganesh Educational & Social Welfare Trust (R)
ಕೆಂಗೇರಿ ಉಪನಗರ, ಬೆಂಗಳೂರು–60

ಡಾ|| ಅಂಬೇಡ್ಕರ್ ವಿದ್ಯಾನಿಕೇತನ (ರಿ) ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಶಾಲಾ/ಕಾಲೇಜುಗಳಿಗೆ ಈ ಕೆಳಕಂಡ ಶಿಕ್ಷಕರು ಹಾಗೂ ಉಪನ್ಯಾಸಕರು 11 ತಿಂಗಳ ತಾತ್ಕಾಲಿಕ ಹುದ್ದೆಗೆ ಅರ್ಹ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸ್ಥಳ: ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ.

ನಂ.	ಖಾಲಿ ಹುದ್ದೆ	ಹುದ್ದೆ	ಸಂಬಳ (ಅರ್ಹತೆ ಆಧಾರದ ಮೇಲೆ)
1)	ದೈಹಿಕ ಶಿಕ್ಷಕರು	3 ಹುದ್ದೆ	10,000 ದಿಂದ 15,000
2)	ದೈಹಿಕ ಶಿಕ್ಷಣ ಉಪನ್ಯಾಸಕರು	1 ಹುದ್ದೆ	15,000 ದಿಂದ 20,000
3)	ವಿಜ್ಞಾನ ಶಿಕ್ಷಕರು (ಸಿಬಿಎಸ್‌ಇ)	3 ಹುದ್ದೆ	10,000 ದಿಂದ 15,000
4)	ಇಂಗ್ಲಿಷ್ ಶಿಕ್ಷಕರು (ಕಂಪ್ಯೂಟರ್ ಜ್ಞಾನ ಹೊಂದಿರುವ)	3 ಹುದ್ದೆ ತಲಾ 1 ಹುದ್ದೆ	10,000 ದಿಂದ 20,000
5)	ಇಂಗ್ಲಿಷ್, ಇತಿಹಾಸ ಮತ್ತು ಅರ್ಥ ಶಾಸ್ತ್ರ ಉಪನ್ಯಾಸಕರು (ಕಂಪ್ಯೂಟರ್ ಅನುಭವವುಳ್ಳವರು)	ತಲಾ 3 ಹುದ್ದೆಗಳು	15,000 ದಿಂದ 20,000

ಡಾ|| ಅಂಬೇಡ್ಕರ್ ವಿದ್ಯಾನಿಕೇತನ (ರಿ)
2ನೇ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560040

ಉಪನ್ಯಾಸಕರು ಬೇಕಾಗಿದ್ದಾರೆ

ಈ ಮೇಲ್ಕಂಡ ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಎ.ಎನ್.ಆರ್ ಪಿಯು ಕಾಲೇಜ್, ತೊಂಡೇಬಾವಿ, ಗೌರಿಬಿದನೂರು ತಾ. ಚಿಕ್ಕಬಳ್ಳಾಪುರ ಜಿಲ್ಲೆ, ಇಲ್ಲಿ ನಡೆಯುತ್ತಿರುವ ಅನುದಾನಿತ ಕಾಲೇಜಿಗೆ ಬೇರೆ ಕಾಲೇಜಿನ ಅನುದಾನಕ್ಕೆ ಒಳಪಟ್ಟ ಇತಿಹಾಸ, ಕನ್ನಡ, ಇಂಗ್ಲಿಷ್, ವಾಣಿಜ್ಯಶಾಸ್ತ್ರ ಮತ್ತು ದೈಹಿಕ ಶಿಕ್ಷಣ ಉಪನ್ಯಾಸಕರು ಬೇಕಾಗಿದ್ದಾರೆ.

ಬೇರೆ ಕಾಲೇಜಿನಿಂದ ನಮ್ಮ ಕಾಲೇಜಿಗೆ ಬರಬಯಸುವ ಅಥವಾ ಅಂತರ್ ಕಾಲೇಜ್ ವರ್ಗಾವಣೆ ಬಯಸುವ ಉಪನ್ಯಾಸಕರು ಸಂಪರ್ಕಿಸಿ :
ಜಿ.ರಮೇಶ್, ಕಾರ್ಯದರ್ಶಿ: 9740387315, ರಂಗನಾಥ್ : 9880577938

ಭವಿಷ್ಯ
Astrology

★||ಅಷ್ಟಮಂಗಲ||★ ನಿಮ್ಮ ಆಸೆಯ ... ಸ್ತ್ರೀ ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳಿಗೆ 1 ದಿನದಲ್ಲಿ ಶಾಶ್ವತ ಪರಿಹಾರ. 9611968471

ಸ್ತ್ರೀವಶೀಕರಣ, ಪುರುಷ ವಶೀಕರಣ, ವಾಮಮಂತ್ರ, ಶತ್ರುನಾಶ, ಎಲ್ಲ ಸಮಸ್ಯೆಗಳಿಗೂ 3 ದಿನದಲ್ಲಿ ಪರಿಹಾರ ಮಾಡಿಕೊಡಲಾಗುವುದು. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಓದುಗರ ಗಮನಕ್ಕೆ
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಸಾರ್ವಜನಿಕ ಪ್ರಕಟಣೆ
www.dhclassifieds.com BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/- PER SQCM
9886213331
9901641752

ಲೆಬನಾನ್ ಮೇಲೆ ತೀವ್ರಗೊಂಡ ದಾಳಿ • 21 ನಾಗರಿಕರು ಸಾವು

ಕದನ ವಿರಾಮ ತಿರಸ್ಕರಿಸಿದ ಇಸ್ರೇಲ್

ಬೈರೂತ್/ವಾಷಿಂಗ್ಟನ್ (ಎಪಿ/ಎಎಫ್‌ಪಿ): ಲೆಬನಾನ್ ಮೇಲಿನ ತನ್ನ ದಾಳಿಯನ್ನು ಇಸ್ರೇಲ್ ಬುಧವಾರ ತೀವ್ರಗೊಳಿಸಿದೆ. ಕದನ ವಿರಾಮ ಪ್ರಸ್ತಾವವನ್ನು ತಳ್ಳಿ ಹಾಕಿರುವ ಇಸ್ರೇಲ್, ದಕ್ಷಿಣ ಲೆಬನಾನ್‌ನ ಖಾನಾ, ನಬತಿ ಹಾಗೂ ರಾಜಧಾನಿ ಬೈರೂತ್ ಮೇಲೆ ತೀವ್ರ ವಾಯುದಾಳಿ ನಡೆಸಿದೆ. ಈ ದಾಳಿಗಳಲ್ಲಿ ಒಟ್ಟು 21 ಮಂದಿ ಮೃತಪಟ್ಟಿದ್ದಾರೆ.

ಖಾನಾ ನಗರವೊಂದರಲ್ಲಿಯೇ 15 ಮಂದಿ ಮೃತಪಟ್ಟಿದ್ದಾರೆ. ಇನ್ನಷ್ಟು ಮಂದಿ ಅವಶೇಷಗಳಡಿ ಸಿಲುಕಿರುವ ಶಂಕೆ ಇದೆ’ ಎಂದು ಲೆಬನಾನ್ ರಕ್ಷಣಾ ಸಚಿವಾಲಯ ಹೇಳಿದೆ. ಈ ದಾಳಿಯ ಬಗ್ಗೆ ಇಸ್ರೇಲ್ ಈವರೆಗೂ ಪ್ರತಿಕ್ರಿಯಿಸಿಲ್ಲ.

‘ಇಸ್ರೇಲ್ ದಾಳಿಗೆ ಈ ನಗರದ ನಾಗರಿಕರು, ಪುಟ್ಟ ಕಂದಮ್ಮಗಳು ಮೃತಪಟ್ಟಿರುವುದು ಕರಾಳ ಇತಿಹಾಸವಾಗಿದೆ. ಇಸ್ರೇಲ್–ಹಿಜ್ಬುಲ್ಲಾ ಸಂಘರ್ಷದ ಕಾರಣಕ್ಕಾಗಿ 1996ರಲ್ಲಿ ವಿಶ್ವಸಂಸ್ಥೆಯ ಖಾನಾ ನಗರದ ನೂರಾರು ಮಂದಿಗೆ ತನ್ನ ನೆಲೆಯಲ್ಲಿ ಆಶ್ರಯ ನೀಡಿತ್ತು. ಇಸ್ರೇಲ್ ಈ ನೆಲೆಯ ಮೇಲೆ ದಾಳಿ ನಡೆಸಿದ್ದರ ಪರಿಣಾಮ 100 ಮಂದಿ ನಾಗರಿಕರು ಮೃತಪಟ್ಟಿದ್ದರು. ಇನ್ನು 2006ರಲ್ಲಿ ಇಸ್ರೇಲ್ ಇಲ್ಲಿನ ವಸತಿ ಸಮುಚ್ಚಯದ ಮೇಲೆ ದಾಳಿ ನಡೆಸಿತ್ತು. ಆ ವೇಳೆ 36 ಮಂದಿ ಮೃತಪಟ್ಟಿದ್ದರು. ಮೃತರಲ್ಲಿ ಮಕ್ಕಳು ಮಂದಿ ಕಂದಮ್ಮಗಳೇ ಆಗಿದ್ದರು.

ಬೈರೂತ್ ನಂತರ, ನಬತಿ ನಗರವು ಹಿಜ್ಬುಲ್ಲಾ ಸಂಘಟನೆಯ ಹಿಡಿತದಲ್ಲಿರುವ ಮತ್ತೊಂದು ನಗರ. ಈ ನಗರದ ಕಾರ್ಪೊರೇಷನ್ ಕಟ್ಟಡದ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ದಾಳಿಯಲ್ಲಿ ಈ ನಗರದ ಮೇಯರ್ ಅಹಮದ್ ಕಹಿಲ್ ಸೇರಿ ಐವರು ಮೃತಪಟ್ಟಿದ್ದಾರೆ. ದಾಳಿಗೆ ಇಡೀ ನಗರವೇ ಹೊಗೆಯಿಂದ ಆವೃತವಾಗಿತ್ತು ಎಂದು ಸ್ಥಳೀಯ ಮಾಧ್ಯಮಗಳು ಹೇಳಿವೆ.

‘ಬೈರೂತ್ ಮೇಲೆ ದಾಳಿ ನಡೆಸಿದಂತೆ ಇಸ್ರೇಲ್‌ಗೆ ಸೂಚಿಸಲಾಗಿಲ್ಲ’ ಎಂದು ಅಮೆರಿಕ ಭರವಸೆ ನೀಡಿದೆ’ ಎಂದು ಲೆಬನಾನ್ ಹಂಗಾಮಿ ಪ್ರಧಾನಿ ನಜೀಬ್ ಮಿಕಾತಿ ಹೇಳಿದ್ದಾರೆ. ಆದರೆ, 6 ದಿನಗಳ ವಿರಾಮದ ಬಳಿಕ ಬೈರೂತ್ ಮೇಲೆ ಇಸ್ರೇಲ್ ಬುಧವಾರ ದಾಳಿ ನಡೆಸಿದೆ.

ಮೆಲೋನಿ ಭೇಟಿ: ‘ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಶುಕ್ರವಾರ ಜೋರ್ಡಾನ್‌ನ ರಾಜ ಹಾಗೂ ಲೆಬನಾನ್‌ನ ಪ್ರಧಾನಿಯವರನ್ನು ಬೈರೂತ್‌ನಲ್ಲಿ ಭೇಟಿಯಾಗಲಿದ್ದಾರೆ’ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಖಾನಾ ನಗರದ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಿಂದ ಕಟ್ಟಡಗಳು ನಾಶವಾಗಿವೆ –ಎಎಫ್‌ಪಿ ಚಿತ್ರ

‘ಮಾತು ಕೇಳುವ ಇತಿಹಾಸ ಇಸ್ರೇಲ್‌ಗಿಲ್ಲ’

‘ಇರಾನ್‌ನ ಅಣ್ವಸ್ತ್ರ ಸಂಗ್ರಹಾಗಾರ ಹಾಗೂ ತೈಲ ಘಟಕಗಳ ಮೇಲೆ ದಾಳಿ ನಡೆಸುವುದಿಲ್ಲ ಎಂದು ಇಸ್ರೇಲ್ ಭರವಸೆ ನೀಡಿದೆ. ಆದರೆ, ‘ಇಸ್ರೇಲ್ ತನ್ನ ಎಲ್ಲ ಭರವಸೆಗಳನ್ನು ಉಳಿಸಿಕೊಂಡ ಉದಾಹರಣೆಗಳೇ ವಿರಳ’ ಎಂದು ಅಮೆರಿಕದ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

‘ಲೆಬನಾನ್‌ನಲ್ಲಿ ತಾತ್ಕಾಲಿಕವಾಗಿ ಕದನ ವಿರಾಮ ಘೋಷಿಸುವ ಅಮೆರಿಕ ಹಾಗೂ ಫ್ರಾನ್ಸ್‌ನ ಪ್ರಸ್ತಾವವನ್ನು ಸ್ವಾಗತಿಸುತ್ತೇವೆ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರು ಹೇಳಿದ್ದರು. ಆದರೆ, ಈಗ ಹೇಳಿದ ಎರಡನೇ ದಿನದಲ್ಲಿ ಲೆಬನಾನ್ ಮೇಲೆ ದಾಳಿ ನಡೆಸಿ, ಹಿಜ್ಬುಲ್ಲಾ ಸಂಘಟನೆಯ ಮುಖ್ಯಸ್ಥ ನಸ್ರಲ್ಲಾ ಅವರನ್ನು ಹತ್ಯೆ ಮಾಡಿತು’ ಎಂದರು.

‘ಮುಂದಿನ 30 ದಿನಗಳ ಒಳಗೆ ಗಾಜಾದೊಳಗೆ ಹೆಚ್ಚು ಮಾನವೀಯ ನೆರವು ತಲುಪುವುದಕ್ಕೆ ಅನುವು ಮಾಡಿಕೊಡಬೇಕು. ಇಲ್ಲವಾದಲ್ಲಿ ಶಸ್ತ್ರಾಸ್ತ್ರ ಪೂರೈಕೆಯನ್ನು ನಿಲ್ಲಿಸಲಾಗುವುದು’ ಎಂದು ಅಮೆರಿಕವು ಇಸ್ರೇಲ್‌ಗೆ ಎಚ್ಚರಿಕೆ ನೀಡಿದೆ’ ಎಂದೂ ಹೆಸರು ಹೇಳಲು ಇಚ್ಛಿಸದ ಅಧಿಕಾರಿಗಳು ಹೇಳಿದರು.

ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟರ ಪಾತ್ರದ ಆರೋಪ • ಕೆನಡಾ ಪ್ರಧಾನಿ ಟ್ರುಡೊ ಒಪ್ಪಿಗೆ

‘ಭಾರತದ ವಿರುದ್ಧದ ಆರೋಪಕ್ಕೆ ಸಾಕ್ಷ್ಯವಿಲ್ಲ’

ಒಟ್ಟಾವ (ಪಿಟಿಐ): ‘ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟ್‌ಗಳ ಪಾತ್ರ ಇದೆ ಎಂದು ಆರೋಪಿಸಿದಾಗ ನನ್ನಲ್ಲಿ ಯಾವುದೇ ‘ಬಲವಾದ ಸಾಕ್ಷಿ ಪುರಾವೆಗಳು’ ಇರಲಿಲ್ಲ’ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಬುಧವಾರ ಒಪ್ಪಿಕೊಂಡಿದ್ದಾರೆ. ಆದರೆ ‘ಗುಪ್ತಚರ ಮಾಹಿತಿ ಮಾತ್ರ ಇತ್ತು’ ಎಂದು ಅವರು ಹೇಳಿದ್ದಾರೆ.

ಜಸ್ಟಿನ್ ಟ್ರುಡೊ

ಚುನಾವಣಾ ಪ್ರಕ್ರಿಯೆಗಳಲ್ಲಿ ಹಾಗೂ ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪ ಕುರಿತ ವಿಚಾರಣೆಗೆ ಹಾಜರಾದ ಟ್ರುಡೊ, ‘ಭಾರತದ ರಾಜತಾಂತ್ರಿಕರು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕುರಿತು ಭಿನ್ನಾಭಿಪ್ರಾಯ ಹೊಂದಿರುವ ಕೆನಡಾ ಪ್ರಜೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ, ಆ ಮಾಹಿತಿಯನ್ನು ಅವರು ಭಾರತ ಸರ್ಕಾರದ ಅತ್ಯುನ್ನತ ಹಂತಗಳಲ್ಲಿ ಇರುವವರಿಗೆ ಹಾಗೂ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಂತಹ ಕ್ರಿಮಿನಲ್ ಸಂಘಟನೆಗಳಿಗೆ ರವಾನಿಸುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಕೆನಡಾದ ಸಂಸ್ಥೆಗಳಿಂದ ಹಾಗೂ ಬಹುಶಃ ಫೈವ್ ಐಯ್ಸ್ ಮಿತ್ರ ರಾಷ್ಟ್ರಗಳಿಂದ (ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಜಿಲೆಂಡ್) ದೊರೆತ ಗುಪ್ತಚರ ಮಾಹಿತಿಯನ್ನು ನನಗೆ ನೀಡಲಾಯಿತು. ಅದು, ಇದರಲ್ಲಿ ಭಾರತ ಭಾಗಿಯಾಗಿರುವುದನ್ನು ಬಹಳಷ್ಟು ಸ್ಪಷ್ಟಪಡಿಸಿತು... ಭಾರತ ಸರ್ಕಾರದ ಏಜೆಂಟ್‌ಗಳು ಕೆನಡಾದ ನೆಲದಲ್ಲಿ ಕೆನಡಾದ ಪ್ರಜೆಗಳ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ’ ಎಂದು ಟ್ರುಡೊ ಹೇಳಿದ್ದಾರೆ.

ಇದನ್ನು ತಮ್ಮ ನೇತೃತ್ವದ ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕಾಗಿತ್ತು ಎಂದು ಅವರು ಹೇಳಿದ್ದಾರೆ. ‘ಭಾರತವು ಇದನ್ನು ನಿಜಕ್ಕೂ ಮಾಡಿದೆ ಎಂದು ನಂಬಲು ನಮ್ಮಲ್ಲಿ ಕಾರಣಗಳಿದ್ದವು’ ಎಂದು ತಿಳಿಸಿದ್ದಾರೆ. ತಮ್ಮ ನೇತೃತ್ವದ ಸರ್ಕಾರವು ತಕ್ಷಣವೇ ಭಾರತ ಸರ್ಕಾರದ ಜೊತೆ ಸಮಾಲೋಚನೆ ನಡೆಸಿ, ಈ ವಿಚಾರದಲ್ಲಿ ಉತ್ತರದಾಯಿತ್ವ ಇರುವಂತೆ ಮಾಡಲು ಒಟ್ಟಾಗಿ ಕೆಲಸ ಮಾಡುವ ಮಾರ್ಗ ಅನುಸರಿಸಿತು ಎಂದಿದ್ದಾರೆ.

ಕಳೆದ ಸೆಪ್ಟೆಂಬರ್‌ನಲ್ಲಿ ಭಾರತವು ಆತಿಥ್ಯ ವಹಿಸಿದ್ದ ಜಿ–20 ಶೃಂಗಸಭೆಯನ್ನು ಉಲ್ಲೇಖಿಸಿದ ಟ್ರುಡೊ, ಆ ಸಭೆಯು ಭಾರತದ ಪಾಲಿಗೆ ವಿಶೇಷ ಸಂದರ್ಭವಾಗಿತ್ತು. ಈ ಆರೋಪಗಳನ್ನು ಆಗ ಬಹಿರಂಗಪಡಿಸಿ ಭಾರತದ ಪಾಲಿಗೆ ಆ ಶೃಂಗಸಭೆಯು ತೀರಾ ಅಹಿತಕರವಾಗಿ ಪರಿಣಮಿಸುವಂತೆ ಮಾಡುವ ಅವಕಾಶ ಕೆನಡಾ ದೇಶಕ್ಕೆ ಇತ್ತು ಎಂದು ಅವರು ಹೇಳಿದ್ದಾರೆ.

‘ಆದರೆ ಹಾಗೆ ಮಾಡದೆ ಇರಲು ನಾವು ತೀರ್ಮಾನಿಸಿದೆವು. ಆದರೆ ಸಾಕ್ಷ್ಯ ಒದಗಿಸಲು ಭಾರತದ ಅಧಿಕಾರಿಗಳು ಒತ್ತಾಯಿಸಿದರು. ‘ಆಗ ನಮ್ಮಲ್ಲಿ ಇದ್ದಿದ್ದು ಗುಪ್ತಚರ ಮಾಹಿತಿ, ಬಲವಾದ ಪುರಾವೆ ಇರಲಿಲ್ಲ. ಹೀಗಾಗಿ ಜೊತೆಯಾಗಿ ಕೆಲಸ ಮಾಡೋಣ. ನಿಮ್ಮ ಭದ್ರತಾ ಸಂಸ್ಥೆಗಳ ಬಳಸಿ ಅರಸೋಣ. ನಮಗೆ ಸಾಕ್ಷ್ಯ ಸಿಗಬಹುದು ಎಂದಿದ್ದೆವು’ ಎಂದು ಟ್ರುಡೊ ಹೇಳಿದ್ದಾರೆ.

‘ಮೋದಿಗೆ ವಿವರಿಸಲು ಯತ್ನಿಸಿದ್ದೆ’

ಜಿ–20 ಶೃಂಗಸಭೆಯ ನಂತರ ತಾವು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ, ಈ ವಿಚಾರವನ್ನು ತಿಳಿಸಿದಾಗ, ‘ಅವರ ಕಡೆಯಿಂದ ಮಾಮೂಲಿನ ಪ್ರತಿಕ್ರಿಯೆ ಬಂತು. ಅಂದರೆ, ಭಾರತ ಸರ್ಕಾರದ ವಿರುದ್ಧ ಮಾತನಾಡುವ ವ್ಯಕ್ತಿಗಳು ಕೆನಡಾದಲ್ಲಿ ಇದ್ದಾರೆ, ಅವರನ್ನು ಬಂಧಿಸಬೇಕು ಎಂಬುದು ತಮ್ಮ ಬಯಕೆ ಎಂದು ಅವರು (ಮೋದಿ) ಹೇಳಿದರು’ ಎಂದು ಜಸ್ಟಿನ್ ಟ್ರುಡೊ ತಿಳಿಸಿದ್ದಾರೆ.

ಕೆನಡಾದಲ್ಲಿ ಬೇರೆ ದೇಶಗಳ ಸರ್ಕಾರಗಳನ್ನು ಟೀಕಿಸುವ ಹಾಗೂ ಕೆನಡಾದ ಸರ್ಕಾರವನ್ನು ಟೀಕಿಸುವ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂಬುದನ್ನು ಮೋದಿ ಅವರಿಗೆ ವಿವರಿಸಲು ತಾವು ಯತ್ನಿಸಿದ್ದಾಗಿಯೂ ಟ್ರುಡೊ ಹೇಳಿದ್ದಾರೆ.

ಭಾರತ ಸಹಕರಿಸುತ್ತಿಲ್ಲ: ಅಮೆರಿಕ

ವಾಷಿಂಗ್ಟನ್/ ಲಂಡನ್(ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ತನಿಖೆಗೆ ಭಾರತವು ಕೆನಡಾಕ್ಕೆ ಸಹಕಾರ ನೀಡುತ್ತಿಲ್ಲ ಎಂದು ಅಮೆರಿಕ ಆರೋಪಿಸಿದೆ. ಇದರ ಬೆನ್ನಲ್ಲೆ ಪ್ರಕರಣದ ತನಿಖೆಗೆ ಭಾರತ ಸಂಪೂರ್ಣ ಸಹಕಾರ ನೀಡುವ ಅಗತ್ಯವಿದೆ ಎಂದು ಬ್ರಿಟನ್ ಕೂಡ ಹೇಳಿದೆ.

‘ಕೆನಡಾ ಮಾಡಿರುವ ಆರೋಪಗಳು ಗಂಭೀರ ವಾಗಿವೆ. ಭಾರತ ಇದನ್ನು ಗಂಭೀರವಾಗಿ ಪರಿಗಣಿಸಿ, ತನಿಖೆಗೆ ಸಹಕಾರ ನೀಡಬೇಕೆಂದು ನಾವು ಬಯಸುತ್ತೇವೆ’ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಮಂಗಳವಾರ ತಿಳಿಸಿದ್ದಾರೆ.

‘ಭಾರತ–ಕೆನಡಾ ನಡುವಿನ ರಾಜತಾಂತ್ರಿಕ ಸಂಬಂಧದ ಬಗ್ಗೆ ನಾವು ಪ್ರತಿಕ್ರಿಯೆ ನೀಡಲ್ಲ. ಆದರೆ, ಕೆನಡಾ ಮಾಡಿರುವ ಆರೋಪಗಳನ್ನು ಭಾರತ ಗಂಭೀರವಾಗಿ ಪರಿಗಣಿಸಬೇಕು’ ಎಂದು ಮಿಲ್ಲರ್ ಹೇಳಿದ್ದಾರೆ.

ಆರ್‌ಎಸ್‌ಎಸ್ ನಿಷೇಧಿಸಿ: ಜಗ್‌ಮೀತ್

ವಾಷಿಂಗ್ಟನ್ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ನಾಯಕನ ಹತ್ಯೆಯಲ್ಲಿ ಕೆಲವು ಭಾರತೀಯ ರಾಜತಾಂತ್ರಿಕರು ಭಾಗಿಯಾಗಿದ್ದಾರೆ ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿಎಂಪಿ) ಆರೋಪಿಸಿರುವ ಬೆನ್ನಲ್ಲೆ ಕೆನಡಾದ ಸಿಖ್ ನಾಯಕ ಜಗ್‌ಮೀತ್ ಸಿಂಗ್, ಆರ್‌ಎಸ್‌ಎಸ್ ನಿಷೇಧಿಸಬೇಕು ಮತ್ತು ಭಾರತೀಯ ರಾಜತಾಂತ್ರಿಕರ ವಿರುದ್ಧ ನಿರ್ಬಂಧಗಳನ್ನು ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಖಾಲಿಸ್ತಾನಿ ಪ್ರತ್ಯೇಕತಾವಾದ ಪರ ನಿಲುವು ಹೊಂದಿರುವ ಸಿಂಗ್ ನ್ಯೂ ಡೆಮಾಕ್ರಟಿಕ್ ಪಕ್ಷದ (ಎನ್‌ಡಿಪಿ) ನಾಯಕರಾಗಿದ್ದು, ಅವರು ಈ ಹಿಂದೆ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಸರ್ಕಾರವನ್ನು ಬೆಂಬಲಿಸಿದ್ದರು.

‘ಭಾರತೀಯ ರಾಜತಾಂತ್ರಿಕರ ಮೇಲೆ ಕೆನಡಾ ಸರ್ಕಾರವು ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಬೇಕು. ಕೆನಡಾ ಮತ್ತು ಇತರ ದೇಶಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕ ಗುಂಪು ಆಗಿರುವ ಆರ್‌ಎಸ್‌ಎಸ್ ಸಂಘಟನೆಯನ್ನು ನಿಷೇಧಿಸಬೇಕು’ ಎಂದು ಸಿಂಗ್ ಆಗ್ರಹಿಸಿದ್ದಾರೆ.

‘ಮುಕ್ತ ಮಾತುಕತೆ ನಡೆಸಲಿ’

ಒಟ್ಟಾವ (ಪಿಟಿಐ): ಭಾರತ-ಕೆನಡಾ ರಾಜತಾಂತ್ರಿಕ ಬಿಕ್ಕಟ್ಟು ಉಂಟಾಗಿರುವ ಮಧ್ಯೆ, ಒಂಟಾರಿಯೊ ಮೂಲದ ಸಂಸ್ಥೆಯೊಂದು ಈ ವಿಷಯದಲ್ಲಿ ಉಭಯ ರಾಷ್ಟ್ರಗಳು ಮುಕ್ತ ಮಾತುಕತೆ ನಡೆಸುವ ಅಗತ್ಯವನ್ನು ಒತ್ತಿ ಹೇಳಿದೆ.

ಕೆನಡಾದ ಭದ್ರತೆ, ಸಮೃದ್ಧಿ ಮತ್ತು ಜಾಗತಿಕ ನಿಲುವಿನ ದೃಷ್ಟಿಯಲ್ಲಿ ಬಲವಾದ ದ್ವಿಪಕ್ಷೀಯ ಬಾಂಧವ್ಯವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯವಾಗಿದೆ. ಇದಕ್ಕಾಗಿ ಉಭಯ ರಾಷ್ಟ್ರಗಳು ಶಾಂತಿಯುತ ನಿರ್ಣಯಗಳ ಕಡೆಗೆ ಕೆಲಸ ಮಾಡುವುದು ನಿರ್ಣಾಯಕವಾಗಿದೆ ಎಂದು ‘ದಿ ಕೆನಡಾ–ಇಂಡಿಯಾ ಫೌಂಡೇಷನ್’ ಪ್ರತಿಪಾದಿಸಿದೆ.

ಪ್ರಾದೇಶಿಕ ಸಹಕಾರಕ್ಕೆ ಮೂರು ಅನಿಷ್ಟ ಅಡ್ಡಿ

ಒಂದನೇ ಪುಟದಿಂದ...

ಸಹಕಾರವು ಪರಸ್ಪರ ಗೌರವ ಮತ್ತು ಸಾರ್ವಭೌಮತ್ವ, ಸಮಾನತೆಯನ್ನು ಆಧರಿಸಿರಬೇಕು. ಎಸ್‌ಸಿಒ ಸದಸ್ಯ ರಾಷ್ಟ್ರಗಳು ಒಗ್ಗಟ್ಟಾಗಿ ಮುನ್ನಡೆಯುವುದರಿಂದ ಸದಸ್ಯ ರಾಷ್ಟ್ರಗಳು ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದಾಗಿದೆ ಎಂದು ಹೇಳಿದರು. ವಿಶೇಷವಾಗಿ ಎಸ್‌ಸಿಒ ಕಾರ್ಯಸೂಚಿಗೆ ಬದ್ಧವಾಗಿರುವುದನ್ನು ಒತ್ತಿಹೇಳಿದ ಜೈಶಂಕರ್, ‘ಒಳ್ಳೆಯ ನೆರೆಹೊರೆ’ ಕಾಣೆಯಾಗಿದೆ. ನೆರೆಹೊರೆಯ ದೇಶಗಳ ನಡುವೆ ಉತ್ತಮ ಸಂಬಂಧ ಮತ್ತು ನಂಬಿಕೆಯ ಕೊರತೆ ಉಂಟಾಗಿದೆ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ’ ಎಂದು ಪಾಕಿಸ್ತಾನ ಮತ್ತು ಚೀನಾದ ಹೆಸರನ್ನು ನೇರವಾಗಿ ಉಲ್ಲೇಖಿಸದೆ ಹೇಳಿದರು.

‘ಒನ್ ಬೆಲ್ಟ್ ಒನ್ ರೋಡ್’ ಅನುಮೋದಿಸದ ಭಾರತ

ಇಸ್ಲಾಮಾಬಾದ್ (ಪಿಟಿಐ): ಚೀನಾದ ಮಹತ್ವಾಕಾಂಕ್ಷೆಯ ‘ಒನ್ ಬೆಲ್ಟ್ ಒನ್ ರೋಡ್’ (ಒಬಿಒಆರ್) ಉಪಕ್ರಮವನ್ನು ಅನುಮೋದಿಸಲು ಭಾರತವು ಬುಧವಾರ ಮತ್ತೊಮ್ಮೆ ನಿರಾಕರಿಸಿದೆ.

ಈ ವಿವಾದಾತ್ಮಕ ಸಂಪರ್ಕ ಯೋಜನೆಯನ್ನು ಬೆಂಬಲಿಸದ ಶಾಂಘೈ ಸಹಕಾರ ಸಂಘಟನೆಯ(ಎಸ್‌ಸಿಒ) ಸದಸ್ಯ ರಾಷ್ಟ್ರಗಳಲ್ಲಿ ಭಾರತ ಏಕೈಕ ದೇಶವಾಗಿದೆ. ಈ ಹಿಂದಿನ ಶೃಂಗಸಭೆಗಳಲ್ಲೂ ಭಾರತ ಒಬಿಒಆರ್ ಅನುಮೋದಿಸಲು ನಿರಾಕರಿಸಿತ್ತು. ಎಸ್‌ಸಿಒ ಶೃಂಗಸಭೆಯ ಕೊನೆಯಲ್ಲಿ ಬಿಡುಗಡೆ ಮಾಡಿದ ಜಂಟಿ ಹೇಳಿಕೆಯಲ್ಲಿ ರಷ್ಯಾ, ಬೆಲಾರೂಸ್, ಇರಾನ್, ಕಜಕಿಸ್ತಾನ, ಕಿರ್ಗಿಸ್ತಾನ, ಪಾಕಿಸ್ತಾನ, ತಜಕಿಸ್ತಾನ ಮತ್ತು ಉಜ್ಬೆಕಿಸ್ತಾನ ಚೀನಾದ ಒಬಿಒಆರ್ ಸಂಪರ್ಕ ಉಪಕ್ರಮಕ್ಕೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿವೆ. ‘ಯುರೇಷಿಯನ್ ಎಕನಾಮಿಕ್ ಯೂನಿಯನ್’ ಅನ್ನು ಒಬಿಒಆರ್‌ನೊಂದಿಗೆ ಜೋಡಿಸುವ ಪ್ರಯತ್ನಗಳು ಸೇರಿದಂತೆ ಯೋಜನೆಯ ಅನುಷ್ಠಾನದಲ್ಲಿ ನಡೆಯುತ್ತಿರುವ ಕೆಲಸವನ್ನು ದೇಶಗಳು ಗಮನಿಸಿವೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

‘ಸಂಕುಚಿತ ದೃಷ್ಟಿಕೋನ ಬೇಡ’: ಚೀನಾದ ಬೆಲ್ಟ್ ಅಂಡ್ ರೋಡ್ ಉಪಕ್ರಮಕ್ಕೆ ಅಂಟಿಕೊಂಡಿರುವ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಈ ಯೋಜನೆಯನ್ನು ‘ರಾಜಕೀಯ ಸಂಕುಚಿತ ದೃಷ್ಟಿಕೋನದಿಂದ ನೋಡಬಾರದು’ ಎಂದು ಎಸ್‌ಸಿಒ ಶೃಂಗಸಭೆಯಲ್ಲಿ ಪ್ರತಿಪಾದಿಸಿದ್ದಾರೆ. ಈ ಯೋಜನೆ ಅನುಮೋದಿಸಲು ಭಾರತ ಹಿಂಜರಿಯುತ್ತಿರುವ ಹಿನ್ನೆಲೆಯಲ್ಲಿ ಷರೀಫ್ ಈ ಮಾತು ಹೇಳಿದಂತಿದೆ.

ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್‌ನಂತಹ ದೊಡ್ಡ ಯೋಜನೆಯ ಭಾಗವಾಗಿರುವ ಚೀನಾದ ಬೆಲ್ಟ್ ಮತ್ತು ರೋಡ್ ಉಪ ಕ್ರಮವನ್ನು ವಿಸ್ತರಿಸಬೇಕು ಎಂದು ಅವರು ಹೇಳಿದ್ದಾರೆ.

ಜೈಶಂಕರ್ –ದರ್ ಔಪಚಾರಿಕ ಮಾತುಕತೆ

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವ ಐಶಾಕ್ ದರ್ ಅವರು ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯ ನೇಪಥ್ಯದಲ್ಲಿ ಎರಡು ಬಾರಿ ಔಪಚಾರಿಕವಾದ ಮಾತುಕತೆ ನಡೆಸಿದರು.

ಆದಾಗ್ಯೂ, ಉಭಯ ರಾಷ್ಟ್ರಗಳ ನಡುವೆ ಹಳಸಿರುವ ಸಂಬಂಧಗಳಲ್ಲಿ ಯಾವುದೇ ಸುಧಾರಣೆಯಾಗುವ ಲಕ್ಷಣಗಳು ಈ ಭೇಟಿ ಮತ್ತು ಮಾತುಕತೆ ವೇಳೆ ಕಂಡುಬರಲಿಲ್ಲ ಎಂದು ರಾಜತಾಂತ್ರಿಕ ಮೂಲಗಳು ತಿಳಿಸಿವೆ. ಶೃಂಗಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ಗೌರವಾರ್ಥ ಪಾಕ್ ಪ್ರಧಾನಿಯವರ ನಿವಾಸದಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ ಔತಣಕೂಟದಲ್ಲಿ ಜೈಶಂಕರ್ ಮತ್ತು ದರ್ ನಡುವೆ ಈ ಮಾತುಕತೆ ನಡೆಯಿತು ಎಂದು ಮೂಲಗಳು ತಿಳಿಸಿವೆ. ಅಲ್ಲದೆ, ಬುಧವಾರ ಶೃಂಗಸಭೆಯ ನಂತರ ಭೋಜನದ ವೇಳೆ ಜೈಶಂಕರ್ ಮತ್ತು ದರ್ ಅವರು ಅಕ್ಕಪಕ್ಕ ಕುಳಿತು ಊಟ ಮಾಡಿದರು. ಈ ವೇಳೆ ಉಭಯ ನಾಯಕರು ಸಂಭಾಷಣೆಯಲ್ಲಿ ತೊಡಗಿದ್ದು ಸಕಾರಾತ್ಮಕ ಸಂಕೇತವಾಗಿ ಕಂಡುಬಂದಿದೆ ಎಂದು ಮೂಲಗಳು ತಿಳಿಸಿವೆ.

ಔತಣಕೂಟದ ವೇಳೆ ಮತ್ತು ಶೃಂಗಸಭೆಯಲ್ಲಿ ಜೈಶಂಕರ್ ಅವರಿಗೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹಸ್ತಲಾಘವ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು. ಉಭಯ ನಾಯಕರು ಕುಶಲೋಪರಿ ಕೂಡ ನಡೆಸಿದರು. ಔತಣಕೂಟದ ವೇಳೆ ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕಾರ ‘ಭರತನಾಟ್ಯ’ ಪ್ರಸ್ತುತಪಡಿಸಲಾಯಿತು ಎಂದು ತಿಳಿದುಬಂದಿದೆ.

ಪಾಕಿಸ್ತಾನದ ಗೃಹ ಸಚಿವ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಮೊಹ್ಸಿನ್ ನಖ್ವಿ, ಜೈಶಂಕರ್ ಮತ್ತು ದರ್ ನಡುವೆ ನಡೆದಿರುವ ಔಪಚಾರಿಕ ಮಾತುಕತೆಯು ಉಭಯ ರಾಷ್ಟ್ರಗಳ ನಡುವಿನ ಕ್ರಿಕೆಟ್ ಸಂಬಂಧಗಳನ್ನು ಸುಧಾರಿಸಲಿದೆ ಎಂದು ಹೇಳಿದ್ದಾರೆ.

ವಾಲ್ಮೀಕಿ ವಿಸ್ಮಯ ಹುಟ್ಟಿಸುವ ದಲಿತ ಪ್ರತಿಭೆ

• ಜ್ಯೋತಿ



ಇಂದು ಜಯಂತಿ

ಇಂದು, ಭಾರತದ ಆದಿಕವಿ ಎಂದು ಗುರುತಿಸಲ್ಪಟ್ಟ ವಾಲ್ಮೀಕಿ ಹುಟ್ಟಿದ ದಿನ. ಭಾರತೀಯರು ಅತ್ಯಂತ ಗೌರವಿಸುವ ಮಹಾಕಾವ್ಯ ರಾಮಾಯಣವನ್ನು ಬರೆದ ಕವಿ ವಾಲ್ಮೀಕಿಯ ಹುಟ್ಟಿದ ದಿನವನ್ನು ಒಂದು ರಾಷ್ಟೀಯ ದಿನವಾಗಿ ಆಚರಿಸುತ್ತಿರುವುದು, ಕವಿಗೆ ಸಂದ ಗೌರವ ಎನ್ನಬಹುದು. 24,000 ಸಂಸ್ಕೃತ ಶ್ಲೋಕಗಳಿರುವ ಒಂದು ಬೃಹತ್ ಗ್ರಂಥವನ್ನು ಯಾವುದೇ ಹಿಂದಿನ ಮಾದರಿಯ ಆಸರೆಯಿಲ್ಲದೆ ತಾನೇ ಸೃಷ್ಟಿಸಿದ ಕಾವ್ಯ ಪ್ರಕಾರದಲ್ಲಿ ಬರೆದ ವಾಲ್ಮೀಕಿಯ ವಿದ್ವತ್ತಿಗೆ ಖಂಡಿತವಾಗಿ ನಮಿಸಬೇಕಾಗಿದೆ.

ವಾಲ್ಮೀಕಿ ಎನ್ನುವ ದಲಿತ ಸಮುದಾಯದ ಬೇಡರ ಕವಿಗೆ ದಕ್ಕಿದ ಈ ಅಪಾರ ಜನಮನ್ನಣೆಯಿಂದಾಗಿ, ಅವನ ಹಿನ್ನೆಲೆಯ ಕುರಿತು ಸಾಕಷ್ಟು ಪುರಾಣಗಳು ಸೃಷ್ಟಿಯಾಗಿರುವುದನ್ನು ನಾವು ಕೇಳಿರುತ್ತೇವೆ ಅಥವಾ ಓದಿರುತ್ತೇವೆ; ಅವನು ದರೋಡೆ ಕೋರನಾಗಿದ್ದ, ಕ್ರೂರಿಯಾಗಿದ್ದ, ಕ್ರೌಂಚ ಪಕ್ಷಿಯ ಪ್ರಕರಣದಿಂದ ಮನಃಪರಿವರ್ತಿತನಾದ, ನಾರದ ಮಹರ್ಷಿ ಅವನ ಬದುಕು ಬದಲಾಯಿಸಿದ, ‘ಮರ ಮರ’ ಮಂತ್ರದಿಂದಲೇ ಪ್ರಭಾವಿತನಾಗಿ ರಾಮಾಯಣ ರಚಿಸಿದ, ದೀರ್ಘ ತಪಸ್ಸಿನಿಂದಾಗಿ, ಮೈಮೇಲೆ ಹುತ್ತ ಬೆಳೆದು ಅದರಿಂದ ಅವನಿಗೆ ವಾಲ್ಮೀಕಿ ಎನ್ನುವ ಹೆಸರು ಬಂತು ಮತ್ತು ಅದರಿಂದ ಎದ್ದು ಬಂದು ಜ್ಞಾನೋದಯಗೊಂಡು ಕವಿಯಾದ... ಅಂತಹ ಪುರಾಣಗಳ ತಿರುಳು.

ಇಂದು, ವಾಲ್ಮೀಕಿ ಜನಾಂಗಕ್ಕೆ ಸೇರಿದ ದಲಿತರು, ಉತ್ತರ ಭಾರತದ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಆದರೆ, ಇವರು, ವಾಲ್ಮೀಕಿ ಕುರಿತಂತೆ ಹೆಣೆದಿರುವ ಈ ಮೇಲಿನ ಕಥೆಗಳನ್ನು ಅಕ್ಷರಶಃ ನಿರಾಕರಿಸುತ್ತಾರೆ. ಅಂದರೆ, ಒಬ್ಬ ದುರ್ಬಲ ಜಾತಿಯ ವ್ಯಕ್ತಿ ತನ್ನ ಶ್ರಮ ಮತ್ತು ಸ್ವಸಾಮರ್ಥ್ಯದಿಂದ ಒಂದು ಶ್ರೇಷ್ಠ ಗ್ರಂಥವನ್ನು ರಚಿಸಿದ ಎಂದು ಒಪ್ಪಿಕೊಳ್ಳಲು ನಮಗೆ ಯಾಕೆ ಸಾಧ್ಯವಾಗುತ್ತಿಲ್ಲ, ಎನ್ನುವುದು ಅವರ ಪ್ರಶ್ನೆ. ಒಬ್ಬ ಮನುಷ್ಯನ ಅಪ್ರತಿಮ ಸಾಧನೆಯನ್ನು, ಅವನ ಹಿನ್ನೆಲೆಯನ್ನು ಕೆದಕದೇ, ಅದರ ಮೇಲೆ ಕಥೆಗಳನ್ನು ಹೆಣೆಯದೇ, ಬಾಹ್ಯ ಕಾರಣಗಳನ್ನು ಹಿಗ್ಗಿಸಿ ಮತ್ತು, ಅವನ ಸಾಧನೆಯನ್ನು ಕುಗ್ಗಿಸದೇ, ವಸ್ತುಶಃ ಸ್ವೀಕರಿಸುವ ಮಾನಸಿಕ ವಿಕಸನ ನಮ್ಮಲ್ಲಿ ಇನ್ನೂ ಆಗಿಲ್ಲ ಎನ್ನುವುದು ವಾಸ್ತವ.

ವಾಲ್ಮೀಕಿಯ ಸಾಧನೆಯನ್ನು ಹೋಲಿಸಲು ಮತ್ತು ಜಾತಿ-ವ್ಯವಸ್ಥೆಯ ಚೌಕಟ್ಟಿನಲ್ಲಿ ಸರಿಯಾಗಿ ಅರ್ಥಮಾಡಿಕೊಳ್ಳಲು ನಮಗಿಲ್ಲಿ ದಲಿತ ಸಮುದಾಯದ ಇನ್ನೆರಡು ಸಾಧಕರ ನಿದರ್ಶನಗಳಿವೆ; ಏಕಲವ್ಯ ಮತ್ತು ಅಂಬೇಡ್ಕರ್. ಬೇಡರ ಹುಡುಗ ಏಕಲವ್ಯನ ಬಿಲ್ವಿದ್ಯೆ ಪರಿಣತಿಯನ್ನು ಪ್ರಬಲ ವರ್ಗಗಳಿಗೆ ಸಹಿಸಲು ಸಾಧ್ಯವಾಗಲಿಲ್ಲ. ಅವನ ಕಾಲದ ಅತಿರಥ ಮಹಾರಥ ಕ್ಷತ್ರಿಯ ರಾಜಕುಮಾರರು ಗುರುಗಳ ಸತತ ಮಾರ್ಗದರ್ಶನವಿದ್ದೂ ಹರಸಾಹಸ ಪಡುತ್ತಿದ್ದ ಕೌಶಲವನ್ನು ಮೀರಿ, ಏಕಲವ್ಯ ಒಬ್ಬನೇ ಬಿಲ್ವಿದ್ಯೆ ಕಲಿತ, ಅವರಿಗಿಂತಲೂ ಚೆನ್ನಾಗಿ ಕಲಿತ. ಆದರೆ, ಮೇಲ್ವರ್ಗ ಅವನ ಪ್ರತಿಭೆಯನ್ನು ಒಪ್ಪಿಕೊಳ್ಳದೇ ಹೋಯಿತು, ಅವನ ಸಾಧನೆಯ ಕುರಿತು ಕಟ್ಟುಕತೆ ಕಟ್ಟಿದಿದ್ದರೂ ಹೆಬ್ಬೆರಳ ಕಿತ್ತುಕೊಂಡಿತು ಮತ್ತು ಈ ಮೂಲಕ ಅವನ ಪರಿಶ್ರಮವನ್ನು ಮಣ್ಣಾಗಿಸಿತು. ಏಕಲವ್ಯನಿಗೆ ಹೋಲಿಸಿದರೆ, ಅಂಬೇಡ್ಕರ್ ಜೀವನದ ಪ್ರತಿಯೊಂದು ಏಳು ಬೀಳು, ಪರಿಶ್ರಮ, ಮೈಲಿಗಲ್ಲು ಇತ್ಯಾದಿಗಳ ಕುರಿತು ಸ್ಪಷ್ಟ ದಾಖಲೆಗಳು ಇರುವುದರಿಂದ, ಅವರ ಸಾಧನೆಯನ್ನು ಅಲ್ಲಗಳೆಯಲು ಸಾಧ್ಯವಾಗಲಿಲ್ಲವೆನ್ನಬಹುದು. ಬಹುಶಃ, ದಾಖಲೆಗಳಿಲ್ಲದಿದ್ದಲ್ಲಿ ಅಂಬೇಡ್ಕರ್ ಕೂಡ ಬುದ್ಧನಂತೆ ಅವತಾರ ಪುರುಷರಾಗುವ ಎಲ್ಲಾ ಸಾಧ್ಯತೆಗಳಿದ್ದವು.

ವಿಶೇಷವಾಗಿ, ನಾವಿಲ್ಲಿ ಮನಗಾಣಬೇಕಾದುದು, ಯಾವುದೊ ಒಂದು ನಿರ್ದಿಷ್ಟ ಘಟನೆಯೊಂದೇ ವ್ಯಕ್ತಿಯನ್ನು ಸಂಪೂರ್ಣವಾಗಿ ಬದಲಾಯಿಸುವುದಿಲ್ಲ. ಈ ಪ್ರಕ್ರಿಯೆ ಹಂತಹಂತವಾಗಿ ನಡೆಯುತ್ತಾ ಯಾವುದೊ ಒಂದು ಗಳಿಗೆಯಲ್ಲಿ ಅದು ತನ್ನ ಪೂರ್ಣತೆಯನ್ನು ಪ್ರಕಟಿಸ ಬಹುದು. ಇದು ಬುದ್ಧನಿಗೂ ಅನ್ವಯವಾಗುತ್ತದೆ. ಜನಪ್ರಿಯ ವ್ಯಾಖ್ಯಾನಗಳು, ಬುದ್ದ ಒಬ್ಬ ರೋಗಿ, ಹಸಿದವ ಮತ್ತು ಹೆಣವನ್ನು ನೋಡಿದ ತಕ್ಷಣ ಪ್ರಾಪಂಚಿಕ ಸುಖಗಳಿಗೆ ಅವನಲ್ಲಿ ವೈರಾಗ್ಯ ಮೂಡಿತು ಎನ್ನುತ್ತವೆ. ಆದರೆ, ಅವನಲ್ಲಿ ಜಗತ್ತಿನ ಕುರಿತ ಕಾರುಣ್ಯ ಬಾಲ್ಯದಿಂದಲೇ ಜಾಗೃತವಾಗಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಅದೇ ರೀತಿ, ವಾಲ್ಮೀಕಿಯಲ್ಲಿಯೂ ರಾಮಾಯಣ ಬರೆಯುವಷ್ಟು ಅಪಾರ ವಿದ್ವತ್ ಯಾವುದೋ ಒಂದು ಘಟನೆಯಿಂದಷ್ಟೇ ರೂಪುಗೊಳ್ಳಲು ಸಾಧ್ಯವಿಲ್ಲ. ಬದಲಾಗಿ, ಅಲ್ಲಿ ಸಾಕಷ್ಟು ಸ್ವಪರಿಶ್ರಮ ಇರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕೇವಲ ಬಾಹ್ಯ ಘಟನೆಗಳನ್ನಷ್ಟೇ ವೈಭವೀಕರಿಸಿದರೆ ವಾಲ್ಮೀಕಿಯ ಸಾಧನೆಯನ್ನು ಕುಗ್ಗಿಸಿದಂತೆ ಆಗುತ್ತದೆ. ವಾಲ್ಮೀಕಿಯ ಜೀವನದ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಿದೆ.

ಬಹಳ ಮುಖ್ಯ ವಿಚಾರವೆಂದರೆ, ವಾಲ್ಮೀಕಿಯ ಹಿನ್ನೆಲೆಯ ಕುರಿತಂತೆ ಇರುವ ಕಥೆಗಳು ಬೇರೆಯವರು ಸೃಷ್ಟಿಸಿರುವುದೇ ಹೊರತು, ಸ್ವತಃ ವಾಲ್ಮೀಕಿ ಎಲ್ಲಿಯೂ ಪ್ರಸ್ತಾಪಿಸಿಲ್ಲ. ಆದರೆ, ವಾಲ್ಮೀಕಿಯ ಮಾತೃ ವಾತ್ಸಲ್ಯದ ಕುರಿತು ರಾಮಾಯಣದಲ್ಲಿಯೇ ಸಾಕಷ್ಟು ಮಾಹಿತಿ ಸಿಗುತ್ತದೆ. ರಾಮ ಸೀತೆಯನ್ನು ತ್ಯಜಿಸಿದಾಗ, ಅಯೋಧ್ಯೆಯ ಪುರುಷ ಸಾಮ್ರಾಜ್ಯವು ಅವಳ ಚಾರಿತ್ರ್ಯವನ್ನು ಸಂಶಯದಿಂದ ನೋಡುವಾಗ ಅವಳಿಗೆ ಆಶ್ರಯ ನೀಡಿದ್ದು ವಾಲ್ಮೀಕಿ. ಅವಳನ್ನು ಮತ್ತು ಅವಳ ಅವಳಿ ಮಕ್ಕಳನ್ನು ಪಾಲನೆ ಪೋಷಣೆ ಮಾಡಿದ್ದೂ ಇದೇ ಮಹರ್ಷಿ. ಇಂತಹ ಹೃದಯ ವೈಶಾಲ್ಯ ಒಬ್ಬ ಶ್ರೇಷ್ಠ ಸಾಧಕನಿಗೆ ಮಾತ್ರ ಸಾಧ್ಯ. ಆದ್ದರಿಂದ, ವಾಲ್ಮೀಕಿಯನ್ನು, ಮೊದಲ ಮಹಾಕಾವ್ಯ ಬರೆದ ಆದಿಕವಿ, ಶ್ರೇಷ್ಠ ಕವಿಯಾಗಿಯೇ ಸ್ವೀಕರಿಸೋಣ.

ಕೊನೆಯದಾಗಿ, ಇಂದು ಪುರಾಣ ಮತ್ತು ಐತಿಹ್ಯಗಳ ವಿಭಿನ್ನ ನಿರೂಪಣೆಗಳ ನಡುವೆ ನಮಗೆ ವಾಲ್ಮೀಕಿ ಹೇಗೆ ಪ್ರಸ್ತುತವಾಗುತ್ತಾನೆ? ನಾವಿಂದು ಅವನನ್ನು ಒಬ್ಬ ಬೇಡ ಸಮುದಾಯದ ಅಪ್ರತಿಮ ಪ್ರತಿಭೆ, ದೈವ ಭಾಷೆಯೆಂದು ಕರೆಯುವ ಮತ್ತು ಸಮಾಜದ ಕೆಳಸ್ತರದ ಜನರಿಗೆ ನಿಷಿದ್ಧ ವಾಗಿದ್ದ ಸಂಸ್ಕೃತವನ್ನು ಕರಗತ ಮಾಡಿಕೊಂಡು ಅದರಲ್ಲಿಯೇ ಶ್ರೇಷ್ಠ ಮತ್ತು ಪ್ರಥಮ ಮಹಾಕಾವ್ಯ ರಚಿಸಿದ ದಲಿತ ಕವಿ ಎನ್ನುವುದು ಹೆಚ್ಚು ಪ್ರೇರಣೀಯವಾಗುತ್ತದೆ.

ಲೇಖಕಿ: ಸಹ ಪ್ರಾಧ್ಯಾಪಕಿ, ತುಮಕೂರು ವಿ.ವಿ

ಐವರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ದುಡಿದ ಐವರಿಗೆ 2024ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಪರಿಶಿಷ್ಟ ಪಂಗಡಗಳ ಇಲಾಖೆ ಪ್ರಕಟಿಸಿದೆ.

ಬುಡಕಟ್ಟು ಸಂಸ್ಕೃತಿ ಕ್ಷೇತ್ರದಲ್ಲಿ ಚಿತ್ರದುರ್ಗದ ಗಡ್ಡದಾರ ಹಟ್ಟಿಯ ಕಿಲಾರಿ ಜೋಗಯ್ಯ, ಸಾಮಾಜಿಕ ಕ್ಷೇತ್ರದಲ್ಲಿ ಚಾಮರಾಜನಗರದ ಗುಂಡ್ಲುಪೇಟೆಯ ಮದ್ದೂರು ಕಾಲೊನಿಯ ರತ್ನ ಎಸ್., ಬೆಳಗಾವಿಯ ರಾಜಶೇಖರ ತಳವಾರ, ಬೆಂಗಳೂರಿನ ಮಾಗಡಿ ರಸ್ತೆಯ ಕೆ.ಎಸ್. ಮೃತ್ಯುಂಜಯ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ರಂಗಭೂಮಿ ಕ್ಷೇತ್ರದಲ್ಲಿನ ಸೇವೆಗಾಗಿ ವಿಜಯನಗರದ ಹರಪನಹಳ್ಳಿಯ ಟೀಚರ್ಸ್ ಕಾಲೊನಿಯ ರತ್ನಮ್ಮ ಬಿ.ಸೋಗಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ವಿಜೇತರಿಗೆ ತಲಾ ₹5 ಲಕ್ಷ ನಗದು ಮತ್ತು 20 ಗ್ರಾಂ ಬಂಗಾರದ ಪದಕ ನೀಡಲಾಗುವುದು. ವಾಲ್ಮೀಕಿ ಜಯಂತಿಯ ಅಂಗವಾಗಿ ಗುರುವಾರ ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ನೈಜೀರಿಯಾದಲ್ಲಿ ಟ್ಯಾಂಕರ್ ಸ್ಫೋಟ: 140 ಸಾವು

ಅಬುಜಾ (ಎಪಿ): ವಾಯವ್ಯ ನೈಜೀರಿಯಾದಲ್ಲಿ ಉರುಳಿಬಿದ್ದ ಟ್ಯಾಂಕರ್‌ನಿಂದ ಪೆಟ್ರೋಲ್ ಸಂಗ್ರಹಿಸಲು ಸ್ಥಳೀಯರು ಮುಗಿಬಿದ್ದಾಗ, ಅದು ಸ್ಫೋಟಗೊಂಡು 140 ಜನರು ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

‘ಜಿಗಾವಾ ರಾಜ್ಯದ ಮಜಿಯಾ ಪಟ್ಟಣದಲ್ಲಿ ಮಧ್ಯರಾತ್ರಿ ದುರಂತ ಸಂಭವಿಸಿದ್ದು, ಹೆದ್ದಾರಿಯಲ್ಲಿ ಪಯಣಿಸುವಾಗ ಚಾಲಕನ ನಿಯಂತ್ರಣ ತಪ್ಪಿ ಉರುಳಿಬಿದ್ದ ಟ್ಯಾಂಕರ್ ಸ್ಫೋಟಗೊಂಡಿದೆ’ ಎಂದು ಪೊಲೀಸ್ ವಕ್ತಾರ ಲಾವನ್ ಆಡಮ್ ತಿಳಿಸಿದ್ದಾರೆ. ‘ಸ್ಫೋಟದ ಸ್ಥಳದಲ್ಲೇ ಮೊದಲಿಗೆ 105 ಮಂದಿ ಸಜೀವ ದಹನವಾಗಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಸ್ವಲ್ಪ ಹೊತ್ತಿನ ಬಳಿಕ ಸಾವಿನ ಸಂಖ್ಯೆ ಹೆಚ್ಚಾಗಿದೆ ಎಂದು ಜಿಗಾವಾ ರಾಜ್ಯದ ತುರ್ತು ನಿರ್ವಹಣಾ ಸಂಸ್ಥೆ ಮುಖ್ಯಸ್ಥ ಡಾ. ಹರುನಾ ಮೈರಿಗಾ ಮಾಹಿತಿ ನೀಡಿದ್ದಾರೆ. ಮೃತಪಟ್ಟ ಬಹುತೇಕರ ಗುರುತು ಪತ್ತೆಯಾಗಿಲ್ಲ.

ಮೈಸೂರಿನಲ್ಲಿ ಬುಧವಾರ ಮುಕ್ತಾಯವಾದ ಪದವಿಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬಾಲಕರ ವಿಭಾಗದ ಚಾಂಪಿಯನ್ ಆದ ಬೆಂಗಳೂರು ದಕ್ಷಿಣ ತಂಡದ ತಿಲಕ್ ಬಿ.ಶೆಟ್ಟಿ, ಧ್ಯಾನ್ ಸಂತೋಷ್, ಆರ್ಯ ಟಿ.ಗೌಡ, ಭಾವೇಶ್ (ಹಿಂದಿನ ಸಾಲು), ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಬೆಂಗಳೂರು ಉತ್ತರ ತಂಡದ ಅನನ್ಯಾ ಶ್ರೀಮುರಳಿ, ಗೌರಿ ಭಟ್, ಬನಶ್ರೀ ಸಿ.ಪಾಟೀಲ್, ಎ.ಎಸ್.ಮೌನಿತಾ, ರುಜುಲಾ ಪ್ರಜಾವಾಣಿ ಚಿತ್ರ:ಅನೂಪ್ ರಾಘ.ಟಿ.

ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಟೂರ್ನಿ

ಬ್ಯಾಡ್ಮಿಂಟನ್: ಬೆಂಗಳೂರು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಂಡಗಳು ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಬುಧವಾರ ಮುಕ್ತಾಯಗೊಂಡ ಪದವಿಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರು ಹಾಗೂ ಬಾಲಕರ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಪಡೆದವು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ಉತ್ತರ ತಂಡದವರು 2–1ರಿಂದ ಆತಿಥೇಯ ಮೈಸೂರು ತಂಡವನ್ನು ಮಣಿಸಿ ಟ್ರೋಫಿ ಜಯಿಸಿದರು. ಬಾಲಕರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ತಂಡ 2–1 ರಿಂದ ದಕ್ಷಿಣ ಕನ್ನಡ ತಂಡವನ್ನು 2–1ರಿಂದ ಮಣಿಸಿ ಚಾಂಪಿಯನ್ ಆಯಿತು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಮೈಸೂರಿನ ದಿಯಾ 21–8, 21–8ರಿಂದ ಬೆಂಗಳೂರು ಉತ್ತರದ ಅನನ್ಯಾ ಅವರನ್ನು ಮಣಿಸಿದರೆ, ಡಬಲ್ಸ್‌ನಲ್ಲಿ ಬೆಂಗಳೂರು ಉತ್ತರದ ರುಜುಲಾ- ಮೌನಿತಾ ಜೋಡಿ 21–13, 21–13ರಿಂದ ದಿವ್ಯಾ- ಸಿಂಚನಾ ವಿರುದ್ಧ ಗೆದ್ದಿತು. ರಿವರ್ಸ್ ಸಿಂಗಲ್ಸ್‌ನಲ್ಲಿ ರುಜುಲಾ 21–6, 21–6ರಿಂದ ಮೈಸೂರಿನ ಅನನ್ಯಾ ವಿರುದ್ಧ ಜಯಗಳಿಸಿದರು.

ಬಾಲಕರ ವಿಭಾಗದ ಸಿಂಗಲ್ಸ್‌ನಲ್ಲಿ ಬೆಂಗಳೂರು ದಕ್ಷಿಣದ ಧ್ಯಾನ್ 21–5, 21–5ರಿಂದ ದಕ್ಷಿಣ ಕನ್ನಡದ ಅನ್ಮೊಲ್ ವಿರುದ್ಧ ಗೆದ್ದರೆ, ರಿವರ್ಸ್ ಸಿಂಗಲ್ಸ್‌ನಲ್ಲಿ ಕ್ರಿಸ್ 10–21, 21–11, 21–19ರಿಂದ ಭಾವೇಶ್ ಎದುರು ಜಯಿಸಿದರು. ಡಬಲ್ಸ್‌ನಲ್ಲಿ ದಕ್ಷಿಣ ಕನ್ನಡದ ಆರ್ಯ- ತಿಲಕ್ 18–21, 21–14, 21–13ರಿಂದ ಬೆಂಗಳೂರು ದಕ್ಷಿಣದ ಸುಮಿತ್- ಕ್ರಿಸ್ ಅವರನ್ನು ಮಣಿಸಿದರು.

ಬುಲ್ಸ್ ಪ್ರೋತ್ಸಾಹಿಸಿದ ನಟ ಸುದೀಪ್

ಬೆಂಗಳೂರು: ಕನ್ನಡದ ಚಿತ್ರನಟ ಸುದೀಪ್ ಅವರು ಪ್ರೊ ಕಬಡ್ಡಿ ಲೀಗ್‌ನ ಸೀಸನ್ 11 ಜಾಹೀರಾತು ಅಭಿಯಾನದಲ್ಲಿ ಪಾಲ್ಗೊಂಡಿದ್ದು, ಬೆಂಗಳೂರು ಬುಲ್ಸ್ ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿದ್ದಾರೆ. ಪ್ರೊ ಕಬಡ್ಡಿ ಲೀಗ್ ಇದೇ 18ರಂದು ಸಂಜೆ 7.30ಕ್ಕೆ ಹೈದರಾಬಾದ್‌ನಲ್ಲಿ ಆರಂಭವಾಗಲಿದೆ.

ಪಿಕೆಎಲ್‌ನ ಅಧಿಕೃತ ಪ್ರಸಾರ ಸಂಸ್ಥೆಯಾದ ಸ್ಟಾರ್ ಸ್ಪೋರ್ಟ್ಸ್ ಈ ಅಭಿಯಾನ ಅರಂಭಿಸಿದೆ. ಬೆಂಗಳೂರು ಬುಲ್ಸ್‌ನ ಶಕ್ತಿ ಮತ್ತು ಸಾಮರ್ಥ್ಯವನ್ನು ಸುದೀಪ್ ಈ ಜಾಹೀರಾತಿನ ಮೂಲಕ ಬಿಂಬಿಸಿದ್ದಾರೆ.

‘ಪ್ರೊ ಕಬಡ್ಡಿ ಲೀಗ್ ಮತ್ತು ನನ್ನ ಸಂಬಂಧ ಹಲವು ವರ್ಷಗಳದ್ದು’ ಎಂದು ಸುದೀಪ್ ಜಾಹೀರಾತು ಕುರಿತು ಹೇಳಿದ್ದಾರೆ. ಉದ್ಘಾಟನಾ ಪಂದ್ಯದಲ್ಲಿ ಬುಲ್ಸ್ ತಂಡವು, ತೆಲುಗು ಟೈಟನ್ಸ್ ತಂಡವನ್ನು ಎದುರಿಸಲಿದೆ.

ಡ್ರಾ ಪಂದ್ಯದಲ್ಲಿ ಕರ್ನಾಟಕ

ಹುಬ್ಬಳ್ಳಿ: ಕರ್ನಾಟಕ ಮತ್ತು ತಮಿಳುನಾಡು ತಂಡಗಳ ನಡುವೆ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯ ನೀರಸ ಡ್ರಾನಲ್ಲಿ ಅಂತ್ಯಗೊಂಡಿತು.

ಮಂಗಳವಾರ ರಾತ್ರಿ ಮತ್ತು ಬುಧವಾರ ಬೆಳಿಗ್ಗೆ ಧಾರಾಕಾರ ಮಳೆ ಸುರಿದಿದ್ದರಿಂದ ಪಂದ್ಯದ ಅಂತಿಮ ದಿನದಾಟ ನಡೆಯಲಿಲ್ಲ. ಹೀಗಾಗಿ ಆತಿಥೇಯ ತಂಡವನ್ನು ಆಲೌಟ್ ಮಾಡಿ ಇನಿಂಗ್ಸ್ ಮುನ್ನಡೆ ಗಳಿಸುವ ತಮಿಳುನಾಡು ತಂಡದ ಆಸೆ ಕೈಗೂಡಲಿಲ್ಲ.

ಎರಡು ಬಾರಿ ಮೈದಾನವನ್ನು ಪರಿಶೀಲಿಸಿದ ಅಂಪೈರ್‌ಗಳು ಮತ್ತು ರೆಫರಿ, ತೇವ ಆರದ ಕಾರಣ ಮಧ್ಯಾಹ್ನದ ವೇಳೆಗೆ ಪಂದ್ಯ ಡ್ರಾ ಎಂದು ಘೋಷಿಸಿದರು. ಬೋನಸ್ ಪಾಯಿಂಟ್ ಸೇರಿದಂತೆ ಎರಡೂ ತಂಡಗಳು ತಲಾ ಐದು ಪಾಯಿಂಟ್ ಪಡೆದವು.

ಕರ್ನಾಟಕ ತಂಡವು ಅಕ್ಟೋಬರ್ 20ರಿಂದ 23ರವರೆಗೆ ಅಗರ್ತಲಾದಲ್ಲಿ ನಡೆಯಲಿರುವ ಪಂದ್ಯದಲ್ಲಿ ತ್ರಿಪುರಾ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ತಮಿಳುನಾಡು 97.2 ಓವರ್‌ಗಳಲ್ಲಿ 312 (ವಿಮಲ್‌ಕುಮಾರ್ 82, ರಿತಿಕ್ ಈಶ್ವರನ್ 87, ಕೆ.ಟಿ.ಎ.ಮಾಧವ ಪ್ರಸಾದ್ 27, ಸನ್ನಿ 24; ಕೆ.ಶಶಿಕುಮಾರ್ 83ಕ್ಕೆ 5, ಪಾರಸ್ ಗುರುಬಕ್ಷ್ ಆರ್ಯ 72ಕ್ಕೆ 4). ಮೊದಲ ಇನಿಂಗ್ಸ್: ಕರ್ನಾಟಕ: 13 ಓವರ್‌ಗಳಲ್ಲಿ 3ಕ್ಕೆ 42 (ಮ್ಯಾಕ್ನಿಲ್ ನೊರೊನ್ಹಾ 8, ಪ್ರಖರ್ ಚತುರ್ವೇದಿ 4, ವಿಶಾಲ್ ಓನತ್ 15; ಸನ್ನಿ 16ಕ್ಕೆ 1, ಗೋವಿಂದ್ 13ಕ್ಕೆ 1, ಪಿ.ವಿಘ್ನೇಶ್ 3ಕ್ಕೆ 1).

ಹೋರಾಟ ತೋರಿದ ಪಾಕ್

ಮುಲ್ತಾನ್ (ಎಎಫ್‌ಪಿ): ಪಾಕಿಸ್ತಾನದ ಸ್ಪಿನ್ನರ್ ಸಾಜಿದ್ ಖಾನ್ ಅವರು ಶತಕ ವೀರ ಬೆನ್ ಡಕೆಟ್ ಅವರನ್ನೂ ಒಳಗೊಂಡು ಹತ್ತು ಎಸೆತಗಳ ಅಂತರದಲ್ಲಿ ಮೂರು ವಿಕೆಟ್‌ಗಳನ್ನು ಪಡೆದು, ಪಾಕಿಸ್ತಾನ ತಂಡಕ್ಕೆ ಎರಡನೇ ಟೆಸ್ಟ್ ಪಂದ್ಯದ ಎರಡನೇ ದಿನವಾದ ಬುಧವಾರ ಮೇಲುಗೈ ಒದಗಿಸಿದರು.

ಪಾಕಿಸ್ತಾನ ತಂಡದ 366 ರನ್‌ಗಳಿಗೆ ಉತ್ತರವಾಗಿ ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 239 ರನ್ ಗಳಿಸಿದೆ. ಮುನ್ನಡೆಗೆ ಇನ್ನೂ 127 ರನ್ ದೂರವಿದೆ.

ಒಂದು ಹಂತದಲ್ಲಿ 2 ವಿಕೆಟ್‌ಗೆ 211 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ಪ್ರವಾಸಿ ತಂಡಕ್ಕೆ ಸಾಜಿದ್ ಚಹ ವಿರಾಮದ ಬಳಿಕ ಆಘಾತ ನೀಡಿದರು. ಮೊದಲು ಜೋ ರೂಟ್ (34), ನಂತರ ಬೆನ್ ಡಕೆಟ್ (114) ಮತ್ತು ಕೊನೆಯಲ್ಲಿ ಹ್ಯಾರಿ ಬ್ರೂಕ್ (9) ಅವರ ವಿಕೆಟ್ ಪಡೆದರು. ಇನ್ನೊಂದೆಡೆ ಸ್ಪಿನ್ನರ್ ನೊಮನ್ ಅಲಿ ಅವರು ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ (1) ಅವರ ವಿಕೆಟ್ ಗಳಿಸಿದ್ದರಿಂದ, ಪಾಕ್ ತಂಡ ಮೊದಲ ಬಾರಿ ಹಿಡಿತ ಪಡೆಯಿತು.

ಇದಕ್ಕೆ ಮೊದಲು, 5 ವಿಕೆಟ್ ನಷ್ಟಕ್ಕೆ 290 ರನ್‌ಗಳೊಡನೆ ಆಟ ಮುಂದುವರಿಸಿದ ಪಾಕಿಸ್ತಾನ ತಂಡ ಆ ಮೊತ್ತಕ್ಕೆ 76 ರನ್ ಸೇರಿಸಿತು.

ಬೆನ್ ಡಕೆಟ್ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 123.3 ಓವರುಗಳಲ್ಲಿ 366 (ಮೊಹಮ್ಮದ್ ರಿಜ್ವಾನ್ 41, ಅಮೆರ್ ಜಮಾಲ್ 37, ನೊಮಾನ್ ಅಲಿ 32; ಬ್ರೈಡನ್ ಕಾರ್ಸ್ 50ಕ್ಕೆ3, ಜಾಕ್ ಲೀಚ್ 114ಕ್ಕೆ4); ಇಂಗ್ಲೆಂಡ್: 53 ಓವರುಗಳಲ್ಲಿ 6 ವಿಕೆಟ್‌ಗೆ 239 (ಜಾಕ್ ಕ್ರಾಲಿ 37, ಬೆನ್ ಡಕೆಟ್ 114, ಓಲಿ ಪೋಪ್ 29, ಜೋ ರೂಟ್ 34; ಸಾಜಿದ್ ಖಾನ್ 86ಕ್ಕೆ4, ನೊಮಾನ್ ಅಲಿ 75ಕ್ಕೆ2).

ಭಾರತ– ನ್ಯೂಜಿಲೆಂಡ್ ಟೆಸ್ಟ್: ಪ್ರತಿಕೂಲ ಹವಾಮಾನದಿಂದ ರದ್ದಾದ ಮೊದಲ ದಿನದಾಟ

ಮಳೆಯ ಆಟ; ಅಭಿಮಾನಿಗಳ ನೋಟ!

● ಗಿರೀಶ ದೊಡ್ಡಮನಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಪಿಚ್ ಪರಿಶೀಲಿಸಿ ಸಿಬ್ಬಂದಿಯೊಂದಿಗೆ ಮಾತನಾಡಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ(ಎಡ ಚಿತ್ರ: ಎಎಫ್‌ಪಿ) ಯಶಸ್ವಿ ಜೈಸ್ವಾಲ್ ಮತ್ತು ವಿರಾಟ್ ಕೊಹ್ಲಿ ಅಭ್ಯಾಸ ನಡೆಸಲು ಒಳಾಂಗಣ ಕ್ರೀಡಾಂಗಣದತ್ತ ತೆರಳಿದರು ಪ್ರಜಾವಾಣಿ ಚಿತ್ರ:ಎಸ್‌.ಕೆ. ದಿನೇಶ್

ಬೆಂಗಳೂರು: ಕಳೆದ ಎರಡು ದಿನಗಳಿಂದ ನಗರದಲ್ಲಿ ಮಳೆಯ ಆರ್ಭಟ ಜೋರಾಗಿದೆ. ಇನ್ನೂ ಎರಡ್ಮೂರು ದಿನ ವಾತಾವರಣ ಹೀಗೆ ಇರಲಿದೆ ಎಂಬ ವರದಿಗಳೂ ಇವೆ. ಆದರೆ ಇದರಿಂದ ಉದ್ಯಾನನಗರಿಯ ಕ್ರಿಕೆಟ್ ಪ್ರಿಯರ ಉತ್ಸಾಹ ಮಾತ್ರ ಕುಂದಿಲ್ಲ.

ಬುಧವಾರ ಇಲ್ಲಿ ಆರಂಭ ಗೊಂಡಿರುವ ಭಾರತ– ನ್ಯೂಜಿಲೆಂಡ್ ನಡುವಣ ಮೊದಲ ಟೆಸ್ಟ್ ಪಂದ್ಯ ಇದಕ್ಕೆ ಸಾಕ್ಷಿ. ಮೊದಲ ದಿನದಾಟದಲ್ಲಿ ಟಾಸ್ ಹಾಕಲು ಕೂಡ ಮಳೆ ಆಸ್ಪದ ಕೊಡಲಿಲ್ಲ. ಮಧ್ಯಾಹ್ನ 2.36ಕ್ಕೆ ದಿನದಾಟವನ್ನೂ ರದ್ದುಗೊಳಿಸಲಾಯಿತು. ಆದರೆ 500ಕ್ಕೂ ಹೆಚ್ಚು ಜನರು ಗ್ಯಾಲರಿ ಬಿಟ್ಟು ಕದಲಲಿಲ್ಲ. ಬೆಳಿಗ್ಗೆ 8.30ರಿಂದಲೇ ಕ್ರೀಡಾಂಗಣದತ್ತ ಮುಖ ಮಾಡಿದ್ದರು.

ಸತತವಾಗಿ ಸುರಿಯುತ್ತಿದ್ದ ಮಳೆಗೂ ಜಗ್ಗದ ಜನರು 'ನಮ್ಮನ್ನು ಒಳಗೆ ಬಿಡಿ, ಕುಳಿತುಕೊಳ್ಳುತ್ತೇವೆ' ಎಂದು ಭದ್ರತಾ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸುತ್ತಿದ್ದರು.

ಕ್ರೀಡಾಂಗಣದ ಮುಖ್ಯದ್ವಾರದ ಬಳಿ ಪ್ರೇಕ್ಷಕರೊಬ್ಬರು, 'ದುಡ್ಡು ಕೊಟ್ಟು ಟಿಕೆಟ್ ಖರೀದಿಸಿದ್ದೇವೆ. ನಾವು ಮಳೆಯಲ್ಲಿ ನಿಂತಿರಬೇಕಾ. ಒಳಗೆ ಬಿಡಿ. ಆಟ ಶುರುವಾಗುವವರೆಗೂ ಕುಳಿತಿರುತ್ತೇವೆ. ನಮ್ಮನ್ನು ಒಳಗೆ ಬಿಟ್ಟರೆ ನಿಮಗೇನು ಕಷ್ಟ' ಎಂದು ಭದ್ರತಾ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದರು.

'10.30ಕ್ಕೆ ಒಳಗೆ ಬಿಡುತ್ತೇವೆ. ಇನ್ನೂ ಪಂದ್ಯ ಆರಂಭವಾಗಿಲ್ಲ' ಎಂದು ಪೊಲೀಸರು ಉತ್ತರಿಸುತ್ತಿದ್ದರು.

'ಬೆಂಗಳೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ಯಾವುದೇ ಕ್ರಿಕೆಟ್ ಪಂದ್ಯ ನಡೆದರೂ ಜನರು ಸೇರುತ್ತಿದ್ದಾರೆ. ನಾವು ಐಪಿಎಲ್ ಅಷ್ಟೇ ಅಲ್ಲ. ಯಾವುದೇ ಪಂದ್ಯಕ್ಕಾದರೂ ಬರುತ್ತೇವೆ. ಎರಡು ವರ್ಷದ ನಂತರ ಇಲ್ಲಿ ಟೆಸ್ಟ್ ನಡೆಯುತ್ತಿದೆ. ಅದಕ್ಕಾಗಿ ಟಿಕೆಟ್ ಖರೀದಿಸಿದ್ದೇವೆ. ಮಳೆ ನಿಂತರೆ ಪಂದ್ಯ ನಡೆದೇ ನಡೆಯುತ್ತದೆ ಎನ್ನುವ ವಿಶ್ವಾಸವಿದೆ' ಎಂದು ಸರದಿ ಸಾಲಿನಲ್ಲಿದ್ದ ಸುರೇಶ್ ಕುಮಾರ್ ಮತ್ತು ಸಂಗಡಿಗರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್ ಮತ್ತು ನೆರವು ಸಿಬ್ಬಂದಿಯ ಕೆಲವರು 9.25ರ ಸುಮಾರಿಗೆ ಕಾರಿನಲ್ಲಿ ಕ್ರೀಡಾಂಗಣಕ್ಕೆ ಬಂದರು. ಒಳಾಂಗಣ ಕ್ರೀಡಾಂಗಣಕ್ಕೆ ತೆರಳಿ ತಾಲೀಮು ನಡೆಸಿದರು.

ಮುಖ್ಯಾಂಶಗಳು

- ಸತತ ಮಳೆಯಿಂದಾಗಿ ನಡೆಯದ ಟಾಸ್
- ಒಳಾಂಗಣದಲ್ಲಿ ಅಭ್ಯಾಸ ನಡೆಸಿದ ವಿರಾಟ್, ಜೈಸ್ವಾಲ್
- ಕ್ರೀಡಾಂಗಣದಲ್ಲಿ ಸೇರಿದ್ದ 500ಕ್ಕೂ ಹೆಚ್ಚು ಪ್ರೇಕ್ಷಕರು

ಮಧ್ಯಾಹ್ನ 3ರ ನಂತರ ಸ್ವಲ್ಪ ಹೊತ್ತು ಮಳೆ ನಿಂತಿತ್ತು. ಆಗ ಕ್ರೀಡಾಂಗಣ ಸಿಬ್ಬಂದಿ ಹೊದಿಕೆಯನ್ನು ತೆರವುಗೊಳಿಸಿದರು. ಈ ಸಂದರ್ಭದಲ್ಲಿ ಅಂಪೈರ್‌ಗಳಾದ ಪಾಲ್ ರೈಫೆಲ್, ಮೈಕೆಲ್ ಗಾಫ್ ಮತ್ತು ರಿಚರ್ಡ್ ಇಲಿಂಗ್‌ವರ್ಥ್ ಪಿಚ್ ಪರಿಶೀಲನೆ ನಡೆಸಿದರು.

ಎಬಿಡಿ 100ನೇ ಪಂದ್ಯದ ನೆನಪು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2015ರಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ನಡೆದಿದ್ದ ಟೆಸ್ಟ್ ಪಂದ್ಯದ ಸಂದರ್ಭದಲ್ಲಿಯೂ ಇದೇ ರೀತಿ ಮಳೆಯಾಟ ನಡೆದಿತ್ತು. ಆ ಪಂದ್ಯವು ದಕ್ಷಿಣ ಆಫ್ರಿಕಾದ ದಿಗ್ಗಜ ಎಬಿ ಡಿವಿಲಿಯರ್ಸ್ ಅವರಿಗೆ 100ನೇ ಟೆಸ್ಟ್ ಆಗಿತ್ತು. ಅವರ ಇಡೀ ಕುಟುಂಬವು ಆ ದಿನ ಹಾಜರಿತ್ತು.

ಆ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ದಕ್ಷಿಣ ಆಫ್ರಿಕಾ ತಂಡವು 214 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಭಾರತ ತಂಡವು ವಿಕೆಟ್ ನಷ್ಟವಿಲ್ಲದೇ 80 ರನ್ ಗಳಿಸಿದ್ದ ಸಂದರ್ಭದಲ್ಲಿ ಮಳೆ ಆರಂಭವಾಗಿತ್ತು. ನಂತರದ ನಾಲ್ಕು ದಿನಗಳ ಕಾಲ ಸತತ ಮಳೆ ಬಂದ ಕಾರಣ ಆಟ ನಡೆದಿರಲಿಲ್ಲ.

ಇದೇ ಸಂದರ್ಭದಲ್ಲಿ ಬಿ ಗ್ರೌಂಡ್‌ನಲ್ಲಿದ್ದ ರೋಹಿತ್ ಶರ್ಮಾ ಮತ್ತು ನೆರವು ಸಿಬ್ಬಂದಿಯೂ ಬಂದು ಪಿಚ್ ಪರಿಶೀಲಿಸಿ ಮರಳಿದರು. ಆಗಲೂ ಗ್ಯಾಲರಿಯಲ್ಲಿದ್ದ ಜನರು ಹರ್ಷೋದ್ಗಾರಗಳೊಂದಿಗೆ ರೋಹಿತ್ ಅವರ ಗಮನ ಸೆಳೆದರು.

ಗುರುವಾರವೂ ಇಡೀ ದಿನ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹಾಲ್ ಆಫ್ ಫೇಮ್‌ಗೆ ನೀತು

ಎಬಿ ಡಿ ವಿಲಿಯರ್ಸ್, ಆಲೆಸ್ಟರ್ ಕುಕ್‌ಗೂ ಗೌರವ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ಸ್ಪಿನ್ನರ್ ನೀತು ಡೇವಿಡ್ ಅವರನ್ನು ಐಸಿಸಿ ಹಾಲ್ ಆಫ್ ಫೇಮ್ ಗೌರವಕ್ಕೆ ಬುಧವಾರ ಆಯ್ಕೆ ಮಾಡಲಾಗಿದೆ. ಟೆಸ್ಟ್ ಇನಿಂಗ್ಸ್ ಒಂದರಲ್ಲಿ ಶ್ರೇಷ್ಠ ಬೌಲಿಂಗ್ ಪ್ರದರ್ಶನ (53ಕ್ಕೆ8) ನೀಡಿದ ದಾಖಲೆ ಹೊಂದಿರುವ ನೀತು ಅವರು ಈ ಗೌರವಕ್ಕೆ ಪಾತ್ರರಾದ ದೇಶದ ಎರಡನೇ ಆಟಗಾರ್ತಿ ಎನಿಸಿದ್ದಾರೆ.

ದಕ್ಷಿಣ ಆಫ್ರಿಕಾದ ದಿಗ್ಗಜ ಆಟಗಾರ ಎಬಿ ಡಿ ವಿಲಿಯರ್ಸ್ ಮತ್ತು ಇಂಗ್ಲೆಂಡ್ ತಂಡದ ಮಾಜಿ ನಾಯಕ ಆಲೆಸ್ಟರ್ ಕುಕ್ ಅವರೊಂದಿಗೆ ನೀತು ಈ ಗೌರವಕ್ಕೆ ಭಾಜನರಾಗಿದ್ದಾರೆ.

ಭಾರತ ತಂಡದ ಮಾಜಿ ನಾಯಕಿ ಡಯಾನಾ ಎಡುಲ್ಜಿ ಐಸಿಸಿ ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾದ ಒಂದು ವರ್ಷದ ನಂತರ 47 ವರ್ಷ ವಯಸ್ಸಿನ ನೀತು ಸಹ ಈ ಗೌರವಕ್ಕೆ ಆಯ್ಕೆಯಾಗಿದ್ದಾರೆ. ಅವರು ಭಾರತ ಮಹಿಳಾ ತಂಡದ ಆಯ್ಕೆ ಸಮಿತಿ ಹಾಲಿ ಅಧ್ಯಕ್ಷೆ ಸಹ.

ಭಾರತ ತಂಡದ ಪರ ಎಡಗೈ ಸ್ಪಿನ್ನರ್ ಆಗಿ ನೀತು 10 ಟೆಸ್ಟ್ ಪಂದ್ಯ (41 ವಿಕೆಟ್) ಹಾಗೂ 97 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಏಕದಿನ ಪಂದ್ಯಗಳಲ್ಲಿ ಅತಿ ಹೆಚ್ಚು ವಿಕೆಟ್ ಪಡೆದಿರುವ ಭಾರತದ ಬೌಲರ್‌ಗಳಲ್ಲಿ ಅವರು 141 ವಿಕೆಟ್‌ಗಳೊಂದಿಗೆ (16.34ರ ಸರಾಸರಿ) ಎರಡನೇ ಸ್ಥಾನದಲ್ಲಿದ್ದಾರೆ.

'ಐಸಿಸಿ ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ನೈಜ ಗೌರವ. ರಾಷ್ಟ್ರೀಯ ತಂಡದ ಜೆರ್ಸಿ ಧರಿಸಿದ ಯಾವುದೇ ಆಟಗಾರ್ತಿಗೆ ಸಿಗುವ ಅತಿ ದೊಡ್ಡ ಮಾನ್ಯತೆ' ಎಂದು ನೀತು ಅವರು ಐಸಿಸಿ ಪ್ರಕಟಣೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಉತ್ತರ ಪ್ರದೇಶದ ನೀತು, 17ನೇ ವಯಸ್ಸಿಗೇ ಭಾರತ ತಂಡಕ್ಕೆ ಆಯ್ಕೆಯಾಗಿ 1995ರಲ್ಲಿ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. ಇಂಗ್ಲೆಂಡ್ ವಿರುದ್ಧ 1995ರ ಕೊನೆಯಲ್ಲಿ ಜಮ್ಷೆಡ್‌ಪುರದಲ್ಲಿ ನಡೆದ ಟೆಸ್ಟ್‌ನಲ್ಲಿ 53 ರನ್ನಿಗೆ 3 ವಿಕೆಟ್ ಪಡೆದಿದ್ದು ಈಗಲೂ ಮಹಿಳಾ ಕ್ರಿಕೆಟ್‌ನಲ್ಲಿ ಇನಿಂಗ್ಸ್ ಒಂದರಲ್ಲಿ ದಾಖಲಾದ ಶ್ರೇಷ್ಠ ಪ್ರದರ್ಶನವಾಗುಳಿದಿದೆ. 2006ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

ಆಲೆಸ್ಟರ್ ಕುಕ್

ಡಿ ವಿಲಿಯರ್ಸ್

ನೀತು ಡೇವಿಡ್

ಕುಕ್ ಸಾಧನೆ: ಆಲೆಸ್ಟರ್ ಕುಕ್ 250 ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡವನ್ನು ಪ್ರತಿನಿಧಿಸಿದ್ದಾರೆ. 2018ರಲ್ಲಿ ನಿವೃತ್ತರಾದಾಗ ಇಂಗ್ಲೆಂಡ್ ಪರ ಟೆಸ್ಟ್‌ಗಳಲ್ಲಿ ಅತಿ ಹೆಚ್ಚು ರನ್ ಮತ್ತು ಅತಿ ಹೆಚ್ಚು ಶತಕ ಗಳಿಸಿದ ಹಿರಿಮೆ ಹೊಂದಿದ್ದರು. ದೇಶದಲ್ಲಿ ಮತ್ತು ಹೊರಗೆ ಬ್ಯಾಟರ್ ಮತ್ತು ನಾಯಕನಾಗಿ ಯಶಸ್ಸು ಪಡೆದಿದ್ದರು.

ಡಿ ವಿಲಿಯರ್ಸ್: 14 ವರ್ಷಗಳ ಕ್ರಿಕೆಟ್ ಬದುಕಿನಲ್ಲಿ ಡಿ ವಿಲಿಯರ್ಸ್ ಅವರು ಮೂರು ಮಾದರಿಗಳಲ್ಲಿ 20,000ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. 'ಮಿ. 360' ಎಂಬ ಖ್ಯಾತಿ ಹೊಂದಿರುವ ಅವರು ಹಲವು ಮೈಲಿಗಲ್ಲುಗಳನ್ನು ಸಾಧಿಸಿದವರು. ಏಕದಿನ ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಪರ ಅತಿ ವೇಗದ ಅರ್ಧ ಶತಕ, ಶತಕ ಬಾರಿಸಿದವರು.

ಆಪ್ತಮಿತ್ರನ ಸಾಧನೆಗೆ ವಿರಾಟ್ ಅಭಿನಂದನೆ

ದುಬೈ (ಪಿಟಿಐ): 'ಎಬಿ ಡಿ ವಿಲಿಯರ್ಸ್ ಅಪಾರ ಪ್ರತಿಭಾನ್ವಿತ ಆಟಗಾರ. ಹಾಲ್ ಆಫ್ ಫೇಮ್ ಗೌರವಕ್ಕೆ ಅತ್ಯಂತ ಸೂಕ್ತ ವ್ಯಕ್ತಿ'–

ದಕ್ಷಿಣ ಆಫ್ರಿಕಾದ ದಿಗ್ಗಜ ಕ್ರಿಕೆಟಿಗ ಎಬಿ ಡಿ ವಿಲಿಯರ್ಸ್ ಅವರ ಬಗ್ಗೆ ವಿರಾಟ್ ಕೊಹ್ಲಿ ವ್ಯಕ್ತಪಡಿಸಿರುವ ಮೆಚ್ಚುಗೆ ನುಡಿಗಳಿವು.

ಕ್ರಿಕೆಟಿಗರ ಸ್ನೇಹದ ವಿಷಯ ಬಂದಾಗ ವಿರಾಟ್ ಕೊಹ್ಲಿ ಮತ್ತು ಎಬಿ ಡಿವಿಲಿಯರ್ಸ್ ಜೋಡಿಯು ಮುಂಚೂಣಿಯಲ್ಲಿರುತ್ತದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಬ್ಬರಿಗೊಬ್ಬರು ಎದುರಾಳಿಗಳಾಗಿ ಆಡಿದವರು. ಆದರೆ ಐಪಿಎಲ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಜೊತೆಗೂಡಿ ಆಡಿದ್ದರು. ಎಬಿಡಿಗೆ ಐಸಿಸಿ ಹಾಲ್ ಆಫ್ ಫೇಮ್ ಗೌರವ ಒಲಿದ ಸಂದರ್ಭದಲ್ಲಿ ವಿರಾಟ್ ಬಹಿರಂಗ ಪತ್ರವೊಂದನ್ನು ಬರೆದು ಅಭಿನಂದಿಸಿದ್ದಾರೆ.

'ಈ ಗೌರವಕ್ಕೆ ತಾವು ಅತ್ಯಂತ ಅರ್ಹ ವ್ಯಕ್ತಿಯಾಗಿದ್ದೀರಿ. ಕ್ರಿಕೆಟ್ ಆಟದ ಬೆಳವಣಿಗೆಯಲ್ಲಿ ತಾವು ಬೀರಿದ ಪ್ರಭಾವದ ಪ್ರತೀಕ ಈ ಗೌರವವಾಗಿದೆ. ತಾವು ಕೊಟ್ಟ ಕಾಣಿಕೆಯು ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಆಸ್ಟ್ರೇಲಿಯಾಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಮಹಿಳಾ ಟಿ20 ವಿಶ್ವಕಪ್ ಮೊದಲ ಸೆಮಿಫೈನಲ್ ಇಂದು

ದುಬೈ (ಪಿಟಿಐ): ಆಸ್ಟ್ರೇಲಿಯಾ ತಂಡ, ಗುರುವಾರ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಮಹಿಳೆಯರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಹಾಲಿ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿರುವ ಆಸ್ಟ್ರೇಲಿಯಾ ವನಿತೆಯರು ಅಭೂತಪೂರ್ವ ಎಂಟನೇ ಬಾರಿ ಫೈನಲ್ ತಲುಪುವ ಯತ್ನದಲ್ಲಿದ್ದಾರೆ.

2009 ರಲ್ಲಿ ಆರಂಭವಾಗಿ ಇದುವರೆಗೆ ನಡೆದಿರುವ ಒಂಬತ್ತು ವಿಶ್ವಕಪ್‌ಗಳಲ್ಲೂ ಆಸ್ಟ್ರೇಲಿಯಾ ಅಂತಿಮ ನಾಲ್ಕರ ಘಟ್ಟ ತಲುಪಿದೆ. ಇದರಲ್ಲಿ ಆರು ಬಾರಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. 2023ರ ವಿಶ್ವಕಪ್‌ನಲ್ಲಿ ಇವೆರಡು ತಂಡಗಳು ಫೈನಲ್ ತಲುಪಿದ್ದು, ಆಸ್ಟ್ರೇಲಿಯಾ 19 ರನ್‌ಗಳಿಂದ ಜಯಗಳಿಸಿತ್ತು.

ಇದುವರೆಗಿನ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಆಸ್ಟ್ರೇಲಿಯಾಕ್ಕೆ, ಹರಿಣಗಳ ಪಡೆ ಸಾಟಿಯೇ ಆಗಿಲ್ಲ.

ಒಟ್ಟಾರೆ ಇವೆರಡು ತಂಡಗಳ ನಡುವೆ ಮಹಿಳೆಯರ ಟಿ20 ಪಂದ್ಯಗಳ 10 ಮುಖಾಮುಖಿಯಲ್ಲಿ ಆಸ್ಟ್ರೇಲಿಯಾ ಒಂಬತ್ತರಲ್ಲಿ ಜಯಗಳಿಸಿದೆ. ದಕ್ಷಿಣ ಆಫ್ರಿಕಾದ ಏಕೈಕ ವಿಜಯ ಈ ವರ್ಷದ ಜನವರಿಯಲ್ಲಿ ದಾಖಲಾಗಿತ್ತು.

ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ ಹೀಲಿ ಪಿಟಿಐ ಚಿತ್ರ

ಇನ್ನು ಟಿ20 ವಿಶ್ವಕಪ್‌ನಲ್ಲಂತೂ ಏಳು ಬಾರಿ ಎದುರಾದಾಗಲೂ ಆಸ್ಟ್ರೇಲಿಯಾ ತಂಡವೇ ವಿಜಯಿಯಾಗಿದೆ. ಆಸ್ಟ್ರೇಲಿಯಾ ತಂಡ ಅನುಭವಿಗಳಿಂದ ಕೂಡಿದ್ದು, ಈ ಹಿಂದಿನ ತಂಡದಿಂದ ಮೆಗ್ ಲ್ಯಾನಿಂಗ್ ಮಾತ್ರ ನಿವೃತ್ತಿ ಪಡೆದಿದ್ದಾರೆ. ಉಳಿದ 10 ಮಂದಿ ಹಾಲಿ ತಂಡದಲ್ಲಿದ್ದಾರೆ. ಅಲಿಸಾ ಹೀಲಿ, ಬೆತ್ ಮೂನಿ, ಎಲಿಸ್ ಪೆರ್ರಿ, ಮೇಗನ್ ಶೂಟ್, ಆ್ಯಶ್ಲೆ ಗಾರ್ಡನರ್ ತಂಡದ ಆಧಾರಸ್ತಂಭಗಳಾಗಿದ್ದಾರೆ.

ಬ್ಯಾಟಿಂಗ್ ಆಳ ಆಸ್ಟ್ರೇಲಿಯಾ ತಂಡದ ಸಾಮರ್ಥ್ಯ. ಇದು ನಿಧಾನಗತಿಯ ದುಬೈ ಟ್ರ್ಯಾಕ್‌ನಲ್ಲಿ ಆ ತಂಡಕ್ಕೆ ನೆರವಾಗಬಲ್ಲ ಅಂಶ. ಫೋಬಿ ಲಿಚ್‌ಫೀಲ್ಡ್ ಮತ್ತು ಅನ್ನಾಬೆಲ್ ಸುದರ್‌ಲ್ಯಾಂಡ್ ಯಾವುದೇ ದಾಳಿಯನ್ನು ಹೊಡೆದಟ್ಟಬಲ್ಲ ಸಮರ್ಥರು.

ದಕ್ಷಿಣ ಆಫ್ರಿಕ ತಂಡದ ಪ್ರಮುಖ ಅಸ್ತ್ರವೆಂದರೆ ಎಡಗೈ ಸ್ಪಿನ್ನರ್ ನೊನ್‌ಕುಲುಲೆಕೊ ಮ್ಲಾಬಾ. ಅವರು ಗುಂಪು ಹಂತದ ನಾಲ್ಕು ಪಂದ್ಯಗಳಲ್ಲಿ 10 ವಿಕೆಟ್ ಬಾಚಿಕೊಂಡಿದ್ದಾರೆ.

ನಾಯಕಿ ಲಾರಾ ವೊಲ್ವಾರ್ಟ್, ಅವರ ಆರಂಭಿಕ ಜೊತೆಗಾತಿ ತಾಝ್ಮಿನ್ ಬ್ರಿಟ್ಸ್ ಮತ್ತು ಅನುಭವಿ ಮರಿಝಾನ್ ಕಾಪ್ ಮಿಂಚಿದರೆ ಉತ್ತಮ ಹೋರಾಟ ಕಂಡುಬರಬಹುದು.

ಮುಂಬೈ ತಂಡಕ್ಕೆ ಬೌಲಿಂಗ್ ಕೋಚ್ ಆಗಿ ಮರಳಿದ ಮಾಂಬ್ರೆ

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ಅವರು ಮುಂಬೈ ಇಂಡಿಯನ್ಸ್ ತಂಡಕ್ಕೆ ಬೌಲಿಂಗ್ ಕೋಚ್ ಆಗಿ ಮರಳಿದ್ದಾರೆ.

ಪಾರಸ್ ಮಾಂಬ್ರೆ

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದಲ್ಲಿ 52 ವರ್ಷ ವಯಸ್ಸಿನ ಮಾಂಬ್ರೆ ಬೌಲಿಂಗ್ ಕೋಚ್ ಲಸಿತ್ ಮಾಲಿಂಗ ಮತ್ತು ಹೆಡ್ ಕೋಚ್ ಮಹೇಲ ಜಯವರ್ಧನ ಅವರೊಂದಿಗೆ ಈ ಹೊಣೆ ವಹಿಸುವರು. ಜಯವರ್ಧನೆ ಕೂಡ ಎರಡು ವರ್ಷಗಳ ನಂತರ ಮತ್ತೆ ಹೆಡ್ ಕೋಚ್ ಆಗಿ ಮರಳಿದ್ದಾರೆ. ಮಾಂಬ್ರೆ ಈ ಹಿಂದೆ 2013ರಲ್ಲಿ ಮುಂಬೈ ಇಂಡಿಯನ್ಸ್ ಚಾಂಪಿಯನ್ ಆದಾಗ ಬೌಲಿಂಗ್ ಕೋಚ್ ಆಗಿದ್ದರು.

ಪಾರಸ್ ಈ ಮೊದಲು ಭಾರತ ತಂಡದ ಬೌಲಿಂಗ್ ಕೋಚ್ ಆಗಿದ್ದು ಜೂನ್‌ನ ಟಿ20 ವಿಶ್ವಕಪ್‌ವರೆಗೆ ಕಾರ್ಯನಿರ್ವಹಿಸಿದ್ದರು.

ವಿಶ್ವಕಪ್: ಅಖಿಲ್‌ಗೆ ಕಂಚು

ನವದೆಹಲಿ: ಈ ವರ್ಷ ಭಾರತದ ಸ್ಪರ್ಧಿಗಳ ನಿರಾಶಾದಾಯಕ ಪ್ರದರ್ಶನದ ನಡುವೆ ಶೂಟರ್ ಅಖಿಲ್ ಶಿಯೊರಾಣ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನಲ್ಲಿ ಬುಧವಾರ ಪುರುಷರ 50 ಮೀ. ರೈಫಲ್ 3– ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡು ಗಮನ ಸೆಳೆದರು.

ಕರ್ಣಿ ಸಿಂಗ್ ರೇಂಜ್‌ನಲ್ಲಿ ಮಹಿಳೆಯರ 50 ಮೀ. ರೈಫಲ್ 3– ಪೊಸಿಷನ್ಸ್ ಸ್ಪರ್ಧೆಯಲ್ಲಿ ಆಶಿ ಚೋಸ್ಕಿ ಮತ್ತು ನಿಶ್ಚಲ್ ಅವರು ಪದಕದ ಸುತ್ತಿಗೇರಲಿಲ್ಲ. ಇನ್ನೊಂದೆಡೆ 25 ಮೀ. ಸ್ಪೋರ್ಟ್ಸ್ ಪಿಸ್ತೂಲ್‌ನಲ್ಲಿ ಕಂಚಿನ ಪದಕಕ್ಕಾಗಿ ನಡೆದ ಶೂಟ್ ಆಫ್‌ನಲ್ಲಿ ಒಲಿಂಪಿಯನ್ ರಿದಂ ಸಂಗ್ವಾನ್, ಚೀನಾದ ಸ್ಪರ್ಧಿ ಎದುರು ಸೋತು ನಿರಾಶೆ ಅನುಭವಿಸಿದರು.

ಇದರ ಮಧ್ಯೆ ವರ್ಷದ ಈ ಕೊನೆಯ ಸ್ಪರ್ಧೆಯಲ್ಲಿ ಭಾಗಪತ್‌ನ ಅಖಿಲ್, ಚೀನಾದ ಲಿಯು ಯುಕುನ್ ಅವರ ಪ್ರಬಲ ಸವಾಲನ್ನು ಮೀರಿ ನಿಂತು 452.6 ಸ್ಕೋರ್‌ನೊಡನೆ ಮೂರನೇ ಸ್ಥಾನ ಪಡೆದರು. ಯುಕುನ್, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದು, ಇಲ್ಲಿ ನಾಲ್ಕನೇ ಸ್ಥಾನಕ್ಕೆ ಸರಿದರು.

ಹಂಗರಿಯ ಇಸ್ತವಾನ್ ಪೆನಿ (465.3) ತಮ್ಮ ನೆಚ್ಚಿನ ಈ ತಾಣದಲ್ಲಿ ಚಿನ್ನ ಗೆದ್ದುಕೊಂಡರು. ಅವರು 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಸೋಮವಾರ ಬೆಳ್ಳಿ ಪಡೆದಿದ್ದರು.



ಅಖಿಲ್ ಶಿಯೊರಾಣ್

ಅಖಿಲ್ ಒಲಿಂಪಿಕ್ಸ್ ಕೋಟಾ ಪಡೆದಿದ್ದರೂ, ಗಾಯಾಳಾದ ಕಾರಣ ನವದೆಹಲಿ ಮತ್ತು ಭೋಪಾಲ್‌ನಲ್ಲಿ ನಡೆದ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಆಗಿರಲಿಲ್ಲ. 'ನಿರಾಸೆಯಿಂದ ಹೊರಬಂದಿದ್ದೇನೆ. 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೆ ತಯಾರಿ ನಡೆಸಿದ್ದೇನೆ' ಎಂದು ಅಖಿಲ್ ಹೇಳಿದರು.

ಮಂಗಳವಾರ, ಸೋನಮ್ ಮಸ್ಕರ್ ಅವರು ಮಹಿಳೆಯರ 10 ಮೀ. ಏರ್ ರೈಫಲ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಒಲಿಂಪಿಯನ್ ವಿಜಯ್‌ವೀರ್ ಸಿಧು ಮತ್ತು ಅನಿಶ್ ಭಾನವಾಲಾ ಅವರು 25 ಮೀ. ರ್‍ಯಾಪಿಡ್ ಫೈರ್ ಸ್ಪರ್ಧೆಯಲ್ಲಿ ಕ್ರಮವಾಗಿ ಏಳು ಮತ್ತು ಒಂಬತ್ತನೇ ಸ್ಥಾನ ಗಳಿಸಿದರು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Executive-Maintenance/Production

Department : Production
Qualification : BE or Diploma (Printing or Electrical or Mechatronics)
Experience : 4 years and above
Job Location : Kumbalgodu (Bangalore), Mangalore
Requirement:
- Should have hands on experience in maintenance and service of High-speed web offset press, Mail room, utility equipment
- Should be thorough in breakdown maintenance, predictive maintenance, preventive and autonomous maintenance.
- Should be willing to work in shifts including night shift.
- Should be able to communicate both in English and Kannada.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಡೆನ್ಮಾರ್ಕ್ ಓಪನ್ ಟೂರ್ನಿ ಡಬಲ್ಸ್‌ನಲ್ಲಿ ಭಾರತಕ್ಕೆ ಸೋಲು

ಒಡೆನ್ಸ್ (ಪಿಟಿಐ): ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಬುಧವಾರ ಹೋರಾಟದ ನಂತರ ಸೋಲನುಭವಿಸಿದರು. ನಂತರ ಮಿಶ್ರ ಡಬಲ್ಸ್‌ನಲ್ಲಿ ಸುಮೀತ್ ರೆಡ್ಡಿ ಮತ್ತು ಸಿಕ್ಕಿ ರೆಡ್ಡಿ ಅವರೂ ಸೋಲನುಭವಿಸುವ ಮೂಲಕ ಡಬಲ್ಸ್ ವಿಭಾಗದಲ್ಲಿ ಭಾರತದ ಸವಾಲು ಮೊದಲ ಸುತ್ತಿನಲ್ಲೇ ಅಂತ್ಯಗೊಂಡಿತು.

ವಿಶ್ವ ಕ್ರಮಾಂಕದಲ್ಲಿ 21ನೇ ಸ್ಥಾನದಲ್ಲಿರುವ ಟ್ರಿಸಾ ಮತ್ತು ಗಾಯತ್ರಿ ಅವರು ಒಂದು ಗಂಟೆ 14 ನಿಮಿಷಗಳ ಪಂದ್ಯದಲ್ಲಿ 21–19, 17–21, 15–21ರಲ್ಲಿ ಐದನೇ ಶ್ರೆಯಾಂಕದ ಪರ್ಲಿ ತಾನ್– ಮುರಳೀಧರನ್ ತಿನಾ (ಮಲೇಷ್ಯಾ) ಜೋಡಿ ಎದುರು ಸೋಲನುಭವಿಸಿದರು. ಇದರೊಂದಿಗೆ ಆರು ಮುಖಾಮುಖಿಯಲ್ಲಿ ಭಾರತದ ಆಟಗಾರ್ತಿಯರು ಐದನೇ ಬಾರಿ ಮಲೇಷ್ಯಾ ಈ ಜೋಡಿಗೆ ಮಣಿದಂತಾಯಿತು.

ಮಿಶ್ರ ಡಬಲ್ಸ್‌ನಲ್ಲಿ ಸುಮೀತ್ ರೆಡ್ಡಿ– ಸಿಕ್ಕಿ ರೆಡ್ಡಿ ತೀವ್ರ ಹೋರಾಟ ಪ್ರದರ್ಶಿಸಿದರೂ, 22–20, 19–21, 22–24ರಲ್ಲಿ ಕೆನಡಾದ ಕೆವಿನ್ ಲೀ ಮತ್ತು ಇಲಿಯಾನಾ ಝೋಂಗ್ ಅವರಿಗೆ ಮಣಿದರು. ಈ ಪಂದ್ಯ 62 ನಿಮಿಷ ನಡೆಯಿತು.

ಜನವರಿಯಲ್ಲಿ ಮೊದಲ ಕೊಕ್ಕೊ ವಿಶ್ವಕಪ್

ನವದೆಹಲಿ (ಪಿಟಿಐ): ಮೊದಲ ಕೊಕ್ಕೊ ವಿಶ್ವಕಪ್ ಇಲ್ಲಿನ ತ್ಯಾಗರಾಜ ಕ್ರೀಡಾಂಗಣದಲ್ಲಿ ಮುಂದಿನ ಜನವರಿ 13 ರಿಂದ 19ರವರೆಗೆ ನಡೆಯಲಿದೆ ಎಂದು ಆಯೋಜಕರು ಬುಧವಾರ ತಿಳಿಸಿದ್ದಾರೆ.

ಜಾಗತಿಕ ವೇದಿಕೆಯಲ್ಲಿ ದೇಸಿ ಕ್ರೀಡೆಯ ವೈಭವ ಪ್ರದರ್ಶನಕ್ಕೆ ಇದು ಅವಕಾಶವಾಗಿದೆ. ವಿಶ್ವಕಪ್ ಘೋಷಣೆಯ ಭಾಗವಾಗಿ ಮಹಾರಾಷ್ಟ್ರ ಮತ್ತು ಭಾರತ ಇತರೆ ತಂಡದ ನಡುವಣ ಪ್ರದರ್ಶನ ಪಂದ್ಯ ನಡೆಯಿತು. ಮಹಾರಾಷ್ಟ್ರ ತಂಡ 26–24ರಿಂದ ಜಯಗಳಿಸಿತು.

ಇದೇ ಸಮಾರಂಭದಲ್ಲಿ ಟ್ಯಾಗ್‌ಲೈನ್ (#TheWorldGoesKho) ಮತ್ತು ಲೊಗೊ ಅನಾವರಣಗೊಳಿಸಲಾಯಿತು.

ವಿಶ್ವಕಪ್‌ನಲ್ಲಿ ಮಹಿಳಾ ಮತ್ತು ಪುರುಷರ ವಿಭಾಗಗಳಲ್ಲಿ 24 ತಂಡಗಳು ಭಾಗವಹಿಸಲಿವೆ.

ಸೆರೆನಾ ಕುತ್ತಿಗೆಯ ಗೆಡ್ಡೆ ಶಸ್ತ್ರಚಿಕಿತ್ಸೆ

ನ್ಯೂಯಾರ್ಕ್ (ಎಪಿ): ಮಾಜಿ ಟೆನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ತಮ್ಮ ಕುತ್ತಿಗೆ ಭಾಗದಲ್ಲಿದ್ದ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆಸಿಕೊಂಡಿದ್ದಾರೆ.

ತಾವು ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ಸೆರೆನಾ ಸಂದೇಶ ಬರೆದಿದ್ದಾರೆ.

'ದ್ರಾಕ್ಷಿ ಹಣ್ಣಿನ ಗಾತ್ರದ ಗಂಟು ಇತ್ತು. ಕಳೆದ ಮೇನಲ್ಲಿ ನನ್ನ ಕುತ್ತಿಗೆ ಮೇಲೆ ಈ ಗೆಡ್ಡೆ ಇದ್ದಿದ್ದು ಅನುಭವಕ್ಕೆ ಬಂತು. ಎಂಆರ್‌ಐ ಪರೀಕ್ಷೆ ನಡೆಸಲಾಯಿತು. ನಂತರ ಅದು ಬೆಳೆಯತೊಡಗಿದ್ದನ್ನು ಗಮನಿಸಿದೆ. ಆದ್ದರಿಂದ ಶಸ್ತ್ರಚಿಕಿತ್ಸೆ ಮೂಲಕ ತೆಗೆಸಬೇಕಾಯಿತು' ಎಂದು ಬರೆದಿದ್ದಾರೆ.

ಬಯಾಪ್ಸಿ ಸೇರಿ ಎಲ್ಲ ರೀತಿಯ ಪರೀಕ್ಷೆ ಮಾಡಲಾಗಿದೆ. ಕ್ಯಾನ್ಸರ್ ಲಕ್ಷಣಗಳಿಲ್ಲ ಎಂದೂ ಅವರು ಉಲ್ಲೇಖಿಸಿದ್ದಾರೆ.